ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಮಿತ್ರ 43 ಅತ್ಯುತ್ತಮ ಪತ್ರಿಕೋದ್ಯಮ

ಮೇ 4 ಬುಧವಾರ 2022

ಸಂಪುಟ: 43 | ಸಂಚಿಕೆ: 18 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೂಡಲ ಸಂಗಮದಲ್ಲಿ ಬಸವಣ್ಣನ ವಿವಿ ಸ್ಥಾಪನೆ ಸೂಕ್ತ

- ಸಂಸದ ಶ್ರೀನಿವಾಸ್‌ಪ್ರಸಾದ್ ಪ್ರತಿಪಾದನೆ
- ಶೋಷಿತರಿಗೂ ಸಾಂತ್ವನ, ಸಮಾನತೆ ಕಲ್ಪಿಸಿದ ವೀರಶೈವ ಧರ್ಮ
- ವೀರಶೈವ ಜಾತಿಯಲ್ಲ, ಮಾನವನಿಗೆ ಮೋಕ್ಷ ಕಲ್ಪಿಸುವ ಧರ್ಮ
- ಮೈಸೂರಲ್ಲಿ ಭಕ್ತಿಭಾವದ ಬಸವ ಜಯಂತಿ



ಮೈಸೂರು,ಮೇ 3(ಎಂಟಿವೈ)– 12ನೇ ಶತಮಾನದಲ್ಲಿ ಅಸ್ಪೃಶ್ಯತೆ ತೊಡೆದು ಹಾಕಲು ದೊಡ್ಡ ಕ್ರಾಂತಿ ಮಾಡಿದ ಬಸವಣ್ಣನವರ ಹೆಸರನ್ನು ಯಾವುದಾದರೂ ವಿಶ್ವ ವಿದ್ಯಾನಿಲಯಕ್ಕೆ ನಾಮಕರಣ ಮಾಡುವಂತೆ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಒತ್ತಾಯಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅಖಿಲ ಭಾರತ ವೀರ ಶೈವ–ಲಿಂಗಾಯತ ಮಹಾಸಭಾ ಹಾಗೂ ವಿವಿಧ ಬಸವ ಬಳಗಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರ ತತ್ವ ಸಂದೇಶ ▶ 5ನೇ ಪುಟಕ್ಕೆ

ಮುಸ್ಲಿಂ ಬಾಂಧವರಿಂದ ಸಂಭ್ರಮದ ರಂಜಾನ್



ಮೈಸೂರು,ಮೇ 3(ಆರ್‌ಕೆ)–ಎರಡು ವರ್ಷಗಳ ನಂತರ ಮೈಸೂರಲ್ಲಿ ಮುಸ್ಲಿಂ ಬಾಂಧವರು ಸಂಭ್ರಮ ಹಾಗೂ ಭಕ್ತಿ ಭಾವದಿಂದ ಮಂಗಳವಾರ ರಂಜಾನ್ ಹಬ್ಬವನ್ನು ಆಚರಿಸಿದರು.

ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಲಾಕ್‌ಡೌನ್ ನಂತರ ನಿರ್ಬಂಧವಿದ್ದ ಕಾರಣ ಎರಡು ವರ್ಷ ಮುಕ್ತವಾಗಿ ಹಬ್ಬ ಆಚರಿಸದ ಮುಸ್ಲಿಮರು, ಇಂದು ಶ್ರದ್ಧಾ ಭಕ್ತಿಯಿಂದ ರಂಜಾನ್ ಆಚರಿಸಿ ಸಡಗರದಿಂದ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಜಮಾಯಿಸಿದ ಸಾವಿರಾರು ಮಂದಿ ರಂಜಾನ್ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಐಕ್ಯತೆ, ಸಹಬಾಳ್ವೆ, ಸಹೋದರತ್ವ, ಸಮಾನತೆ, ಶಾಂತಿ, ▶ 8ನೇ ಪುಟಕ್ಕೆ

ಕೃಷಿ ಹೊಂಡಕ್ಕೆ ಕಾಲು ಜಾರಿ ಬಿದ್ದು ಸಹೋದರಿಯರ ಸಾವು

ಸೀಬೆಹಣ್ಣು ಕೀಳುವಾಗ ದುರಂತ



ಗುಂಡ್ಲುಪೇಟೆ, ಮೇ 3(ಸೋಮ್.ಜಿ)–ಸಹೋದರಿಯರು ತಮ್ಮ ಜಮೀನಿನಲ್ಲಿ ಸೀಬೆಹಣ್ಣು ಕೀಳಲು ಹೋಗಿ ಕೃಷಿ ಹೊಂಡಕ್ಕೆ ಕಾಲು ಜಾರಿ ಬಿದ್ದು ಸಾವಿಗೀಡಾದ ಹೃದಯವಿದ್ರಾವಕ ಘಟನೆ ತಾಲೂಕಿನ ಕೆಬ್ಬೇಪುರ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಗ್ರಾಮದ ರೇಚಣ್ಣ ಅವರ ಪುತ್ರಿಯರಾದ ಕೆಬ್ಬೇಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಪೂಜಾ(13) ಹಾಗೂ ಹುಂಡೀಪುರ ಸರ್ಕಾರಿ ಪ್ರೌಢಶಾಲೆಯ 9ನೇ ತರಗತಿಯ ಪುಣ್ಯ (14) ಮೃತಪಟ್ಟ ಬಾಲಕಿಯರು. ಸಹೋದರಿಯರಿಬ್ಬರೂ ಬೆಳಗ್ಗೆ ತಮ್ಮ ಜಮೀನಿನಲ್ಲಿನ ಕೃಷಿ ಹೊಂಡದ ಬದಿಯಲ್ಲಿದ್ದ ಸೀಬೆಗಿಡದಲ್ಲಿ ▶ 8ನೇ ಪುಟಕ್ಕೆ

ನಾಯಕತ್ವ ಬದಲಾವಣೆ ಬದಲು ಸಂಪುಟ ಸರ್ಜರಿಗೆ ನಿರ್ಧಾರ

- ಅಮಿತ್ ಷಾ ರಾಜ್ಯ ಭೇಟಿಯಲ್ಲಿ ರಾಜಕೀಯ ಚರ್ಚೆಯೇ ಆಗಲಿಲ್ಲ
- ಪ್ರಮುಖ ನಾಯಕರ ಒತ್ತಡ; ವ್ಯತಿರಿಕ್ತ ಪರಿಣಾಮದ ಎಚ್ಚರಿಕೆ ಹಿನ್ನೆಲೆ
- ಸಂಪುಟ ಪುನರ್ರಚನೆ ಸಂಬಂಧ ವಾರಾಂತ್ಯಕ್ಕೆ ಸಿಎಂ ದೆಹಲಿಗೆ

ಬೆಂಗಳೂರು,ಮೇ3–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಯಕತ್ವ ಬದಲಾವಣೆಯ ಪ್ರಸ್ತಾಪವನ್ನು ಕೈಬಿಟ್ಟಿರುವ ಕೇಂದ್ರದ ಬಿಜೆಪಿ ವರಿಷ್ಠರು, ಸಂಪುಟ ಪುನರ್ರಚನೆ ಮೂಲಕ ಇನ್ನುಳಿದ ಒಂದು ವರ್ಷ ಉತ್ತಮ ಆಡಳಿತ ನೀಡುವ ನಿರ್ಧಾರಕ್ಕೆ ಬಂದಿದ್ದಾರೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟಕ್ಕೆ ಯುವ ಪಡೆ ಸೇರ್ಪಡೆ ಮೂಲಕ ಆಡಳಿತಕ್ಕೆ ಚುರುಕು ಮುಟ್ಟಿಸುವ ಉದ್ದೇಶವನ್ನು ವರಿಷ್ಠರು ಹೊಂದಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಾರಾಂತ್ಯಕ್ಕೆ ಮುಖ್ಯಮಂತ್ರಿ ದೆಹಲಿಗೆ ತೆರಳುವ ಸಾಧ್ಯತೆ ಇದೆ.

ರಾಜ್ಯ ಪ್ರವಾಸ ಕೈಗೊಂಡಿದ್ದ ಗೃಹ ಸಚಿವ ಅಮಿತ್ ಷಾ, ಇಂದು ರಾಜ್ಯ ಪ್ರಮುಖ ನಾಯಕರೊಂದಿಗೆ ಹಮ್ಮಿಕೊಳ್ಳಲಾಗಿದ್ದ ವಿಶೇಷ ಸಭೆಯನ್ನು ರದ್ದುಗೊಳಿಸುವ ಮೂಲಕ ನಾಯಕತ್ವದ ▶ 4ನೇ ಪುಟಕ್ಕೆ

ರಾಜ್ಯದಲ್ಲಿ ಸಿಎಂ ಬದಲಾವಣೆ ಇಲ್ಲ



ಬೆಂಗಳೂರು: ರಾಜ್ಯದಲ್ಲಿ ಸಿಎಂ ಬದಲಾವಣೆ ಇಲ್ಲ, ಬಸವರಾಜ ಬೊಮ್ಮಾಯಿಯವರು ಕಾಮನ್ ಮ್ಯಾನ್ ಸಿಎಂ, ಜನತೆಗೆ ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂದು ಸಂಪೂರ್ಣ ಅಂಕಗಳನ್ನು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ನೀಡಿದ್ದಾರೆ.

ಈ ಮೂಲಕ ರಾಜ್ಯದಲ್ಲಿ ಬಿಜೆಪಿಯಲ್ಲಿ ಮತ್ತೆ ಸಿಎಂ ಬದಲಾಗುತ್ತದೆಯೇ ಎಂಬ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ಬೊಮ್ಮಾಯಿಯವರನ್ನು ಸಿಎಂ ಸ್ಥಾನದಿಂದ ಬದಲಾಯಿಸುವ ಪ್ರಶ್ನೆಯೇ ಇಲ್ಲ, ನಾಯಕತ್ವ ಬದಲಾವಣೆ ಕೇವಲ ಕಪೋಲಕಲ್ಪಿತ. ಬೊಮ್ಮಾಯಿಯವರೇ ಮತ್ತೆ ಸಿಎಂ ಆಗಬೇಕೆಂದು ಜನ ಬಯಸುತ್ತಿದ್ದಾರೆ ಎಂದು ಹೇಳಿದ್ದಾರೆ. ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಸಚಿವ ಅಶ್ವಥ್‌ನಾರಾಯಣ ಪಾತ್ರದ ಬಗ್ಗೆ ಕೇಳಿದಾಗ, ಕಾಂಗ್ರೆಸ್ ಪಕ್ಷ ಪಿತೂರಿ ನಡೆಸುವ ಪಕ್ಷವಾಗಿದೆ, ಕಾಂಗ್ರೆಸ್‌ನ ಪಿತೂರಿಗಳಿಗೆ ಉತ್ತರಿಸುವ ಅವಶ್ಯಕತೆಯಿಲ್ಲ ಎಂದರು.

ಎರಡ್ಮೂರು ದಿನದಲ್ಲಿ ಸಂಪುಟ ಪುನರ್ರಚನೆ



ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬದಲಾಗದಿದ್ದರೂ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ರಚನೆ ಆಗುವುದು ಬಹುತೇಕ ಖಚಿತ ಎಂಬುದು ಆ ಪಕ್ಷದ ಪ್ರಮುಖ ನಾಯಕರ ಮಾತುಗಳಿಂದಲೇ ದೃಢವಾಗುತ್ತಿದೆ. ರಾಜ್ಯ ಪ್ರವಾಸದಲ್ಲಿದ್ದ ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಅವರು ಸಂಪುಟ ಸರ್ಜರಿ ಮಾಡಿಯೇ ದೆಹಲಿಗೆ ತೆರಳುತ್ತಾರೆ ಅಥವಾ ದೆಹಲಿಗೆ ಹೋದ ಕೂಡಲೇ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು ಹೇಳಲಾಗುತ್ತಿದೆ. ಅದಕ್ಕೆ ಪುಷ್ಟಿ ನೀಡುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿಕೆ ನೀಡಿದ್ದಾರೆ. ಸಚಿವ ಸಂಪುಟ ವಿಸ್ತರಣೆ ಇನ್ನೆರಡು–ಮೂರು ದಿನಗಳಲ್ಲಿ ಆಗಬಹುದು ಎಂಬ ವಿಶ್ವಾಸ ನನಗಿದೆ. ಆ ಬಗ್ಗೆ ಅಂತಿಮ ತೀರ್ಮಾನವನ್ನು ಅಮಿತ್ ಶಾ ತೆಗೆದುಕೊಂಡೇ ಇಲ್ಲಿಗೆ ಬಂದಿದ್ದಾರೆ ಎಂದು ನಾನು ಭಾವಿಸಿದ್ದೇನೆ ಎಂದು ಯಡಿಯೂರಪ್ಪ ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಾ ಹೇಳಿದ್ದರು. ಸಚಿವ ಸಂಪುಟ ವಿಸ್ತರಣೆ ಆಗುತ್ತದೆಯೇ ಹೊರತು ಮುಖ್ಯಮಂತ್ರಿ ಬದಲಾವಣೆ ಇಲ್ಲವೇ ಇಲ್ಲ, ಅವುಗಳೆಲ್ಲ ಊಹಾಪೋಹಗಳಷ್ಟೆ ಎಂದು ಹೇಳಿದ್ದಾರೆ.

ಜೆಡಿಎಸ್ ತೊರೆದು ಬಿಜೆಪಿ ಸೇರಿದ ಹೊರಟ್ಟಿ

ಶೀಘ್ರವೇ ಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ




ಬೆಂಗಳೂರು, ಮೇ 3– ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಂಗಳವಾರ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದಾರೆ.


ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೊರಟ್ಟಿ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್‌ಕಟೀಲ್, ಶಾಸಕ ಜಗದೀಶ ಶೆಟ್ಟರ್, ಹಲವು ಸಚಿವರು, ಶಾಸಕರು ಉಪಸ್ಥಿತರಿದ್ದರು.

ಜನತಾ ಪರಿವಾರದಲ್ಲಿ ರಾಜಕೀಯ ಜೀವನ ಆರಂಭಿಸಿದ್ದ ಹೊರಟ್ಟಿ, ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಸತತವಾಗಿ 7 ಬಾರಿ ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಮುಂದಿನ ಚುನಾವಣೆಯನ್ನು ಬಿಜೆಪಿಯಿಂದ ಎದುರಿಸಲು ನಿರ್ಧರಿಸಿದ್ದಾರೆ. ಬಿಜೆಪಿ ಸೇರಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಸವರಾಜ ಹೊರಟ್ಟಿ, 'ಜೆಡಿಎಸ್ ಪಕ್ಷದ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮತದಾರರ ಅಭಿಪ್ರಾಯದಂತೆ ಬಿಜೆಪಿ ಸೇರಿದ್ದೇನೆ. ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದರು.

ಕುಸಿಯುತ್ತಿದೆ ಐತಿಹಾಸಿಕ ಶ್ರೀರಂಗಪಟ್ಟಣ ಕೋಟೆ







● ವಿನಯ್ ಕಾರೇಕುರ

ಶ್ರೀರಂಗಪಟ್ಟಣ,ಮೇ 3–ಹತ್ತಾರು ಯುದ್ಧಗಳಿಗೆ ರಣಾಂಗಣವಾಗಿದ್ದ ಶ್ರೀರಂಗಪಟ್ಟಣದ ಕೋಟೆ ಯಾವುದಕ್ಕೂ ಜಗ್ಗದೆ ಕುಗ್ಗದೇ ಇದ್ದದ್ದು, ಈಗ ನಿರ್ವಹಣೆ ಇಲ್ಲದೆ ಕುಸಿಯುವ ದುಸ್ಥಿತಿಗೆ ತಲುಪಿದೆ. ಎರಡು ಮೂರು ದಿನಗಳಿಂದ ಭಾರೀ ಗಾಳಿ ಸಹಿತ ಸುರಿದ ಧಾರಾಕಾರ ಮಳೆಗೆ ಪಟ್ಟಣದ ಐತಿಹಾಸಿಕ ಕೋಟೆಯ ಪೂರ್ವ ದ್ವಾರದ ಮಧ್ಯ ಭಾಗದಲ್ಲಿ ಬಿರುಕು ಕಾಣಿಸಿಕೊಂಡು ಒಂದು ಭಾಗ ಕುಸಿದಿದೆ. ಇದರೊಂದಿಗೆ ಇತಿಹಾಸಕಾರರ ಚಿಂತೆಗೀಡು ಮಾಡಿದೆ.

ದ್ವೀಪ ಪಟ್ಟಣವನ್ನು ಸುತ್ತುವರೆದಿರುವ 6.5 ಕಿಮೀ ಉದ್ದದ ಕೋಟೆ, ಪ್ರತಿ ಮಳೆಗಾಲದಲ್ಲಿ ಅಷ್ಟಿಷ್ಟು ಕುಸಿದು ಬೀಳುತ್ತಿದೆ. ಅಳಿದುಳಿದ ಕೋಟೆ ಮತ್ತು ಬುರುಜುಗಳ ಮೇಲೆ ಮರಗಳು ಬೆಳೆದು, ತಳಗುಂಟ ಬೇರು ಬಿಟ್ಟು ಅಭೇದ್ಯ ಕೋಟೆಯನ್ನೇ ಜಗ್ಗಿಸುತ್ತಿವೆ. ಕೋಟೆಯ ಮಧ್ಯದ ಕಂದಕದ ಅಲ್ಲಲ್ಲಿ ಮಲಿನ ನೀರು ಮಡುಗಟ್ಟಿದ್ದು, ಶೀತ ಹೆಚ್ಚಾಗಿ ಕೋಟೆಯ ತಳಪಾಯವನ್ನು ಶಿಥಿಲಗೊಳಿಸುತ್ತಿದೆ. ಪುರಸಭೆ ಕಚೇರಿಯ ಹಿಂದೆ ಮತ್ತು ಆನೆ ಕೋಟೆ ದ್ವಾರದ ಬಳಿ ವರ್ಷದ ಹಿಂದೆ ಕುಸಿದ ಕೋಟೆಯ ಭಾಗ ದುರಸ್ತಿಯಾಗಿದ್ದರೂ ನಿರ್ವಹಣೆ ಇಲ್ಲದೆ ಅಂದಗೆಟ್ಟಿದೆ.

ಭಾರತದ ಅತ್ಯಂತ ಸದೃಢ ಮತ್ತು 15ನೇ ಶತಮಾನದಲ್ಲೇ ಮಿಲಿಟರಿ ತಂತ್ರಜ್ಞಾನವನ್ನು ಬಳಸಿ ಕಟ್ಟಿದ ಭಾರತದ 2ನೇ ಕೋಟೆ ಶ್ರೀರಂಗಪಟ್ಟಣ ಮಹಾಕೋಟೆ. ಇಂತಹ ಇತಿಹಾಸ ಪ್ರಸಿದ್ಧ ಕೋಟೆ ಇಂದು ರಾಜಕೀಯ ನಾಯಕರ ಹಾಗೂ ಚಲನಚಿತ್ರಗಳ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳ ಹಾವಳಿಯಿಂದ ಅದರ ಸಂಪೂರ್ಣ ಚಿತ್ರಣವೇ ಬದಲಾಗಿ ಹೋಗಿದೆ. ಇದರ ಜೊತೆಗೆ ಕೋಟೆಯ ಎದುರು ಇರುವ ಎರಡು ಕುದುರೆ ಹಾಗೂ ಸೈನಿಕರ ಮನೆಗಳು ಈಗ ಮೀನು ಮತ್ತು ಸೀಗಡಿ ಮಾರುವ ಅನಧಿಕೃತ ಮಳಿಗೆಗಳಾಗಿ ಪರಿವರ್ತನೆ ಆಗಿರುವುದು ಆಡಳಿತ ವ್ಯವಸ್ಥೆ ಕಾರ್ಯವೈಖರಿಗೆ ▶ 8ನೇ ಪುಟಕ್ಕೆ

> “ಶ್ರೀರಂಗಪಟ್ಟಣ ವಿಶ್ವ ಪ್ರಸಿದ್ಧ ಪ್ರವಾಸಿ ತಾಣ. ಯಾತ್ರಾ ಸ್ಥಳವೂ ಹೌದು. ಆದರೆ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿಯಾಗಿಲ್ಲ. ಪ್ರವಾಸಿಗರು, ಯಾತ್ರಾರ್ಥಿಗಳಿಗೆ ಮೂಲ ಸೌಕರ್ಯಗಳಿಲ್ಲ. ಮಾರ್ಗಸೂಚಿಯೂ ಇಲ್ಲ. ಗಂಗ ಅರಸರಿಂದ ಟಿಪ್ಪು ಸುಲ್ತಾನ್‌ವರೆಗೆ 700 ವರ್ಷಗಳ ಕಾಲ ಅರಸರ ಆಳ್ವಿಕೆಗೆ ಒಳಪಟ್ಟಿದ್ದ, 1610ರಿಂದ 1799ರವರೆಗೆ ರಾಜಧಾನಿಯಾಗಿದ್ದ ಈ ಪಾರಂಪರಿಕ ಪಟ್ಟಣದ ಅಭಿವೃದ್ಧಿಗಾಗಿ ಸರ್ಕಾರ 'ಶ್ರೀರಂಗಪಟ್ಟಣ ಅಭಿವೃದ್ಧಿ ಪ್ರಾಧಿಕಾರ' ರಚಿಸಬೇಕು ಎಂಬುದು ಇತಿಹಾಸಕಾರರ ಒತ್ತಾಯವಾಗಿದೆ.

ಬಂಡಿಪಾಳ್ಯ ಎಪಿಎಂಸಿ ಪ್ರಾಂಗಣದಲ್ಲಿ ಏಜೆಂಟ್ ಕ್ಯಾಪ್ಸಿಕಮ್ ರವಿ ಬರ್ಬರ ಹತ್ಯೆ

- ಮಚ್ಚು, ಲಾಂಗ್‌ನಿಂದ ಮನಸೋ ಇಚ್ಛೆ ಕೊಚ್ಚಿ ಕೊಲೆ
- ವ್ಯವಹಾರಿಕ ವೈಷಮ್ಯಕ್ಕೆ ಹೊಂಚು ಹಾಕಿ ಕೊಂದಿರುವ ಶಂಕೆ
- ಹತ್ಯೆಗೆ ಮುನ್ನ ಸಿಸಿ ಕ್ಯಾಮರಾ ನಿಷ್ಕ್ರಿಯಗೊಳಿಸಿದ್ದಾರೆ
- ಓರ್ವ ಆರೋಪಿ ವಶಕ್ಕೆ; ಖಚಿತಪಡಿಸದ ಪೊಲೀಸರು




ಎಂ.ಜೆ.ರವಿ

ಮೈಸೂರು,ಮೇ3(ಎಸ್‌ಬಿಡಿ, ಜಿಎ)– ಮೈಸೂರು ಹೊರವಲಯದ, ಚಾಮುಂಡಿಬೆಟ್ಟ ತಪ್ಪಲಲ್ಲಿನ ಬಂಡಿಪಾಳ್ಯ ಎಪಿಎಂಸಿ ಆವರಣದಲ್ಲಿ ಮಂಗಳವಾರ ಸಂಜೆ ಏಜೆಂಟ್ ಒಬ್ಬರನ್ನು ದುಷ್ಕರ್ಮಿಗಳು ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಶ್ರೀರಂಗಪಟ್ಟಣ ತಾಲೂಕು ಮಹದೇವಪುರದ ಜೋಗಿಗೌಡ ಅವರ ಪುತ್ರ ಎಂ.ಜೆ. ರವಿ ಅಲಿಯಾಸ್ ಕ್ಯಾಪ್ಸಿಕಮ್ ರವಿ (35) ಹತ್ಯೆಯಾದವರು. ಹಲವು ವರ್ಷಗಳಿಂದ ಎಪಿಎಂಸಿಯಲ್ಲಿ ಹಣ್ಣು ಮತ್ತು ತರಕಾರಿ ಏಜೆಂಟ್ ಆಗಿದ್ದ ಇವರು ಸಮೀಪದ ಹೆಳವರಹುಂಡಿ ಗ್ರಾಮದಲ್ಲಿ ಪತ್ನಿ ಹಾಗೂ ಮೂವರು ಮಕ್ಕಳೊಂದಿಗೆ ನೆಲೆಸಿದ್ದರು. ಎಪಿಎಂಸಿ ಆವರಣದ ತರಕಾರಿ ಮಾರುಕಟ್ಟೆಯ ತಮ್ಮ ಮಳಿಗೆಯ ಕಚೇರಿಯಲ್ಲಿ ರವಿ ಕುಳಿತಿದ್ದಾಗ ಮಂಗಳವಾರ ಸಂಜೆ 6 ಗಂಟೆ ವೇಳೆಗೆ ಮೂರ್ನಾಲ್ಕು ಮಂದಿ ದುಷ್ಕರ್ಮಿಗಳು ಒಳಗೆ ನುಗ್ಗಿ ಏಕಾಏಕಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ತಲೆ ಹಾಗೂ ಕತ್ತಿನ ಭಾಗಕ್ಕೆ ಮನಸೋ ಇಚ್ಛೆ ಕೊಚ್ಚಿದ್ದು, ತಲೆ ಛಿದ್ರವಾಗಿದೆ. ದಾಳಿಗೂ ಮುನ್ನ ಆ ಮಳಿಗೆಯ ನಾಲ್ಕು ಕಡೆ ಅಳವಡಿಸಿದ್ದ ಸಿಸಿಟಿವಿ ಕ್ಯಾಮರಾಗಳನ್ನು ನಿಷ್ಕ್ರಿಯಗೊಳಿಸಿದ್ದಾರೆ. ಸದಾ ಜನಜಂಗುಳಿಯಿರುವ ಮಾರುಕಟ್ಟೆಯಲ್ಲಿ ದುಷ್ಕರ್ಮಿಗಳು ನಿರ್ಭೀತಿಯಿಂದ ಅಟ್ಟಹಾಸ ಮೆರೆದಿದ್ದು, ಜನ, ವ್ಯಾಪಾರಸ್ಥರು ಭಯಭೀತರಾಗಿದ್ದಾರೆ.

ವಿಷಯ ತಿಳಿದು ಎಸ್ಪಿ ಆರ್.ಚೇತನ್, ಎಎಸ್‌ಪಿ ಶಿವಕುಮಾರ್ ಆರ್.ದಂಡಿನ, ದಕ್ಷಿಣ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಶಶಿಕುಮಾರ್ ▶ 8ನೇ ಪುಟಕ್ಕೆ



ಬಸವ ಜಯಂತಿಯ ಪ್ರಯುಕ್ತ ಮಂಗಳವಾರ ನಮ್ಮ ಬಸವ ಸೇನೆ ವತಿಯಿಂದ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿನ ಶ್ರೀ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನೆರೆದಿದ್ದ ಜನರಿಗೆ ಸಿಹಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ಬಸವ ಸೇನೆಯ ರಾಜ್ಯಾಧ್ಯಕ್ಷ ಮನು ಶೈವ್, ಪದಾಧಿಕಾರಿಗಳಾದ ಮಧು, ಮಾದೇಶ್, ಅನಿಲ್, ಶಿವು ಇತರರು ಉಪಸ್ಥಿತರಿದ್ದರು.

ಹಿರಿಯ ರಂಗಕರ್ಮಿ ಪ್ರಸನ್ನ ನಿರ್ದೇಶನದಲ್ಲಿ 'ಅಯೋಧ್ಯಾ ಕಾಂಡ' ನಾಟಕ

ಕಲಾಮಂದಿರದ ಕಿರು ರಂಗಮಂದಿರದಲ್ಲಿ ನಾಳೆಯಿಂದ ಮೂರು ದಿನ ಪ್ರದರ್ಶನ


ನಾಟಕದ ಅಭ್ಯಾಸನಿರತ ರಂಗಕರ್ಮಿಗಳು.


ಮೈಸೂರು, ಮೇ 3 (ಆರ್‌ಕೆಬಿ)– ಹಿರಿಯ ರಂಗಕರ್ಮಿ ಪ್ರಸನ್ನ ನಿರ್ದೇಶನದಲ್ಲಿ ವಾಲ್ಮೀಕಿ ರಾಮಾಯಣ ಆಧಾರಿತ 'ಅಯೋಧ್ಯಾ ಕಾಂಡ' ನಾಟಕ ಪ್ರದರ್ಶನ ಮೇ 5ರಿಂದ 8ರವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ. ಈ ವಿಷಯವನ್ನು ರಂಗಕರ್ಮಿ ಪ್ರಸನ್ನ ಮಂಗಳವಾರ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಟಕದಲ್ಲಿ ರಂಗಾಯಣದ ಹಿರಿಯ ಕಲಾವಿದ ಪ್ರಶಾಂತ್ ಹಿರೇಮಠ್, ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಪದವಿ ಪಡೆದ ಸಿ.ಆರ್.ಪದ್ಮಶ್ರೀ, ಕಥೆಗಾರ ಹಾಗೂ ಸಂಗೀತಗಾರ ಅನುಪ್ ಶೆಟ್ಟಿ, ರಂಗವಲ್ಲಿ ತಂಡದ ವಿಶ್ವಾಸ್, ಗಿಟಾರ್ ಕಲಾವಿದ ಸುಂದರೇಶ್ (ಮುನ್ನ) ಇನ್ನಿತರು ಅಭಿನಯಿಸಲಿದ್ದಾರೆ ಎಂದರು.

ಇಂದು ಇಡೀ ವಿಶ್ವ ಸಂಕಟದಲ್ಲಿ ಸಿಲುಕಿದೆ. ಧರ್ಮ ದ್ವೇಷವೇ ಈ ಸಂಕಟಕ್ಕೆ ಕಾರಣವಾಗಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ ಇವರೆಲ್ಲರನ್ನು ಪರಸ್ಪರ ಪ್ರೀತಿಯಿಂದ ಸ್ವೀಕರಿಸದೆ ದ್ವೇಷ ಮನೆ ಮಾಡುವಂತೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಪರಸ್ಪರ ಪ್ರೀತಿ ಮೂಡಿಸುವ ಉದ್ದೇಶವಿದೆ. ಹಾಗಾಗಿ ತಮ್ಮ ನವೋದಯ ತಂಡ ರಾಮಾಯಣದ ಪ್ರಸಂಗವನ್ನು ಆಯ್ಕೆ ಮಾಡಿಕೊಂಡಿದೆ. 'ಅಯೋಧ್ಯಾ ಕಾಂಡ' ನಾಟಕವನ್ನು ಆಧರಿಸಿ ಜನರಲ್ಲಿ ಪ್ರೀತಿ ಬಿತ್ತುವ ಪ್ರಯತ್ನ ಮಾಡಲಿದೆ ಎಂದು ಹೇಳಿದರು.

ರಾಷ್ಟ್ರಕವಿ ಕುವೆಂಪು ಹೇಳುವಂತೆ 'ರಾಮ ದೊಡ್ಡವನು, ಆದರೆ ರಾಮಾಯಣ ರಾಮನಿಗಿಂತ ದೊಡ್ಡದು'. ರಾಮಾಯಣ ಹಾಗೂ ರಾಮರಾಜ್ಯಗಳ ಪರಿಕಲ್ಪನೆಯನ್ನು ಕಡೆಗಣಿಸಿರುವ ನಾವು ರಾಮ, ಏಸು, ಪೈಗಂಬರರ ಎಲ್ಲರ ದುರ್ಬಳಕೆ ಮಾಡುತ್ತಿದ್ದೇವೆ. ರಾಮಾಯಣದಿಂದ ನಾವು ಆಯ್ದುಕೊಂಡಿರುವ ಪ್ರಸಂಗವು ಜಗ, ಅಸಹನೆ, ಅಧಿಕಾರ ವ್ಯಾಮೋಹ ಇತ್ಯಾದಿಗಳ ದುರಂತವನ್ನು ತುಂಬ ಮಾರ್ಮಿಕವಾಗಿ ಚಿತ್ರಿಸುತ್ತದೆ. ರಾಮ ಸೀತೆ ಲಕ್ಷ್ಮಣರು ಅಸಹನೆಗೆ ತದ್ವಿರುದ್ಧವಾದ ನಿಲುವು ತಾಳುತ್ತಾರೆ. ಆಶ್ರಮಗಳಿರುವ ಹಾಗೂ ಶ್ರಮಜೀವಿಗಳು ಬದುಕಿರುವ ಹಳ್ಳಿಗಾಡಿಗೆ ನಡೆದು ನಾವೂ ನಡೆಯಬೇಕಿರುವ ಹಾದಿಯ ಸೂಚನೆ ನೀಡುತ್ತಾರೆ ಎಂದರು.

'ನವೋದಯ'ವನ್ನು ರಂಗಭೂಮಿ ಮೂಲಕ ಸಾಧಿಸುವ ಉದ್ದೇಶ



ಹೆಚ್ಚು ಕಡಿಮೆ ಎರಡು ದಶಕಗಳ ನಂತರ ನಾನು ಮತ್ತೆ ರಂಗಭೂಮಿಗೆ ಹಿಂದಿರುಗುತ್ತಿದ್ದೇನೆ. ಕೆಲವು ಯುವ ಗೆಳೆಯರೊಂದಿಗೆ ಸೇರಿ ಒಂದು ವೃತ್ತಿಪರ ತಂಡವನ್ನು ಮೈಸೂರಿನಲ್ಲಿ ಆರಂಭಿಸಿದ್ದೇನೆ. ತಂಡಕ್ಕೆ ನವೋದಯ ಎಂದು ಹೆಸರಿಟ್ಟಿದ್ದೇನೆ. ವಚನ ಚಳವಳಿ ಹಾಗೂ ದಾಸ ಸಾಹಿತ್ಯ ಚಳವಳಿಗಳ ನಂತರದಲ್ಲಿ ಕನ್ನಡ ಭಾಷೆ, ಸಮಾಜ ಹಾಗೂ ಸಂಸ್ಕೃತಿಗಳನ್ನು ಸಮೃದ್ಧಗೊಳಿಸಿದ ಮಹತ್ವದ ಚಳವಳಿ ನವೋದಯ. ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಮಧುರಚೆನ್ನ ಹೀಗೆ ಹಲವು ಹಿರಿಯರು ಆ ಕಾಲದಲ್ಲಿ ಸಮನ್ವಯ ಸಿದ್ಧಾಂತದ ಮೂಲಕ ಚಳವಳಿ ಕಟ್ಟಿದರು. ಆಧುನಿಕತೆಯ ಒಳ್ಳೆಯ ಗುಣಗಳನ್ನು ಸ್ವೀಕರಿಸಿದರು. ದುರ್ಗುಣಗಳನ್ನು ನಯವಾಗಿ ತಿರಸ್ಕರಿಸಿದರು. ಜಾತಿ ವ್ಯವಸ್ಥೆ ಇರಬಹುದು, ವರ್ಗ ವ್ಯವಸ್ಥೆ ಇರಬಹುದು, ಇಂಗ್ಲಿಷ್ ಹೇರಿಕೆ ಇರಬಹುದು ಅಥವಾ ಯಂತ್ರ ನಾಗರಿಕತೆ ಇರಬಹುದು. ಇವುಗಳನ್ನು ನಯವಾಗಿ ತಿರಸ್ಕರಿಸುತ್ತಲೇ, ಅಸಾಧಾರಣ ಸಾಹಿತ್ಯ ಸೃಷ್ಟಿ ಮಾಡಿದ ನವೋದಯ. ನವೋದಯವನ್ನು ಈ ಬಾರಿ ರಂಗಭೂಮಿ ಮೂಲಕ ಸಾಧಿಸಬೇಕು ಎಂಬುದು ನಮ್ಮ ಆಶಯವಾಗಿದೆ.

– ಪ್ರಸನ್ನ, ಹಿರಿಯ ರಂಗ ನಿರ್ದೇಶಕ

ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಅವರ ಎರಡನೇ ವರ್ಷದ 'ನೆನಪಿನೋತ್ಸವ'

ಎಲ್ಲಾ ಕವಿಗಳ ಹೆಸರಲ್ಲೂ ಪುರಸ್ಕಾರ ನೀಡಬೇಕು: ಡಾ.ಸಿಪಿಕೆ ಅಭಿಮತ



ಮೈಸೂರು,ಮೇ 3(ಆರ್‌ಕೆಬಿ)–ಪದ್ಯ ಕವಿ ಎಂದೇ ಖ್ಯಾತಿಗಳಿಸಿರುವ ನಿಸಾರ್ ಅಹಮದ್ ಅವರು ಗದ್ಯ ಲೇಖಕರು ಹೌದು. ಲೇಖಕ ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಬೆಳೆಯಲು ಕಾವ್ಯ ಅನುಸಂಧಾನ ನಡೆಯಬೇಕು. ಅವರಿಗೆ ಪ್ರಶಸ್ತಿ ನೀಡಬೇಕು. ಎಲ್ಲಾ ಕವಿಗಳ ಹೆಸರಲ್ಲಿ ಪುರಸ್ಕಾರ ಕೊಡಬೇಕು. ಇದರಲ್ಲಿ ರಾಜಕೀಯ ನುಸುಳಬಾರದು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ (ಸಿಪಿಕೆ) ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಮಂಗಳವಾರ ನಿತ್ಯೋತ್ಸವ ಕವಿ ನಿಸಾರ್ ಅಹಮದ್ ಅವರ 2ನೇ ವರ್ಷದ 'ನೆನಪಿನೋತ್ಸವ' ಹಾಗೂ ಸಾಧಕರಿಗೆ ಕವಿ ನಿಸಾರ್ ಅಹಮದ್ – ನಿತ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾರವತ್ತಾದ ಕಾವ್ಯ ಕೊಟ್ಟ ಮಹನೀಯ ನಿಸಾರ್ ಅಹಮದ್. ಒಮ್ಮೆ ಯಾರೋ ನೀವು ಉರ್ದು ಭಾಷೆಯಲ್ಲಿ ಯಾಕೆ ಕಾವ್ಯ ಬರೆಯುವುದಿಲ್ಲ ಎಂದಿದ್ದಕ್ಕೆ ನಿಸಾರ್ ಅವರು, ಕಾವ್ಯ ಬರೆಯುವಷ್ಟು ಉರ್ದು ಬರುವುದಿಲ್ಲ ಎಂದಿದ್ದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾತನಾಡಿ, 'ಜೋಗದ ಸಿರಿ ಬೆಳಕಿನಲ್ಲಿ...' ನಿಸಾರ್ ಅಹಮದ್ ಅವರಿಗೆ ಜನಪ್ರಿಯತೆ ತಂದುಕೊಟ್ಟ ಕವಿತೆ. ನಿತ್ಯೋತ್ಸವ ಕವಿತೆ ಮೂಲಕ ನಿಸಾರ್ ಅಹಮದ್ ಅವರು ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರು ಪ್ರತಿಭಾವಂತ ಕವಿ. ಭೂಗರ್ಭಶಾಸ್ತ್ರ ಓದಿದರೂ ಸಾಹಿತ್ಯ ಓದಿಕೊಂಡು ಕವಿಯಾದರು ಎಂದರು.

ಕನ್ನಡದ ಹಬ್ಬ ಎಲ್ಲೇ ನಡೆಯಲಿ 'ನಿತ್ಯೋತ್ಸವ' ಹಾಡಿಲ್ಲದೆ ಕಾರ್ಯಕ್ರಮ ಪೂರ್ಣಗೊಳ್ಳುವುದಿಲ್ಲ. ಆ ಮಟ್ಟಿಗೆ ಅವರು ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದರು. ನಿಸಾರ್ ಅಹಮದ್ ಹೆಸರು ಚಿರಸ್ಥಾಯಿಯಾಗಿ ಇರಲು ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಪ್ರತಿವರ್ಷ ಪ್ರಶಸ್ತಿ ನೀಡುತ್ತಿರುವುದು ಸಂತಸದ ವಿಚಾರ ಎಂದು ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎನ್.ಎಂ.ನಂದೀಶ್ ಹಂಚೆ ಮಾತನಾಡಿ, ಇಂದು ಭಾರತ ಎದುರಿಸುತ್ತಿರುವ ಮತ, ಪಂಥದ ಸಾಂಸ್ಕೃತಿಕ ಧರ್ಮ ಬಿಕ್ಕಟ್ಟಿಗೆ ನಿಸಾರ್ ಅವರನ್ನು ಓದಿಕೊಳ್ಳಬೇಕಾಗಿದೆ. ಭಾರತದಲ್ಲಿ ಮತಗಳನ್ನು ಹೇಗೆ ನೋಡಬೇಕೆಂದು ನಿಸಾರ್ ಅಹಮದ್ ಕಲಿಸಿದ್ದಾರೆ. ಅವರೊಬ್ಬ ಸಾಂಸ್ಕೃತಿಕ ಸಮನ್ವಯ ಉಂಟು ಮಾಡಿದ ಕವಿ. ಮತ, ಜಾತಿ, ಧರ್ಮ ಮೀರಿದ ಕವಿ. ಈ ನೆಲದ ಭಾಷೆ ಅವರನ್ನು ಅಷ್ಟರ ಮಟ್ಟಿಗೆ ಹಿಡಿದಿಟ್ಟಿತ್ತು. ಕವಿ ಸಮಕಾಲೀನನಾಗಿರಬೇಕು. ವರ್ತಮಾನ ಹಾಗೂ ಭೂತಕಾಲಕ್ಕೆ ಕೈಗನ್ನಡಿ ಹಿಡಿಯಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ ಅವರಿಗೆ ನಿಸಾರ್ ಅಹಮದ್ ನಿತ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಡಾ.ಎಸ್.ಪಿ.ಯೋಗಣ್ಣ, ಚಿಂತಕ ರಘುರಾಂ ವಾಜಪೇಯಿ, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಅಕ್ಷಯ ತೃತೀಯ ಸಂಭ್ರಮ

ಚಿನ್ನ ಖರೀದಿಸಿ ಮನೆ ತುಂಬಿಸಿಕೊಂಡ ಆಭರಣ ಪ್ರಿಯರು



ಮೈಸೂರು, ಮೇ 3(ಆರ್‌ಕೆ)– ಅಕ್ಷಯ ತೃತೀಯ ದಿನದಂದು ಚಿನ್ನ, ವಜ್ರ ಖರೀದಿಸಿದರೆ ಸಿರಿ ಸಂಪತ್ತು ಒದಗುತ್ತದೆ ಎಂಬುದು ಪ್ರತೀತಿ. ಇಂದು ಮೈಸೂರಿನ ಎಲ್ಲಾ ಚಿನ್ನಾಭರಣ ಅಂಗಡಿಗಳಲ್ಲಿ ಗ್ರಾಹಕರ ದಂಡೇ ನೆರೆದಿತ್ತು. ಈಗಾಗಲೇ ಮುಂಗಡವಾಗಿ ಹಣ ಪಾವತಿಸಿ ಬುಕ್ ಮಾಡಿದ್ದವರು ಇಂದು ಚಿನ್ನ, ವಜ್ರದ ಆಭರಣಗಳನ್ನು ಪಡೆದು ಮನೆತುಂಬಿಸಿಕೊಂಡರು.

ಮನೆಗೆ ಕೊಂಡೊಯ್ದ ಆಭರಣಗಳನ್ನು ದೇವರ ಮನೆಯಲ್ಲಿ ಭಕ್ತಿ ಭಾವದಿಂದ 'ಲಕ್ಷ್ಮೀ ಬಾರಮ್ಮ' ಎಂದು ಪ್ರಾರ್ಥಿಸಿದ ನಂತರ ಸುರಕ್ಷಿತ ಜಾಗದಲ್ಲಿ ಭದ್ರಪಡಿಸಿಕೊಂಡರು.

ಅಕ್ಷಯ ತೃತೀಯ ದಿನದಂದು ಚಿನ್ನ ಖರೀದಿಸಿ ಮನೆತುಂಬಿಸಿಕೊಂಡರೆ ಧನ, ಸಿರಿ–ಸಂಪತ್ತು, ಆಭರಣಗಳು ವೃದ್ಧಿಯಾಗುತ್ತದೆ ಎಂಬ ಪ್ರತೀತಿ ಇರುವುದರಿಂದ ಇಂದು ಮಹಿಳೆಯರು ಡಿ.ದೇವರಾಜ ಅರಸು ರಸ್ತೆ, ಅಶೋಕ ರಸ್ತೆ, ಬಿಎನ್ ರಸ್ತೆ, ಕೆ.ಆರ್.ಸರ್ಕಲ್, ಅಗ್ರಹಾರ ಸರ್ಕಲ್, ವಿವಿಪುರಂನ ಟೆಂಪಲ್ ರೋಡ್, ಕಾಳಿದಾಸ ರಸ್ತೆ, ಹೆಬ್ಬಾಳಿನ ಸೂರ್ಯ ಬೇಕರಿ ಸರ್ಕಲ್ ಸೇರಿದಂತೆ ಮೈಸೂರು ನಗರದಾದ್ಯಂತ ಎಲ್ಲಾ ಆಭರಣ ಅಂಗಡಿಗಳಿಗೆ ಲಗ್ಗೆ ಇಟ್ಟು, ಚಿನ್ನ, ವಜ್ರ ಹಾಗೂ ಬೆಳ್ಳಿ ಆಭರಣಗಳನ್ನು ಖರೀದಿಸಿದರು.

ಬೆಳಗ್ಗೆಯಿಂದ ರಾತ್ರಿವರೆಗೂ ಗ್ರಾಹಕರ ದಂಡೇ ಸೇರಿದ್ದರಿಂದ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ಅವರನ್ನು ನಿಭಾಯಿಸಲು ಹರಸಾಹಸಪಡಬೇಕಾಯಿತು. ಇಂದು ಒಂದೇ ದಿನ ಭಾರೀ ಪ್ರಮಾಣದ ಚಿನ್ನ, ವಜ್ರ ಹಾಗೂ ಬೆಳ್ಳಿ ಆಭರಣಗಳ ಭರ್ಜರಿ ಮಾರಾಟವಾಗಿದೆ. ಸಂಜೆಯಾಗುತ್ತಿದ್ದಂತೆಯೇ ಎಲ್ಲರ ಮನೆಗಳಲ್ಲಿ ಪೂಜೆ ಮಾಡಿ ಲಕ್ಷ್ಮೀಯನ್ನು ಆಹ್ವಾನಿಸಿ ಮನೆ ತುಂಬಿಸಿಕೊಂಡ ಮಹಿಳೆಯರು ತಾವು ಖರೀದಿಸಿದ ಆಭರಣಗಳೊಂದಿಗೆ ಸಂಭ್ರಮಿಸಿದರು. ಹಣವಿಲ್ಲದಿದ್ದರೂ ಕೆಲವರು ಗುಲಗಂಜಿ ಬೆಳ್ಳಿಯನ್ನಾದರೂ ಖರೀದಿಸಿ ಕೊಂಡೊಯ್ದು ಅಕ್ಷಯ ತೃತೀಯ ಹಬ್ಬದ ಸಂಭ್ರಮದಲ್ಲಿ ಭಾಗಿಯಾಗಿ ಸಮಾಧಾನಪಟ್ಟುಕೊಂಡರು.

ಕೆ.ಆರ್.ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ತೇಜಸ್ವಿ ನಾಗಲಿಂಗಸ್ವಾಮಿ ಘೋಷಣೆ

ಮೈಸೂರು,ಮೇ3(ಆರ್‌ಕೆಬಿ)– ಕೃಷ್ಣರಾಜ ಕ್ಷೇತ್ರದಿಂದ ತಾನು ಚುನಾವಣೆಗೆ ಸ್ಪರ್ಧಿಸುವುದಾಗಿ ಕನ್ನಡ ಯೋಧ ನ.ನಾಗಲಿಂಗಸ್ವಾಮಿ ಅವರ ಪುತ್ರ ತೇಜಸ್ವಿ ನಾಗಲಿಂಗಸ್ವಾಮಿ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಸಾಕಷ್ಟು ಹೋರಾಟ ಮಾಡಿರುವುದನ್ನು ಪರಿಗಣಿಸಿ ನನ್ನ ಸ್ನೇಹಿತರು, ಹಿತೈಷಿಗಳು, ಸಂಬಂಧಿಕರು, ಕ್ಷೇತ್ರದ ನಿವಾಸಿಗಳು ನನ್ನನ್ನು ಚುನಾವಣೆಗೆ ಸ್ಪರ್ಧಿಸುವಂತೆ ಒತ್ತಾಯಿಸುತ್ತಿರುವ ಹಿನ್ನೆಲೆಯಲ್ಲಿ ತಾವು ಈ ನಿರ್ಧಾರ ಕೈಗೊಂಡಿದ್ದು, ಕ್ಷೇತ್ರದ ಜನತೆ ನನ್ನನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ತಪಾಸಣಾ ಶಿಬಿರ

ಮೈಸೂರು,ಮೇ3–ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 5ರಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.


ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಮಾಜಿ ಕೇಂದ್ರ ಸಚಿವ ಅನಂತ್‌ಕುಮಾರ್ ಹೆಗಡೆ ಭೇಟಿ ನೀಡಿ, ಶ್ರೀ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು.

ಡಾ.ಮಣಿಕರ್ಣಿಕಾರ 'ಶರೀರ ರಚನಾಶಾಸ್ತ್ರ', 'ಶರೀರ ಕ್ರಿಯಾಶಾಸ್ತ್ರ' ಪುಸ್ತಕ ಬಿಡುಗಡೆ



ಮೈಸೂರು, ಮೇ 3–ಮೈಸೂರಿನ ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಪತಂಜಲಿ ಯೋಗ ಫೌಂಡೇಷನ್ ಸಂಯುಕ್ತ ಆಶ್ರಯದಲ್ಲಿ ಖ್ಯಾತ ನೇತ್ರ ತಜ್ಞೆ ಡಾ. ಮಣಿಕರ್ಣಿಕಾ ಅವರ 'ಶರೀರ ರಚನಾಶಾಸ್ತ್ರ' ಮತ್ತು 'ಶರೀರ ಕ್ರಿಯಾಶಾಸ್ತ್ರ' ಪುಸ್ತಕವನ್ನು ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನಾ ಮಂದಿರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ವಿ. ಗಿರೀಶ್‌ಚಂದ್ರ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಈ ಪುಸ್ತಕ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ಅವರ ದೇಹದ ಬಗೆಗೆ ತಮ್ಮದೇ ಭಾಷೆಯಲ್ಲಿ ತಿಳಿದುಕೊಳ್ಳಲು ಸಾಧ್ಯವಾಗುವಂತಹ ಬಹು ಉಪಯುಕ್ತವಾದ ಪುಸ್ತಕ ಎಂದು ಅಭಿಪ್ರಾಯಪಟ್ಟರು.

ಕೃತಿಯ ಕರ್ತೃ ಡಾ.ಮಣಿಕರ್ಣಿಕಾ ಮಾತನಾಡಿ, ಅಷ್ಟಾಂಗ ಯೋಗದಲ್ಲಿ ಹೇಗೆ ಮನಸ್ಸಿನ ನಿಯಂತ್ರಣ ಹೆಚ್ಚಿಸಿಕೊಳ್ಳಬೇಕೆಂಬುದನ್ನು ಕಲಿತೆ. ಶೈಕ್ಷಣಿಕ ಆಧ್ಯಾತ್ಮಿಕ ಅಧ್ಯಯನವನ್ನು ಸೇರಿಸಿರುವುದನ್ನು ಮೆಚ್ಚಿಕೊಂಡರು. ವೈದ್ಯರಾಗಿ ರೋಗಿಗೆ ಕೇವಲ ಔಷಧಿಯನ್ನು ಮಾತ್ರ ಕೊಟ್ಟರಷ್ಟೇ ಸಾಲದು. ರೋಗಿಗೆ ಅವರ ರೋಗದ ಕಾರಣವನ್ನು ತಿಳಿಸಿ, ನಂತರ ಔಷಧವನ್ನು ನೀಡುವುದರಿಂದ ರೋಗಿಗೆ ಆತ್ಮಸ್ಥೈರ್ಯ ತುಂಬಬೇಕು ಎಂದರು. ಕಾರ್ಯಕ್ರಮದಲ್ಲಿ ಎಸ್‌ಪಿವೈಆರ್‌ಸಿ ಪ್ರಾಂಶುಪಾಲ ಎನ್.ಎಸ್.ಸತ್ಯನಾರಾಯಣ, ಚೆನ್ನಬಸಪ್ಪಣ್ಣ, ಕೆ.ಎಸ್. ರವಿಶಂಕರ್, ಜಿ.ಕೃಷ್ಣಪ್ಪ, ಗೋಪಾಲಕೃಷ್ಣ, ಎಲ್ಲಾ ಶಾಖೆ ಕಾರ್ಯಕರ್ತರು ಇದ್ದರು.

ಗಾಂಜಾ ಮಾರಾಟಕ್ಕೆ ಯತ್ನ: ಮೂವರ ಸೆರೆ 30,000 ರೂ. ಮೌಲ್ಯದ ಗಾಂಜಾ ವಶ

ಮೈಸೂರು, ಮೇ 3(ಆರ್‌ಕೆ)– ಗಾಂಜಾ ಮಾರಲೆತ್ನಿಸುತ್ತಿದ್ದ ಮೂವರನ್ನು ಬಂಧಿಸಿರುವ ಉದಯಗಿರಿ ಠಾಣೆ ಪೊಲೀಸರು, 30,000 ರೂ. ಬೆಲೆಬಾಳುವ ಮಾಲನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರಿನ ರಾಜೀವ್ ನಗರ 1ನೇ ಹಂತದ ನಿವಾಸಿ ಅಜ್ಮಲ್ ಖಾನ್ ಅಲಿಯಾಸ್ ಡೀಲರ್ (40), ಗೌಸಿಯಾನಗರ ನಿವಾಸಿ ವಾಹೀದ್ ಪಾಷಾ ಅಲಿಯಾಸ್ ಉಡಿ ಬಾಬಾ(31) ಹಾಗೂ ಎನ್‌ಆರ್ ಮೊಹಲ್ಲಾ, ಎಜೆ ಬ್ಲಾಕ್ ನಿವಾಸಿ ಸೈಯದ್ ಆಸಿಫ್ ಅಲಿಯಾಸ್ ಆಸಿಫ್ (33) ಬಂಧಿತ ಆರೋಪಿಗಳು.

ಮೇ 1ರಂದು ರಾಜೀವ್‌ನಗರದ ರಿಂಗ್ ರಸ್ತೆಯ ಶ್ರೀನಿಧಿ ಬಡಾವಣೆಯಲ್ಲಿ ಗಾಂಜಾ ಮಾರಾಟ ಮಾಡಲು ಹೊಂಚು ಹಾಕುತ್ತಿದ್ದಾಗ ದಾಳಿ ನಡೆಸಿದ ಇನ್ಸ್‌ಪೆಕ್ಟರ್ ಪಿ.ಕೆ.ರಾಜು ಹಾಗೂ ಸಿಬ್ಬಂದಿ, ಆರೋಪಿಗಳನ್ನು ಬಂಧಿಸಿದ್ದಾರೆ. ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಮೇಲುಸ್ತುವಾರಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ಪಿ.ಕೆ.ರಾಜು, ಸಬ್ ಇನ್ಸ್‌ಪೆಕ್ಟರ್‌ಗಳಾದ ಸುನಿಲ್, ನಾಗರಾಜ ನಾಯಕ, ಸಿಬ್ಬಂದಿಗಳಾದ ಶಂಕರ್, ಸಿದ್ದಿಕ್ ಅಹಮದ್, ಸೋಮಶೇಖರ್, ಆನಂದ ಕುಮಾರ್, ಸಾಜಿಯಾ ಭಾನು, ಮೋಹನ್‌ಕುಮಾರ್, ಶಿವರಾಜಪ್ಪ, ಸಮೀರ್ ಪಟೇಲ್ ಪಾಲ್ಗೊಂಡಿದ್ದರು.

ಮೇ 11ರಿಂದ ಜೀವನೋತ್ಸಾಹ ಶಿಬಿರ

ಮೈಸೂರು, ಮೇ3–ಸುತ್ತೂರು ಶ್ರೀಮಠದ ವತಿಯಿಂದ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಸಂಯುಕ್ತಾಶ್ರಯದಲ್ಲಿ ಮೇ 11 ರಿಂದ 15ರವರೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಸಾರ್ವಜನಿಕರಿಗಾಗಿ ಜೀವನೋತ್ಸಾಹ ಶಿಬಿರವನ್ನು ಏರ್ಪಡಿಸಲಾಗಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಮಾರ್ಗದರ್ಶನದಲ್ಲಿ ಶಿಬಿರಗಳು ನಡೆಯಲಿವೆ. ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸಗಳು, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ.ರಾಜೇಶ್ ಅವರನ್ನು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದಲ್ಲಿ ನೇರವಾಗಿ ಅಥವಾ 0821–2548212, Extn. 223/224 ದೂರವಾಣಿಯಲ್ಲಿ ಅಥವಾ ಮೊ: 9964141560 ಮೂಲಕ ಹಾಗೂ ಶಿಬಿರದ ಸಂಚಾಲಕರಾದ ಎಸ್. ಪುಟ್ಟರಾಜಪ್ಪ (9741033336), ಡಾ.ಬಿ.ಎಸ್.ಸುದೀಪ್ (9242829947), ಜಿ. ಮಲ್ಲೇಶ್ (9845324338), ಬಿ.ಎನ್.ಸುಧಾಕರ್ (9448323216) ಅವರ ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿ ಕೊಳ್ಳಬಹುದಾಗಿದೆ. www.jssonline.org ಯಿಂದ ವಿವರ ಪಡೆಯಬಹುದು. ಇ–ಮೇಲ್ (jsspublications@gmail.com) ಮೂಲಕವೂ ನೋಂದಾಯಿಸಿಕೊಳ್ಳಬಹುದಾಗಿದೆ.


ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ ಅವರ ಮೈಸೂರು ನಿವಾಸಕ್ಕೆ ಇತ್ತೀಚೆಗೆ ಭೇಟಿ ನೀಡಿದ ಐಪಿಎಸ್ ಅಧಿಕಾರಿ ರವಿ ಡಿ.ಚೆನ್ನಣ್ಣನವರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಪ್ರಭಾಕರ್ ಹುಣಸೂರು, ಕೃಷ್ಣಕುಮಾರ್, ಲಕ್ಷ್ಮಣ್‌ಕುಮಾರ್, ಬಂಡಹಳ್ಳಿ ರಘು, ಮಂಜುನಾಯಕ, ರಾಹುಲ್, ಪ್ರಜ್ವಲ್ ಇನ್ನಿತರರು ಉಪಸ್ಥಿತರಿದ್ದರು.

ಕಲಾತಂಡಗಳಿಂದ ಅರ್ಜಿ ಆಹ್ವಾನ

ಮೈಸೂರು, ಮೇ 3– ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ನಿರ್ಮೂಲನೆ ಮಾಡಲು ಎಂ.ಎಸ್.ಕಾಯ್ದೆ 2013ರ ಪ್ರಮುಖ ಅಂಶಗಳನ್ನು ಸಾರ್ವಜನಿಕರು ಹಾಗೂ ಕಾರ್ಮಿಕರಲ್ಲಿ ಅರಿವು ಮೂಡಿಸಲು 60 ನಿಮಿಷಗಳ ಅವಧಿಗೆ ಜಿಲ್ಲಾ ಮತ್ತು ತಾಲೂಕು ಮಟ್ಟಗಳ ರಂಗಮಂದಿರ ಅಥವಾ ಒಳಾಂಗಣದಲ್ಲಿ ಕಲಾತಂಡದವರಿಂದ ನಾಟಕಗಳನ್ನು ಪ್ರದರ್ಶಿಸಲು ಅರ್ಹ ಕಲಾತಂಡಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೌರಕಾರ್ಮಿಕರು, ಸಫಾಯಿ ಕರ್ಮಚಾರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿದರಿಂದ ಕಲಾತಂಡ ರಚಿತವಾಗಿರಬೇಕು. ಪೌರಕಾರ್ಮಿಕ ತಂಡಗಳಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸುವ ಕಲಾತಂಡಗಳು ಸೂಕ್ತ ದಾಖಲೆಗಳೊಂದಿಗೆ ಮೇ 9ರಂದು ಸಂಜೆ 4ರೊಳಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ನಂ.1/14, ದಕ್ಷಿಣ ವಿಂಗ್, ನೆಲಹಮಹಡಿ, ಯೂನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್, ಮಿಷನ್ ರೋಡ್, ಬೆಂಗಳೂರು ಇಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂಸಂ: 080–22240445/6 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.


ಜಂಬುಪುರ ಗ್ರಾಮದಲ್ಲಿ ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಮುಸಲ್ಮಾನ ಬಾಂಧವರು ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ಜಂಬುಪುರ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಹಮ್ಮದ್ ಅಲಿ, ಅಬ್ದುಲ್ ಮುತಾಲಿಫ್ ಮತ್ತು ಮುಸ್ಲಿಂ ಬಾಂಧವರು ಇದ್ದರು.

ಬಾಲಕಿಯ ಲಿವರ್ ಕಸಿಗೆ ಮುಸ್ಲಿಂ ಬಾಂಧವರ ನೆರವು

ಮೈಸೂರು,ಮೇ 3(ಆರ್‌ಕೆ)–ಮೈಸೂರಲ್ಲಿ ರಂಜಾನ್ ಸಂಭ್ರಮದ ನಡುವೆ ಮುಸ್ಲಿಂ ಬಾಂಧವರು ಅನ್ಯ ಕೋಮಿನ ಬಾಲಕಿಯ ಶಸ್ತ್ರಚಿಕಿತ್ಸೆಗೆ ಆರ್ಥಿಕ ನೆರವು ನೀಡುವ ಮೂಲಕ ಸರ್ವ ಧರ್ಮಗಳ ಮೂಲಧ್ಯೇಯ ಮಾನವೀಯತೆ ಸಂದೇಶ ಸಾರಿರುವ ಪ್ರಸಂಗ ನಡೆದಿದೆ. ಲಿವರ್ ಸಂಬಂಧಿ ಖಾಯಿಲೆಯಿಂದ ಬಳಲುತ್ತಿರುವ 13 ವರ್ಷದ ಬಾಲಕಿಗೆ ಧನ ಸಹಾಯ ಮಾಡುವಂತೆ ಮಸೀದಿಯಲ್ಲಿ ರಂಜಾನ್ ವಿಶೇಷ ಪ್ರಾರ್ಥನೆ ವೇಳೆ ಪ್ರಕಟಿಸಲಾಯಿತು. ಈ ವೇಳೆ ನೂರಾರು ಮುಸ್ಲಿಂ ಬಾಂಧವರು ತಮ್ಮ ತಮ್ಮ ಶಕ್ತಿಯನುಸಾರ ನೆರವು ನೀಡಿದ್ದಾರೆ. ಎಲ್ಲದಕ್ಕಿಂತ ಮಾನವೀಯತೆಯೇ ಶ್ರೇಷ್ಠ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.

ಬಾಲಕಿಗೆ ಲಿವರ್ ಕಸಿ ಮಾಡಲೇಬೇಕು, ಇಲ್ಲದಿದ್ದರೆ ಆಕೆ ಬದುಕುಳಿಯುವುದಿಲ್ಲ ಎಂದು ತಿಳಿಸಿದ್ದ ವೈದ್ಯರು, ರೋಗ ಲಕ್ಷಣ, ಅದರ ತೀವ್ರತೆ, ಉದ್ದೇಶಿತ ಶಸ್ತ್ರಕ್ರಿಯೆ, ಅದಕ್ಕೆ ತಗಲುವ ಖರ್ಚು–ವೆಚ್ಚದ ವಿವರ ನೀಡಿದ್ದರು. ಆದರೆ ಬಾಲಕಿ ಪೋಷಕರು ಲಿವರ್ ಪ್ಲಾಂಟೇಷನ್ ಚಿಕಿತ್ಸೆಗೆ ಬೇಕಾದ ಲಕ್ಷಾಂತರ ರೂ. ಹೊಂದಿಸಲಾಗದೆ ರೋದಿಸುತ್ತಿದ್ದರು. ಹೇಗಾದರೂ ಮಗಳ ಪ್ರಾಣ ಉಳಿಸಿಕೊಳ್ಳಬೇಕೆಂಬ ಪ್ರಯತ್ನದ ನಡುವೆ ಮೂರು ದಿನಗಳ ಹಿಂದೆ ಮೈಸೂರಿನ ಉದಯಗಿರಿಯ ಕೂಬಾ ಮಸೀದಿಗೆ ತೆರಳಿ ಅಲ್ಲಿನ ಧರ್ಮಗುರು ಶಾರುಕ್ ಅಹಮದ್‌ಖಾನ್ ಅವರಿಗೆ ವಿಷಯ ತಿಳಿಸಿದ್ದರು.

ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿದಾಗ ಲಿವರ್ ಕಸಿಗೆ ಹಣದ ಜರೂರಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಧರ್ಮಗುರುಗಳು ಮಸೀದಿಯ ಕಾರ್ಯದರ್ಶಿಯವರೊಂದಿಗೆ ಚರ್ಚಿಸಿ, ಸಹಾಯಕ್ಕೆ ನಿರ್ಧರಿಸಿದರು. ನಂತರ ಸಂಜೆ 7 ಗಂಟೆ ಸಾಮೂಹಿಕ ಪ್ರಾರ್ಥನೆ ವೇಳೆ ಬಾಲಕಿ ಚಿಕಿತ್ಸೆಗೆ ನೆರವಾಗುವಂತೆ ಮನವಿ ಮಾಡಲಾಯಿತು. ಬಳಿಕ ಪ್ರಾರ್ಥನೆಗೆ ಬಂದಿದ್ದವರು ತಮ್ಮ ಶಕ್ತಿಯನುಸಾರ ಬಾಲಕಿ ಚಿಕಿತ್ಸೆಗೆ ನೆರವಾದರು. ಸಂಗ್ರಹವಾದ ಹಣವನ್ನು ಬಾಲಕಿ ಪೋಷಕರಿಗೆ ಹಸ್ತಾಂತರಿಸಲಾಯಿತು. ಕಷ್ಟದಲ್ಲಿರುವವರು ಯಾವ ಧರ್ಮ, ಜಾತಿಯವರೇ ಆಗಲಿ, ಮೈಸೂರಿನ ಎಲ್ಲಾ ಮಸೀದಿಗಳಲ್ಲೂ ಖಂಡಿತವಾಗಿ ಸಹಾಯ ಸಿಗುತ್ತದೆ ಎಂದು ಶಾರುಕ್ ಅಹಮದ್‌ಖಾನ್ ತಿಳಿಸಿದ್ದಾರೆ.

ಸರ್ಪ ಸಂಸ್ಕಾರ, ಆಶ್ಲೇಷಾ ಬಲಿ


ಮೈಸೂರು,ಮೇ 3–ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಮೇ 7ರಂದು ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿಪೂಜೆ ಏರ್ಪಡಿಸಿದೆ. ಪ್ರತ್ಯೇಕವಾಗಿ ಪೂಜೆ, ಸಂಕಲ್ಪ ಮಾಡಿಸಲಾಗುತ್ತದೆ. ಮಾಹಿತಿಗೆ ಪ್ರಧಾನ ಅರ್ಚಕ ಮೈಕುಮಾರ್ ಜಾತಕ ವಿಮರ್ಶಕರನ್ನು ಮೊ.ಸಂ. 9845183392, 9480966522.

ವ್ಯಕ್ತಿ ನಾಪತ್ತೆ



ಮೈಸೂರು,ಮೇ3–ಗಾಯಿತ್ರಿಪುರಂ 2ನೇ ಹಂತದ ನಿವಾಸಿ ಸರ್ದಾರ್ ಖಾನ್ (72) ಏ.2ರಂದು ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಮನೆಗೆ ಬಂದಿರುವುದಿಲ್ಲ ಎಂದು ಅವರ ಪುತ್ರ ಸಿಕಂದರ್ ಉದಯಗಿರಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2418309, 2418339 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.05.2022 ಬುಧವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ಥೀ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.
- **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ 98ನೇ ವರ್ಷದ ಮೈಸೂರು ಕರಗ ಮಹೋತ್ಸವ, ಸ್ಥಳ: ಟ್ರಸ್ಟ್, ಇಟ್ಟಿಗೆಗೂಡು.
- **ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ :** ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಶ್ರೀನಿವಾಸ ರೆಡ್ಡಿ, ಎ.ಎಸ್.ಪೂರ್ಣೇಶ್, ಡಾ. ಚೈತ್ರಾ ನಾರಾಯಣ್, ಸ್ಥಳ:ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ
- **ವ್ಯವಸ್ಥಾಪಕರು :** ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಸವಲತ್ತುಗಳ ವಿತರಣೆ, ಸಂಸದ ಪ್ರತಾಪ್ ಸಿಂಹ ಅವರಿಗೆ ಅಭಿನಂದನಾ ಸಮಾರಂಭ, ಉಪಸ್ಥಿತರು: ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ, ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್, ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಕೆ.ಎಂ.ನಿಶಾಂತ್, ಸ್ಥಳ: ಸಂಸದರ ಕಚೇರಿ ಆವರಣ, ಜಲದರ್ಶಿನಿ, ಮಧ್ಯಾಹ್ನ 12.15ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಡಿ. ಪುರುಷೋತ್ತಮ ಮತ್ತು ಗೀತಾ ವೈ ಪುಟ್ಟಿ, ವ್ಯಾಖ್ಯಾನ – ಡಾ.ಜಿ.ಆರ್. ತಿಪ್ಪೇಸ್ವಾಮಿ, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ'. ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ–ಬಾನುಲಿ ಸರಣಿ, 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟ 2021–ದಿನದ ಮುಖ್ಯಾಂಶಗಳ ಕನ್ನಡ ಅವತರಣಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಎಸ್.ಶಂಕರ್, ರೂಪ ಮತ್ತು ದೀಪ, 12.45 ಜನಪದ ಸಂಗೀತ–ನಿಂಗಶೆಟ್ಟಿ ಮತ್ತು ತಂಡ, 1.20 ಭಾವಗೀತೆ, 3.00ಲಯ ಸಂಭ್ರಮ –ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಲೇಖಕಿ ಉಷಾ ನರಸಿಂಹನ್ ಅವರೊಂದಿಗೆ ಸಂವಾದ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 4.45 ಹಿಂದಿ ಪಾಠ, ಪ್ರಸ್ತುತಿ–ಶಾಂತಾ ಡಿ.ಕಿಣಿ, 6.50ಕೃಷಿರಂಗ–ಕಿಸಾನ್‌ವಾಣಿ, ಕೃಷಿಯಲ್ಲಿ ಮಾಗಿ ಉಳುಮೆಯ ಪ್ರಾಮುಖ್ಯತೆ ಕುರಿತು ಎನ್.ಗಂಗನರಸಿಂಹಯ್ಯ ಅವರೊಂದಿಗೆ ಸಂದರ್ಶನ, 9.05 ಕ್ಷಿತಿಜ–Literacy ಗುರು– ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.30 ಹಳ್ಳಿ ಹಾಡು, ಪ್ರಸ್ತುತಿ– ಅಬ್ದುಲ್ ರಶೀದ್

- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದ್ವಾನ್ ಅನಂತ ಕುಲಕರ್ಣಿ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.
- **ಮೈಸೂರು ಉತ್ಸವ :** ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.
- **ರೋಟರಿ ಮಿಡ್‌ಟೌನ್ :** ರೋಟರಿ ವೀನಸ್ ಶ್ರಮಜೀವಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಡಾ. ರೇಖಾ ಷಣ್ಮುಖ, ಪ್ರಶಸ್ತಿ ಪುರಸ್ಕೃತರು : ಸಿ.ಮಹದೇವಸ್ವಾಮಿ, ಎಂ.ಎಸ್. ಅಶೋಕ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.

ಮೈಸೂರು-ಹುಬ್ಬಳ್ಳಿ ವಿಮಾನ ಸಂಚಾರ ಆರಂಭ

ವಾರದಲ್ಲಿ ಮೂರು ದಿನ ಸೇವೆ



ಮೈಸೂರು, ಮೇ 3(ಎಂಕೆ)- ಮೈಸೂರು-ಹುಬ್ಬಳ್ಳಿ ನಡುವೆ ವಾರದಲ್ಲಿ ಮೂರು ದಿನ ವಿಮಾನ ಸೇವೆಗೆ ಸಂಸದ ಪ್ರತಾಪ್ ಸಿಂಹ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಮಂಗಳವಾರ ಚಾಲನೆ ನೀಡಿದರು. ಬಳಿಕ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಮೈಸೂರು-ಹುಬ್ಬಳ್ಳಿ ನಡುವೆ ವಾರದಲ್ಲಿ 3 ದಿನ ವಿಮಾನ ಸೇವೆ ಇಂದಿನಿಂದ ಆರಂಭವಾಗಿದ್ದು, ಇದಕ್ಕೆ ಮೂಲ ಕಾರಣೀಭೂತರಾದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಧನ್ಯವಾದ ತಿಳಿಸಿದರು.

ವಾರದಲ್ಲಿ ಮೂರು ದಿನ: ಮಂಗಳವಾರ, ಗುರುವಾರ ಮತ್ತು ಶನಿವಾರ ಮೈಸೂರು-ಹುಬ್ಬಳ್ಳಿ ನಡುವೆ ವಿಮಾನ ಸಂಚರಿಸಲಿದ್ದು, ಹುಬ್ಬಳ್ಳಿಯಿಂದ ಸಂಜೆ 5 ಗಂಟೆಗೆ ಹೊರಟು ಮೈಸೂರಿಗೆ ಸಂಜೆ 6.05ಕ್ಕೆ ತಲುಪಲಿದೆ. ನಂತರ ಮೈಸೂರನ್ನು 6.25ಕ್ಕೆ ಬಿಟ್ಟು 7.30ಕ್ಕೆ ಹುಬ್ಬಳ್ಳಿ ತಲುಪಲಿದೆ. ಮೈಸೂರು ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕ ಮಂಜುನಾಥ್, ಟ್ರಾವೇಲ್ಸ್ ಅಸೋಸಿಯೇಷನ್ ಅಧ್ಯಕ್ಷ ಜಯಕುಮಾರ್, ಉದ್ಯಮಿ ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿಂದ ಹಾರಾಟ ನಡೆಸಲಿರುವ ವಿಮಾನಗಳ ವೇಳಾಪಟ್ಟಿ

ವಿಮಾನ ಸಂಖ್ಯೆ	ಹೊರಡುವ ಸ್ಥಳ	ಸಮಯ	ತಲುಪುವ ಸ್ಥಳ	ಸಮಯ
ಮಂಗಳವಾರ ಹೊರತುಪಡಿಸಿ(ವಾರದ 6 ದಿನ)				
ಎಐ 9505	ಬೆಂಗಳೂರು	9:00	ಮೈಸೂರು	10:00
ಎಐ 9505	ಮೈಸೂರು	10:25	ಕೊಚ್ಚಿನ್	11:25
ಎಐ 9506	ಕೊಚ್ಚಿನ್	15:30	ಮೈಸೂರು	16:30
ಎಐ 9506	ಮೈಸೂರು	16:55	ಬೆಂಗಳೂರು	17:55
ವಾರದ ಎಲ್ಲಾ ದಿನಗಳಲ್ಲಿ				
ಎಐ 9881	ಹೈದರಾಬಾದ್	13:15	ಮೈಸೂರು	14:55
ಎಐ 9881	ಮೈಸೂರು	15:25	ಗೋವಾ	16:55
ಎಐ 9882	ಗೋವಾ	17:25	ಮೈಸೂರು	18:55
ಎಐ 9882	ಮೈಸೂರು	19:30	ಹೈದರಾಬಾದ್	21:15
ಮಂಗಳವಾರ ಮಾತ್ರ				
ಎಐ 9505	ಬೆಂಗಳೂರು	6:40	ಮೈಸೂರು	7:40
ಎಐ 9505	ಮೈಸೂರು	8:10	ಕೊಚ್ಚಿನ್	9:10
ಎಐ 9506	ಕೊಚ್ಚಿನ್	13:25	ಮೈಸೂರು	14:25
ಎಐ 9506	ಮೈಸೂರು	14:55	ಬೆಂಗಳೂರು	16:00
ಮೈಸೂರು-ಹೈದರಾಬಾದ್-ಚೆನ್ನೈ(ಇಂಡಿಗೊ) ವಾರದ ಎಲ್ಲಾ ದಿನ (ಮಾ.27, 2022 ರಿಂದ ಅ.29 2022ರವರೆಗೆ				
6ಇ 7921	ಹೈದರಾಬಾದ್	13:45	ಮೈಸೂರು	15:35
6ಇ 7237	ಮೈಸೂರು	15:55	ಚೆನ್ನೈ	17:20
6ಇ 7238	ಚೆನ್ನೈ	17:55	ಮೈಸೂರು	19:30
6ಇ 7922	ಮೈಸೂರು	19:50	ಹೈದರಾಬಾದ್	21:30
ವಾರದಲ್ಲಿ ಮೂರು ದಿನ(ಮಂಗಳವಾರ, ಗುರುವಾರ ಮತ್ತು ಶನಿವಾರ)				
6ಇ 7189	ಹುಬ್ಬಳ್ಳಿ	17:05	ಮೈಸೂರು	18:05
6ಇ 7191	ಮೈಸೂರು	18:25	ಹುಬ್ಬಳ್ಳಿ	19:40

ಮೈಸೂರಲ್ಲಿ ಮಳೆಯ ಆರ್ಭಟ

ಧರೆಗುರುಳಿದ ಮರಗಳು, ರಸ್ತೆಯಲ್ಲಿ ಭಾರೀ ನೀರು, ಸವಾರರ ಪರದಾಟ



ಮೈಸೂರು, ಮೇ 3(ಎಂಕೆ)- ಮೈಸೂರಿನಲ್ಲಿ ಭರಣಿ ಮಳೆಯ ಅಬ್ಬರ ಮುಂದುವರೆದಿದ್ದು, ಮಂಗಳವಾರವೂ ಗುಡುಗು, ಮಿಂಚು, ಬಿರುಗಾಳಿ ಸಹಿತ ಸುರಿದ ಭಾರೀ ಮಳೆಗೆ ಎರಡು ಮರಗಳು ಉರುಳಿಬಿದ್ದಿವೆ.

ನಗರದ ಎಸ್‌ಬಿಎಂ ಕಾಲೋನಿ ಹಾಗೂ ಮಧುವನ ಬಡಾವಣೆಯ 3ನೇ ಕ್ರಾಸ್‌ನಲ್ಲಿ ಮರಗಳು ಬುಡ ಸಮೇತ ನೆಲಕ್ಕುರಿಳಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ನಗರ ಪಾಲಿಕೆ ಅಭಯ-3ರ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಉಳಿರುಬಿದ್ದಿದ್ದ ಮರಗಳನ್ನು ತೆರವುಗೊಳಿಸಿದ್ದಾರೆ.

ರಾತ್ರಿ 9 ಗಂಟೆ ಸುಮಾರಿಗೆ ಆರಂಭವಾದ ಜೋರು ಮಳೆ ತಡರಾತ್ರಿಯವರೆಗೂ ಧಾರಾಕಾರವಾಗಿ ಸುರಿಯಿತು. ಪರಿಣಾಮ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದರೆ, ಕೆರೆಯಂತಾಗಿದ್ದ ರಸ್ತೆಗಳಲ್ಲಿ ಸಂಚರಿಸಲು ವಾಹನ ಸವಾರರು ಹೆಣಗಾಡುವಂತಾಯಿತು. ಕಳೆದ ಮೂರ್ನಾಲ್ಕು ದಿನಗಳಿಂದ ಮೈಸೂರಿನಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆ ಅರ್ಭಟಕ್ಕೆ ಸುಮಾರು 100 ಅಧಿಕ ಮರಗಳು, 50ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಕೆಲ ವಾಹನಗಳು ಜಖಂಗೊಂಡಿವೆ.

ಕೊಳ್ಳೇಗಾಲದಲ್ಲಿ ಒಂದೇ ಕೋಮಿನ ಎರಡು ಗುಂಪುಗಳ ಮಾರಾಮಾರಿ: ನಾಲ್ವರಿಗೆ ಗಾಯ

ಕೊಳ್ಳೇಗಾಲ, ಮೇ 3(ನಾಗೇಂದ್ರಸ್ವಾಮಿ) – ಒಂದೇ ಕೋಮಿನ ಎರಡು ಗುಂಪುಗಳ ನಡುವೆ ಸಂಭವಿಸಿದ ಮಾರಾಮಾರಿಯಿಂದ ನಾಲ್ವರು ಗಾಯಗೊಂಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಹಳೆ ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ಮಂಗಳವಾರ ಮಧ್ಯಾಹ್ನ ಪಟ್ಟಣದ ಸಾಮಂದಗೇರಿ ಬೀದಿಯಲ್ಲಿ ಎರಡೂ ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಈ ವೇಳೆ ಪರಸ್ಪರ ಇಟ್ಟಿಗೆ, ಕಲ್ಲು, ದೊಣ್ಣೆಯಿಂದ ಬಡಿದಾಡಿಕೊಂಡಿದ್ದಾರೆ. ಗಲಾಟೆ ನಡೆಯುತ್ತಿದ್ದ ವಿಚಾರ ತಿಳಿಯುತ್ತಿದಂತೆ ಪೊಲೀಸರು ಸ್ಥಳಕ್ಕೆ ಧಾವಿಸಿ ಹೊಡೆದಾಟದಲ್ಲಿ ತೊಡಗಿದ್ದವರನ್ನು ಚದುರಿಸಿದ್ದಾರೆ. ಘಟನೆಯಲ್ಲಿ ನಾಲ್ವರಿಗೆ ಗಾಯಗಳಾಗಿದ್ದು, ಅವರಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಈ ವೇಳೆ ಆಸ್ಪತ್ರೆ ಮುಂಭಾಗ ಜಮಾವಣೆಗೊಂಡ ಕೆಲವು ಯುವಕರು ಘಟನೆಯನ್ನು ಖಂಡಿಸಿ, ಪ್ರತಿಭಟನೆ ನಡೆಸಿದರು. ಘಟನೆಗೆ ಕಾರಣರಾದವರನ್ನು ಬಂಧಿಸುವಂತೆ ಆಗ್ರಹಿಸಿದರು. ಈ ವೇಳೆ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ತಕ್ಷಣ ಸ್ಥಳಕ್ಕೆ ಆಗಮಿಸಿದ ಸಬ್‌ಇನ್ಸ್‌ಪೆಕ್ಟರ್ ಚೇತನ್ ಪ್ರತಿಭಟನಾಕಾರರ ಮನವೊಲಿಸಿ, ಘಟನೆಗೆ ಕಾರಣರಾದವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಬಳಿಕ, ಪ್ರತಿಭಟನೆ ಕೈಬಿಡಲಾಯಿತು.

ಘಟನೆ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಪಿಎಸ್‌ಐ ಚೇತನ್ ಮಾತನಾಡಿ, ಹಳೆ ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ಒಂದೇ ಕೋಮಿನ ಎರಡು ಗುಂಪುಗಳ ನಡುವೆ ಗಲಾಟೆಯಾಗಿದ್ದು, ಈ ವೇಳೆ 4 ಮಂದಿಗೆ ಸಣ್ಣ-ಪುಟ್ಟ ಗಾಯಗಳಾಗಿದೆ. ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆಕೊಡಿಸಿ ಮನೆಗೆ ಕಳುಹಿಸಲಾಗಿದೆ. ಈ ಸಂಬಂಧ 14 ಮಂದಿಯನ್ನು ಬಂಧಿಸಿ, ಬಿಡುಗಡೆಗೊಳಿಸಲಾಗಿದ್ದು, ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದರು.

ದೇವರಾಜ ಮೊಹಲ್ಲಾದಲ್ಲಿ ಅಕ್ರಮ ಖಾತೆ

ಪಾಲಿಕೆ ಮುಂದೆ ಪ್ರತಿಭಟನೆಗೆ ನಿರ್ಧಾರ

ಅನುಮತಿ ಕೋರಿ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಕೆ

ಮೈಸೂರು, ಮೇ 3- ಮೈಸೂರು ನಗರದ ಕೆಲವೆಡೆ ಅಕ್ರಮವಾಗಿ ನಿವೇಶನಗಳನ್ನು ಖಾತೆ ಮಾಡುತ್ತಿದ್ದು, ಅದನ್ನು ವಿರೋಧಿಸಿ ಪ್ರತಿಭಟನೆ ನಡೆಸಲು ಅನುಮತಿ ನೀಡುವಂತೆ ನಗರ ಪೊಲೀಸ್ ಆಯುಕ್ತರಲ್ಲಿ ಅನ್ಯಾಯಕ್ಕೊಳಗಾದವರು ಮನವಿ ಮಾಡಿದ್ದಾರೆ.

ಮೈಸೂರಿನ ದೇವರಾಜ ಮೊಹಲ್ಲಾದ ನಿವಾಸಿಗಳಾದ ವೆಂಕಟೇಶ್, ಸುರೇಶ್, ಕೃಷ್ಣ ಮತ್ತು ಮಹದೇವಿ ಅವರುಗಳು ಈ ಮನವಿ ಮಾಡಿದ್ದು, ಮೇ 4ರಿಂದ ನಗರಪಾಲಿಕೆ ಮುಂದೆ ನ್ಯಾಯ ಸಿಗುವವರೆಗೂ ಪ್ರತಿಭಟನೆ ನಡೆಸಲು ಅನುಮತಿ ನೀಡುವಂತೆ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ.

ದೇವರಾಜ ಮೊಹಲ್ಲಾ ಬಿಡಾರಂ ಕೃಷ್ಣಪ್ಪ ರಸ್ತೆಯಲ್ಲಿರುವ ತಮ್ಮ ನಿವೇಶನ ಸಂಖ್ಯೆ 587 ಆಗಿದ್ದು, 577 ಎಂದು ಬೇರೊಂದು ನಂಬರ್ ನೀಡಿ ಯಾವುದೇ ದಾಖಲಾತಿ ಇಲ್ಲದಿದ್ದರೂ ಅಕ್ರಮವಾಗಿ ಖಾತೆ ಮಾಡಿಕೊಡಲಾಗಿದೆ ಎಂದು ಆಪಾದಿಸಿರುವ ಅವರು, ಇದೇ ರೀತಿ ಇನ್ನು ಅನೇಕ ಅಕ್ರಮ ಖಾತೆಗಳನ್ನು ಮಾಡಲಾಗಿದೆ ಎಂದಿದ್ದಾರೆ.

ಇದಲ್ಲದೆ, 576ರಿಂದ 587, 27/1, 27/2, 27/3, 27/4ರ ಸ್ವತ್ತುಗಳಿಗೆ 585, 576, 588 ಎಂದು ಸಂಖ್ಯೆಗಳನ್ನು ನೀಡಿ ಖಾತೆ ಮಾಡಲಾಗಿದೆ ಎಂದು ಪೊಲೀಸ್ ಆಯುಕ್ತರಿಗೆ ನೀಡಿರುವ ಮನವಿಯಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಹಲವು ಬಾರಿ ನಗರಪಾಲಿಕೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗದ ಕಾರಣ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ತಮ್ಮ ಅನುಮತಿಗಾಗಿ ಮನವಿ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಸ್-ಬೈಕ್ ಡಿಕ್ಕಿ; ಯುವಕ ಸಾವು

ಹನೂರು, ಮೇ3(ಸೋಮು)-ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಯುವಕನೋರ್ವ ಮೃತಪಟ್ಟು, ಮತ್ತೋರ್ವ ಗಾಯಗೊಂಡಿರುವ ಘಟನೆ ಮಲೆಮಹದೇಶ್ವರ ಬೆಟ್ಟದಲ್ಲಿ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಕಮರಳ್ಳಿ ಗ್ರಾಮದ ಕೀರ್ತನ್(20) ಮೃತಪಟ್ಟಿದ್ದು, ಈತನ ಜೊತೆ ಬಂದಿದ್ದ ಮಾದೇಶ (20) ತೀವ್ರವಾಗಿ ಗಾಯಗೊಂಡಿದ್ದಾನೆ.

ರಾಯಲ್ ಎನ್‌ಫೀಲ್ ಬೈಕ್‌ನಲ್ಲಿ ಈ ಇಬ್ಬರು ಯುವಕರು ಮಲೆಮಾದೇಶ್ವರಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿ, ಹಿಂದಿರುಗುವಾಗ ಬೆಟ್ಟದ ತಪ್ಪಲಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡರು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಕೀರ್ತನ್ ಮೃತಪಟ್ಟರೆ, ಮಾದೇಶ್‌ನನ್ನು ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಲಾಯಿತು. ಈ ಸಂಬಂಧ ಮಲೆಮಾದೇಶ್ವರ ಬೆಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೆಂಕಟೇಶ ಪಾರಿಜಾತ ಆಧಾರಿತ ಶ್ರೀನಿವಾಸ ಕಲ್ಯಾಣ ವೈಭವಕ್ಕೆ ಚಾಲನೆ



ಮೈಸೂರು,ಮೇ3(ಜಿಎ)- ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಮೈಸೂರು ಹರಿದಾಸ ಸಂಗೀತ ಸಾಹಿತೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಗಾನಸಿರಿ ವೇದಾಂತ ಲಹರಿ ಭಾಗ-9 ನವೋತ್ಸವ ಹಾಗೂ ವೆಂಕಟೇಶ ಪಾರಿಜಾತ ಆಧಾರಿತ ಶ್ರೀನಿವಾಸ ಕಲ್ಯಾಣ ವೈಭವಕ್ಕೆ ವ್ಯಾಸರಾಜ ಮಠದ ಪೀಠಾಧಿಪತಿಗಳಾದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀ ಪಾದಂಗಳರವರು ಮಂಗಳವಾರ ಸಂಜೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಂಗೀತ ಮಾಧ್ಯಮದ ಮೂಲಕ ಜನರ ಆಧ್ಯಾತ್ಮಿಕ ಉನ್ನತಿಗೆ ಬೇಕಾಗಿರುವ ಅಂಶಗಳನ್ನು ತಲುಪಿಸುವುದು ಇದರ ಮುಖ್ಯ ಗುರಿ ಎಂದರು.

ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹ ಎಂದು ಕರೆಯುತ್ತಾರೆ. ಸಂಗೀತ ವಿದ್ವಾಂಸ ಆಗಿದ್ದ ಅವರು ಬರೆದಿರುವ ಅನೇಕ ಕೃತಿಗಳು ಸಂಗೀತ ಅಭ್ಯಾಸ ಮಾಡುವವರಿಗೆ ಮೆಟ್ಟಿಲುಗಳ ರೀತಿ ಉಪಯುಕ್ತವಾಗಿವೆ. ಅವರ ಗುರುಗಳಾದ ವ್ಯಾಸರಾಯರು ಸಹ ಸಂಗೀತತಜ್ಞರಾಗಿದ್ದರು. ರತ್ನಾಕರ ಎಂಬ ಗ್ರಂಥದಲ್ಲಿ ಅವರ ಹೆಸರನ್ನು ನಮೂದಿಸಲಾಗಿದೆ. ಅದೇ ರೀತಿ ಮೈಸೂರಿನಲ್ಲಿ ಬಿಡಾರಂ ಕೃಷ್ಣಪ್ಪನವರು ದಾಸರ ರಚನೆಗಳನ್ನು ಹೆಚ್ಚಾಗಿ ಹಾಡುತ್ತಿದ್ದರು ಎಂದು ಸ್ಮರಿಸಿದರು.

ಗಾನಸಿರಿ ವೇದಾಂತ ಲಹರಿ ಭಾಗ-9 ನವೋತ್ಸವದ ಮೊದಲ ದಿನವಾದ ಇಂದು ವಿದ್ವಾನ್ ರಾಯಚೂರು ಶೇಷಗಿರಿ ದಾಸ್ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ನಾಳೆ(ಮೇ4) ವಿದ್ವಾನ್ ಅನಂತ ಕುಲಕರ್ಣಿ ಅವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಕಾರ್ಯಕ್ರಮದಲ್ಲಿ ಡಾ.ಬಿ.ನಾ. ವಿಜಯೀಂದ್ರಾಚಾರ್ಯ, ಉತ್ತರಾದಿ ಮಠದ ಅನಿರುದ್ಧಾಚಾರ್ಯರು, ಮೈಲ್ಯಾಕ್ ಅಧ್ಯಕ್ಷ ಎಂ.ವಿ.ಫಣೀಶ್, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಪ್ರ ಮುಖಂಡ ಡಾ.ಕೆ.ರಘುರಾಮ್ ವಾಜಪೇಯಿ, ಹರಿದಾಸ ಸಾಹಿತ್ಯೋತ್ಸವ ಸಮಿತಿ ಸಂಸ್ಥಾಪನಾ ಕಾರ್ಯದರ್ಶಿ ಎಸ್. ರವಿಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದರು.

ಜೆಡಿಎಸ್ ಮುಖಂಡರಿಂದ ಬಸವಣ್ಣ ಪ್ರತಿಮೆಗೆ ಮಾಲಾರ್ಪಣೆ



ಮೈಸೂರು, ಮೇ 3 (ಆರ್‌ಕೆಬಿ)- ಸಮಾಜ ಸುಧಾರಕ, ವಿಶ್ವಗುರು ಬಸವಣ್ಣರವರ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ, ವಿಧಾನ ಪರಿಷತ್ತಿನ ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ರಾಜ್ಯಾಧ್ಯಕ್ಷ ಹೆಚ್.ಕೆ.ರಾಮು ನೇತೃತ್ವದಲ್ಲಿ ಮಂಗಳವಾರ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಗೌರವ ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ನಗರಪಾಲಿಕೆಯ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ನಿಗಮ ಮಂಡಳಿಯ ಮಾಜಿ ಅಧ್ಯಕ್ಷ ವಿವೇಕಾನಂದ, ಜೆಡಿಎಸ್ ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಮಾರಸ್ವಾಮಿ, ನಗರಪಾಲಿಕೆ ಸದಸ್ಯರಾದ ಎಸ್.ಬಿ.ಎಮ್.ಮಂಜು, ಎಂ.ಡಿ.ನಾಗರಾಜು, ಚಾಮರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಪಿ.ಮಂಜುನಾಥ್, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ.ಎನ್. ರಾಮು, ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯಾದರ್ಶನ್, ಅರಣ್ಯ ಇಲಾಖೆಯ ನಿವೃತ್ತ ಪತ್ರಾಂಕಿತ ಅಧಿಕಾರಿ ಕೆ.ಟಿ.ಚಂದ್ರೇಗೌಡ, ಜಗದೀಶ, ಹನುಮಂತಪ್ಪ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟಿಕೆಟ್ ಕಲೆಕ್ಟರ್ : "ಏನಯ್ಯ ಆರ್ಡಿನರಿ ಟಿಕೆಟ್ ತೆಗೊಂಡಿದೀಯಾ, ಇದು ಎಕ್ಸ್‌ಪ್ರೆಸ್ ರೈಲು ಗೊತ್ತಿಲ್ವೇ?"
ಪ್ರಯಾಣಿಕ : "ಏನ್ಮಾಡ್ಲಿ ಸ್ವಾಮಿ, ನನ್ನ ತಪ್ಪೆ? ಡ್ರೈವರ್‌ಗೆ ಹೇಳಿ ನಿಧಾನವಾಗಿ ಓಡಿಸು ಅಂತಾ!"

ಮೈಸೂರು ಮಿತ್ರ
ಬುಧವಾರ, 4 ಮೇ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ತಿಳಿದವರಿಂದ ತಿಳಿದುಕೊಳ್ಳೋಣ ತಿಳಿಯದವರಿಗೆ ತಿಳಿಸೋಣ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಮಟು ಕೊಬರಿಗೂ ಚಿಗುಟು ಬೆಲ್ಲಕ್ಕೂ ನಂಟೇ?

ನಿಮ್ಮ ಪತ್ರಗಳು

ನ್ಯಾಯಾಲಯಗಳ ವ್ಯವಹಾರಗಳಲ್ಲಿ ಸ್ಥಳೀಯ ಭಾಷೆಗಳಿಗೆ ಆದ್ಯತೆ ಅವಶ್ಯ

ಮಾನ್ಯರೆ,

ನ್ಯಾಯಾಲಯಗಳ ವ್ಯವಹಾರಗಳಲ್ಲಿ ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಬೇಕಿದೆ ಎಂದು ಹೇಳಿರುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಲಹೆ ಸೂಕ್ತ ಹಾಗೂ ಸಕಾಲಿಕವಾಗಿದೆ. ದೆಹಲಿಯಲ್ಲಿ ಇತ್ತೀಚೆಗೆ ನಡೆದ ಮುಖ್ಯಮಂತ್ರಿಗಳು ಮತ್ತು ಹೈಕೋರ್ಟುಗಳ ಮುಖ್ಯ ನ್ಯಾಯಮೂರ್ತಿಗಳ ಜಂಟಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿಗಳು, ನ್ಯಾಯಾಲಯಗಳಲ್ಲಿ ಸ್ಥಳೀಯ ಭಾಷೆಗಳನ್ನು ಉಪಯೋಗಿಸಿದರೆ, ಅದು ಸಾಮಾನ್ಯ ನಾಗರಿಕರ ವಿಶ್ವಾಸವನ್ನು ಹೆಚ್ಚಿಸುತ್ತದೆ ಎಂದು ಹೇಳಿದರು. ಇದು ಸಹ ಒಪ್ಪುವಂತಹ ವಿಚಾರವೇ ಸರಿ.

ನಮ್ಮ ರಾಜ್ಯದ ಅನೇಕ ನ್ಯಾಯಾಧೀಶರು, ಕನ್ನಡದಲ್ಲೇ ತಮ್ಮ ತೀರ್ಪುಗಳನ್ನು ನೀಡುವ ಮೂಲಕ ಭಾಷೆಯ ಬಗ್ಗೆ ತಮ್ಮ ಬದ್ಧತೆ ಹಾಗೂ ಗೌರವವನ್ನು ಪ್ರದರ್ಶಿಸುತ್ತಿದ್ದಾರೆ. ನ್ಯಾಯಾಲಯದ ವ್ಯವಹಾರಗಳಲ್ಲಿಯೂ ಸಹ ಹೆಚ್ಚು ಹೆಚ್ಚು ಕನ್ನಡ ಬಳಕೆಯಾಗುತ್ತಿದೆ. ಆದರೂ ಸಹ, ಕೆಲವು ನ್ಯಾಯಮೂರ್ತಿಗಳು ತಮ್ಮ ತೀರ್ಪುಗಳನ್ನು ಇಂಗ್ಲಿಷ್‌ನಲ್ಲಿಯೇ ನೀಡುತ್ತಿದ್ದಾರೆ. ಇದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ನಮ್ಮ ಸಂವಿಧಾನದಲ್ಲಿ ನ್ಯಾಯಾಲಯಗಳು ಸ್ಥಳೀಯ ಅಥವಾ ಆಂಗ್ಲ ಭಾಷೆಯಲ್ಲಿ ತೀರ್ಪು ನೀಡುವ ಅವಕಾಶವಿದೆ. ಆದರೆ, ನಮ್ಮ ಎಲ್ಲಾ ಗೌರವಾನ್ವಿತ ನ್ಯಾಯಮೂರ್ತಿಗಳು ಕನ್ನಡ ಭಾಷೆಯಲ್ಲಿಯೇ ತೀರ್ಪು ನೀಡುವಂತಹ ದಿನಗಳು ಬರಬೇಕು. ಕನ್ನಡ ಭಾಷೆ ನಮ್ಮ ತಾಯಿ ಮತ್ತು ನಮ್ಮ ಮಗು. ಈ ತಾಯಿಯನ್ನು ಗೌರವದಿಂದ ಕಾಣೋಣ. ಈ ಮಗುವನ್ನು ಪ್ರೀತಿಯಿಂದ ಬೆಳೆಸೋಣ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪೇ ಅಂಡ್ ಪ್ಲೇ ಇನ್ನೊಮ್ಮೆ ಪರಿಶೀಲಿಸಿ

ಮಾನ್ಯರೆ,

ಭಾರತ ಕ್ರೀಡೆಯಲ್ಲಿನ ಸಾಧನೆ ನಿರೀಕ್ಷಿತ ಮಟ್ಟ ತಲುಪದಿರುವುದಕ್ಕೆ ಸುಸಜ್ಜಿತ ಕ್ರೀಡಾಂಗಣಗಳ ಕೊರತೆ, ತರಬೇತಿದಾರರ ಕೊರತೆ, ಆರ್ಥಿಕ ಬೆಂಬಲ... ಇನ್ನೂ ಹತ್ತು ಹಲವು ಸವಾಲುಗಳಿವೆ. ಇವೆಲ್ಲವನ್ನೂ ಮೆಟ್ಟಿ ನಿಂತು ಒಲಂಪಿಕ್ ಕ್ರೀಡೆಗಳಲ್ಲಿ ಪದಕ ಗಳಿಸಿದರೂ ಅವರಿಗೆ ಉತ್ತಮ ಸ್ಥಾನ ದೊರಕುವುದು ಕಷ್ಟವಾಗಿತ್ತು ಅದರೆ ಪ್ರಸ್ತುತ ಕೇಂದ್ರ ಸರ್ಕಾರ ಇಂತಹ ಸಾಧಕರನ್ನು ಉತ್ತಮ ರೀತಿಯಲ್ಲಿ ಸನ್ಮಾನಿಸಿ ಸರ್ಕಾರಿ ಹುದ್ದೆಗಳನ್ನು ನೀಡಿದೆ. ರಾಜ್ಯ ಸರ್ಕಾರದ ಪೇ ಅಂಡ್ ಪ್ಲೇ ಯೋಜನೆಯನ್ನು ಜಾರಿಗೆ ತರಲು ಚಿಂತಿಸುತ್ತಿದ್ದು, ಇದರಿಂದಾಗಿ ಕ್ರೀಡಾಪಟುಗಳಿಗೆ ಹಿನ್ನಡೆಯಾಗುವ ಜೊತೆಗೆ ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಈ ಯೋಜನೆಯಿಂದ ಉತ್ತಮ ಸೌಲಭ್ಯ ವಿಲ್ಲದ ಕ್ರೀಡಾಂಗಣಗಳನ್ನು ಬಳಸಲು ಹೆಚ್ಚಿನ ಹಣ ಪಾವತಿ ಮಾಡಬೇಕಾಗುತ್ತದೆ.

ಹಾಕಿ, ಬ್ಯಾಸ್ಕೆಟ್ ಬಾಲ್, ಖೋಖೋ, ಟೆನಿಸ್, ಹ್ಯಾಂಡ್ ಬಾಲ್, ವಾಲಿಬಾಲ್, ಥ್ರೋ ಬಾಲ್ ಇತರೆ ಕ್ರೀಡೆಗಳಿಗೆ ಕ್ರೀಡಾಂಗಣ ಬಳಸಲು ವಲಯ ಮಟ್ಟದ ಪಂದ್ಯಾವಳಿಗಳಿಗೆ 1000 ರೂ, ತಾಲೂಕು ಮಟ್ಟದ ಪಂದ್ಯಾವಳಿಗಳಿಗೆ 2000ರೂ, ಜಿಲ್ಲಾ ಮಟ್ಟದ ಪಂದ್ಯಾವಳಿಗಳಿಗೆ 3000ರೂ, ವಿಭಾಗ ಮಟ್ಟಕ್ಕೆ 20000 ಸಾವಿರ ರೂ, ರಾಜ್ಯ ಮಟ್ಟಕ್ಕೆ 50000 ಸಾವಿರ, ರಾಷ್ಟ್ರ ಮಟ್ಟದ ಪಂದ್ಯಾವಳಿಗಳಿಗೆ 100000 ರೂ.ಗಳನ್ನು ಪಾವತಿಸಬೇಕಾಗುತ್ತದೆ.

ಕ್ರೀಡಾಂಗಣಗಳ ಸಮರ್ಪಕ ನಿರ್ವಹಣೆ ಮತ್ತು ಮೇಲ್ದರ್ಜೆಗೇರಿಸಲು ಬಳಕೆದಾರರ ಶುಲ್ಕ ವ್ಯವಸ್ಥೆ ಅಂದರೆ ಪೇ ಅಂಡ್ ಪ್ಲೇ ಜಾರಿಗೆ ತರಲು ಹೊರಟಿರುವುದು ಸೂಕ್ತವಲ್ಲ. ದೇಶ, ರಾಜ್ಯದಿಂದ ಕ್ರೀಡೆಯಲ್ಲಿ ಸಾಧನೆ ಮಾಡಬಯಸುವ ಕ್ರೀಡಾಪಟುಗಳಿಗೆ ಉಚಿತವಾಗಿ ಎಲ್ಲಾ ಸೌಲಭ್ಯ ಸರ್ಕಾರವೇ ನೀಡಬೇಕು. ಇಲ್ಲವಾದರೆ ಕಡಿಮೆ ಬೆಲೆಯಲ್ಲಿ ಕ್ರೀಡಾಂಗಣಗಳನ್ನು ಬಳಸಲು ಅನುವು ಮಾಡಿಕೊಡಬೇಕು. ಇದರಿಂದಾಗಿ ಕ್ರೀಡಾಪಟುಗಳಿಗೆ ಉತ್ತೇಜನ ದೊರಕಿದಂತಾಗಿ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಕ್ರೀಡಾಳುಗಳು ಉತ್ತಮ ಸಾಧನೆ ಮಾಡುವಲ್ಲಿ ಅವರನ್ನು ಸರ್ಕಾರ ಉತ್ತೇಜಿಸಬೇಕು.

–ರಾ.ಸುಮ ಭಟ್,
ಚಿಕ್ಕಮಗಳೂರು.

ರಾಜ್ಯ ಸರ್ಕಾರಿ ಪರೀಕ್ಷೆಗಳು –ಬದಲಾವಣೆ ಅಗತ್ಯವಿದೆ

ಮಾನ್ಯರೆ,

ಸರ್ಕಾರದ ಆಡಳಿತ ಯಂತ್ರದ ಅದಕ್ಷತೆಯಿಂದಾಗಿ, ನೌಕರರ, ರಾಜಕಾರಣಿಗಳ ಭ್ರಷ್ಟಾಚಾರದಿಂದಾಗಿ ಈಗಾಗಲೇ ಆಯ್ಕೆಯಾಗಿರುವ PSI ಅಭ್ಯರ್ಥಿಗಳ ಪಟ್ಟಿಯು ರದ್ದಾಗಿ, ಈಗ ಹೊಸ ಪರೀಕ್ಷೆಯೊಂದೇ ಮಾರ್ಗ ಎನ್ನುವ ಸ್ಥಿತಿಯಲ್ಲಿದೆ. ಈಗಾಗಲೇ ಅನುಭವವಾಗಿರುವ ಪ್ರಕಾರ, ಆಡಳಿತ ಯಂತ್ರ ಲಂಚಮಯವಾಗಿದೆ. ಎಲ್ಲಿ ಕೈ ಹಾಕಿದರೆ ಅಲ್ಲಿ ಹಣ. ಇನ್ನು KPSC ಬಗ್ಗೆ ಹೇಳುವಂತೆಯೇ ಇಲ್ಲ. ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕಾಗಿರುವುದರಿಂದ ರಾಜಕಾರಣಿಗಳು, ಅಧಿಕಾರಿಗಳು ಹಣ ಮಾಡಿಕೊಳ್ಳುವುದನ್ನು ತಪ್ಪಿಸಲು ಎಲ್ಲಾ ಪರೀಕ್ಷೆಗಳನ್ನು ಸ್ಟಾಫ್ ಸೆಲೆಕ್ಷನ್ ಕಮಿಷನ್ ಅಥವಾ UPSCಗೆ ಒಪ್ಪಿಸುವುದು ಉತ್ತಮವೆಂದು ಭಾವನೆ. ವೈಯಕ್ತಿಕ ಸಂದರ್ಶನವನ್ನು ಪೂರಾ ನಿಲ್ಲಿಸುವುದೇ ಒಳ್ಳೆಯದು. ಲಂಚಕ್ಕೆ ಅದು ಒಂದು ದಾರಿ. ಇನ್ನು ವರ್ಗಾವಣೆ ಶುರುವಾಗಿದೆ. ಅಲ್ಲೂ ಕುರುಡು ಕಾಂಚಾಣ ಕುಣಿಯುವ ಸಾಧ್ಯತೆಯೇ ಬಹಳ ಇದೆ. ಶಾಸಕರು, ಮಂತ್ರಿಗಳು, ಉನ್ನತ ಅಧಿಕಾರಿಗಳು ವರ್ಗಾವಣೆಯಲ್ಲಿ ಮೂಗು ತೂರಿಸದಿದ್ದರೆ ಒಳ್ಳೆಯದು.

–ಅಕ್ಕಿಹೆಬ್ಬಾಳು ವೆಂಕಟೇಶ, ಮೈಸೂರು

ಬಸವಣ್ಣನವರ ವಿಚಾರಧಾರೆ ಮೌಲ್ಯಯುತವಾದದ್ದು

ಮಾನ್ಯರೆ,

ಜಗತ್ತಿನಲ್ಲಿ ಹಲವಾರು ಸಾಧು ಸಂತರು ಜನಿಸಿ ತಮ್ಮದೇ ಆದ ವಿಚಾರಧಾರೆಗಳನ್ನು ಪ್ರಸಾರ ಮಾಡಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇವರಲ್ಲಿ ಪ್ರಮುಖವಾದವರು ವಿಶ್ವದಲ್ಲಿ ಮಾನವರು ಎಲ್ಲರೂ ಒಂದೇ ಎಂದು ಸಾರಿದ ವಿಶ್ವ ಮಾನವ ಬಸವಣ್ಣನವರು.

ಅಣ್ಣ ಬಸವಣ್ಣನವರು ರಚಿಸಿದ ವಚನಗಳು ಮೌಲ್ಯಯುತವಾದ ಸಮಾಜ ನಿರ್ಮಾಣವಾಗಲು ಅಂದಿಗೂ –ಇಂದಿಗೂ ಪ್ರಮುಖ ಪಾತ್ರವಹಿಸುತ್ತವೆ. ಅದರಲ್ಲಿ ಕಳಬೇಡ ಕೊಲಬೇಡ ಹುಸಿಯ ನುಡಿಯಬೇಡ... ಈ ವಚನವನ್ನು ಮಾನವರು ಅನುಸರಿಸಿದರೆ ಮೌಲ್ಯಯುತವಾದ ಬದುಕು ಕಟ್ಟಿಕೊಳ್ಳಬಹುದು.

ಹಿಂದೆ ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿ ಎಲ್ಲರಿಗೂ ಅನುಭವ ನೀಡಿದರು. ಸಮಾಜದ ಸರಿ–ತಪ್ಪುಗಳ ಚರ್ಚೆಗೆ ಒಂದು ವೇದಿಕೆ ಕಲ್ಪಿಸಿಕೊಟ್ಟರು. ಈ ದಿನದ ಸಂಸತ್ತು ರಚನೆಗೆ ಆಗಲೇ ಕಾರಣಿಭೂತಿಯಾದರು. ಆದರೆ ಈ ದಿನ ಸಂಸತ್ತು ಯಾವ ರೀತಿ ಕಾರ್ಯನಿರ್ವಹಿಸುತ್ತಿದೆ ಎಂಬುದು ಸಮಾಜದ ಪ್ರತಿಯೊಬ್ಬರಿಗೂ ಗೊತ್ತಿರುವ ಸಂಗತಿಯಾಗಿದೆ ಸಮಾಜದಲ್ಲಿ ಕಾಯಕಬಂಧುಗಳೇ ದೇವರುಗಳು, ಬಸವಣ್ಣ ಕಾಯಕವೇ ಕೈಲಾಸ ಎಂದು ಕಾಯಕದ ಮಹತ್ವ ಸಾರಿದರು. ಕಾಯಕ ಪ್ರಾಮಾಣಿಕವಾಗಿರಬೇಕು ಎಂದು ಹೇಳಿದರು. ಬಸವಣ್ಣನವರ ವಿಚಾರಧಾರೆಗಳನ್ನು ಸಮಾಜದ ಎಲ್ಲಾ ವರ್ಗದವರು ಅನುಸರಿಸಿದರೆ ಸಮಾಜದಲ್ಲಿ ಶಾಂತಿಯ ವಾತಾವರಣ ನಿರ್ಮಾಣವಾಗುತ್ತದೆ. ಬಸವಣ್ಣನವರ ಜಯಂತಿ ದಿನ ನಾವೆಲ್ಲರೂ ಸ್ವಲ್ಪ ಮಟ್ಟಿಗಾದರೂ ಅವರ ತತ್ವಗಳನ್ನು ಅನುಸರಿಸಿ ಮಾದರಿ ಆಗೋಣ ಎಂಬುದು ನಮ್ಮ ಅಭಿಮತ.

–ಬಸವರಾಜಪ್ಪ ಹೆಚ್, ಕೆ.ಆರ್.ನಗರ ತಾ.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಶಂಕರ, ರಾಮಾನುಜ, ಬಸವಣ್ಣ



ಶಂಕರಾಚಾರ್ಯರು



ರಾಮಾನುಜಾಚಾರ್ಯರು



ಬಸವಣ್ಣನವರು

ಈ ವಾರವು ಅತ್ಯಂತ ಶುಭವಾರ. ಏಕೆಂದರೆ ಮೂವರು ಮಹಾನುಭಾವರ ಜಯಂತಿಯನ್ನು ಈ ವಾರದಲ್ಲಿ ಆಚರಿಸುತ್ತಿದ್ದೇವೆ. ಮಂಗಳವಾರ (3.5.2022) ಬಸವ ಜಯಂತಿ, ಗುರುವಾರ ರಾಮಾನುಜ ಜಯಂತಿ, ಶುಕ್ರವಾರ ಶಂಕರ ಜಯಂತಿ. ಈ ಒಬ್ಬೊಬ್ಬರೂ ಭಾರತ ದೇಶದ ಧರ್ಮಕ್ಕೂ ಸಂಸ್ಕೃತಿಗೂ ನೀಡಿದ ಕೊಡುಗೆ ಅಸಾಧಾರಣ. ಅವರ ಸ್ಮರಣ ಪುಣ್ಯಕಾರಣ.

ಮೊದಲನೆಯದಾಗಿ ಶ್ರೀ ಶಂಕರಾಚಾರ್ಯರ ಹಿರಿಮೆಯನ್ನು ಗಮನಿಸೋಣ. ಉಪನಿಷತ್ತುಗಳಿಗೆ, ಭಗವದ್ಗೀತೆಗೆ, ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದು ವೇದಾಂತಶಾಸ್ತ್ರವು ಸ್ಥಿರವಾಗಿ ನಿಲ್ಲುವಂತೆ ಮಾಡಿದ ಕೀರ್ತಿ ಅವರಿಗೇ ಸಲ್ಲುತ್ತದೆ. ಕೇರಳದಲ್ಲಿ ಹುಟ್ಟಿದ ಆದಿ ಶಂಕರರು ಭೂಲೋಕದಲ್ಲಿದ್ದುದು ಕೇವಲ ಮೂವತ್ತೆರಡು ವರ್ಷ. ಅಷ್ಟರಲ್ಲಿ ಅವರು ಸಮಸ್ತ ವೇದಗಳ, ಉಪನಿಷತ್ತುಗಳ ಮತ್ತು ಪುರಾಣಗಳ ನ್ಯಾಯ, ವೈಶೇಷಿಕ, ಜೈನ, ಬೌದ್ಧ, ಸಾಂಖ್ಯ, ಯೋಗ ಮುಂತಾದ ದರ್ಶನಗಳ ತಲಸ್ಪರ್ಶಿ ಜ್ಞಾನವನ್ನು ಪಡೆದುಕೊಂಡಿದ್ದರು. ಅಷ್ಟೇ ಅಲ್ಲದೆ ಸಂಸ್ಕೃತ ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವ ಅಸದೃಶ. ಪತಂಜಲಿಯ ವ್ಯಾಕರಣ ಮಹಾಭಾಷ್ಯ ರಚನೆಯಾದ ಎಂಟು ನೂರು ವರ್ಷಗಳಾದ ಮೇಲೆ ತತ್ಸಮಾನ ಶೈಲಿಯಲ್ಲಿ ಬ್ರಹ್ಮಸೂತ್ರ ಭಾಷ್ಯವನ್ನು ಆದಿಶಂಕರಾಚಾರ್ಯರು ರಚಿಸಿದರು. ಸಮಗ್ರ ಭಾರತ ದೇಶವನ್ನು ಕಾಲು ನಡಿಗೆಯಲ್ಲೇ ಸುತ್ತಿ ಔಪನಿಷದ ದರ್ಶನವನ್ನು ಪ್ರತಿಷ್ಠಾಪಿಸಿದ ಆದಿ ಶಂಕರಾಚಾರ್ಯರು ಜಗತ್ತಿನ ಶ್ರೇಷ್ಠ ದಾರ್ಶನಿಕರ ಪಂಕ್ತಿಯಲ್ಲಿ ಕುಳಿತುಕೊಳ್ಳಲು ಅರ್ಹರಾಗಿದ್ದಾರೆ. ಒಂದೇ ಬ್ರಹ್ಮ ಚೈತನ್ಯವು ಸಮಸ್ತ ಜೀವಿಗಳಲ್ಲಿದೆ. ಅದೇ ಪಾರಮಾರ್ಥಿಕ ಸತ್ಯ, ಉಳಿದುದೆಲ್ಲ ಕೇವಲ ವ್ಯಾವಹಾರಿಕ ಸತ್ಯ ಎಂಬುದನ್ನು ಧೈರ್ಯವಾಗಿ ಸಾಧಿಸಿ ಸಾರಿದ ಆದಿ ಶಂಕರರನ್ನು ಶಂಕರನ ಅವತಾರ ಎಂದು ಭಕ್ತರು ಭಾವಿಸಿದುದರಲ್ಲಿ ಆಶ್ಚರ್ಯವಿಲ್ಲ. ಅವರು ಬರೆದ ಶಾರೀರಕ ಭಾಷ್ಯಕ್ಕೆ ಇರುವ ವ್ಯಾಖ್ಯಾನಗಳಿಗೂ ಉಪವ್ಯಾಖ್ಯಾನಗಳಿಗೂ ಲೆಕ್ಕವಿಲ್ಲ.

ಕಾವ್ಯಶಕ್ತಿಯಲ್ಲೂ ಶಂಕರಾಚಾರ್ಯರು ಅದ್ವಿತೀಯರಾಗಿದ್ದು. ಅವರು ರಚಿಸಿದ ಪ್ರಕರಣ ಗ್ರಂಥಗಳೂ ಸ್ತೋತ್ರಗಳೂ ಇಂದಿಗೂ ಜನಪ್ರಿಯ. ಸೌಂದರ್ಯ ಲಹರೀ, ಶಿವಾನಂದ ಲಹರೀ ಶಾರದಾ ಭುಜಂಗ ಸ್ತೋತ್ರ ಇತ್ಯಾದಿಗಳು ಈಗಲೂ ಜನರ ನಾಲಿಗೆಗಳ ಮೇಲೆ ನಲಿಯುತ್ತಿವೆ. ಶಂಕರಾಚಾರ್ಯರ ಗ್ರಂಥಗಳನ್ನು ಓದದೆ ಭಾರತ ದೇಶದ ದರ್ಶನಗಳನ್ನು ಅರ್ಥ ಮಾಡಿಕೊಳ್ಳುವುದು ಅಸಾಧ್ಯ. ಜ್ಞಾನಮಾರ್ಗಕ್ಕೆ ಸ್ಥಿರವಾದ ಅವಲಂಬನವನ್ನು ಒದಗಿಸಿಕೊಟ್ಟ ಶ್ರೀಶಂಕರರಿಗೆ ನಮ್ಮ ಪ್ರಥಮ ನಮನ.

ಶ್ರೀ ರಾಮಾನುಜಾಚಾರ್ಯರು ಹನ್ನೊಂದನೆಯ ಮತ್ತು ಹನ್ನೆರಡನೆಯ ಶತಮಾನಗಳಲ್ಲಿ ಬೆಳಗಿದ ಮಹಾಪ್ರಕಾಶ ನಾಥಮುನಿ, ಯಾಮುನಾಚಾರ್ಯ, ಆಳ್ವಾರರು ಅನುಸರಿಸಿದ ಭಕ್ತಿಪಥವನ್ನು ಸುಸ್ಥಿರವಾಗಿ ನಿಲ್ಲಿಸಿದ ಮಹಾನುಭಾವರು ರಾಮಾನುಜರು. ಶ್ರೀಮನ್ನಾರಾಯಣನೇ ಪರಬ್ರಹ್ಮ ಎಂಬುದನ್ನು ಅವರು ಶ್ರೀ ಭಾಷ್ಯದಲ್ಲೂ ಭಗವದ್ಗೀತಾ ಭಾಷ್ಯದಲ್ಲೂ ಪ್ರತಿಪಾದಿಸಿದ್ದಾರೆ. ಅವರು ಸ್ನಾನಕ್ಕಾಗಿ ನದಿಗೆ ಹೋಗುವಾಗ ಬ್ರಾಹ್ಮಣ ಶಿಷ್ಯರ ಹೆಗಲ ಮೇಲೆ ಕೈಗಳನ್ನಿಟ್ಟು ಹೋಗಿ ಸ್ನಾನ ಮುಗಿಸಿಕೊಂಡು ಪವಿತ್ರರಾಗಿ ಪೂಜೆಗೆ ಬರುವಾಗ ಧನುರ್ದಾಸನೆಂಬ, ಬೇರೆಯವರು ಕೆಳ ಜಾತಿಯವನೆಂದು ಭಾವಿಸಿದ್ದ ಶಿಷ್ಯನ ಹೆಗಲ ಮೇಲೆ ತಮ್ಮ ಕೈಯನ್ನಿಟ್ಟು ಬರುತ್ತಿದ್ದರೆಂಬುದು ಆ ಕಾಲದಲ್ಲೇ ಅವರಿಗಿದ್ದ ಕ್ರಾಂತಿಕಾರಕ ಮನೋಭಾವವನ್ನು ತೋರಿಸುತ್ತದೆ. ಭಕ್ತಿಯು ಮಾನವನನ್ನು ಮೇಲೆ ಒಯ್ಯುತ್ತದೆ, ಜಾತಿಯಲ್ಲ ಎಂದು ಅವರು ಸ್ವೋದಾಹರಣೆಯಿಂದ ಪ್ರತಿಪಾದಿಸಿದರು. ಕಾಂಚೀಪುರದ ಬಳಿ ಇರುವ ಶ್ರೀ ಪೆರಂಬುದೂರಿನಲ್ಲಿ ಜನಿಸಿದ್ದ ಶ್ರೀರಾಮಾನುಜಾಚಾರ್ಯರು ಕರ್ನಾಟಕದ ಮೇಲುಕೋಟೆ ಎಂಬ ಕ್ಷೇತ್ರದಲ್ಲಿ ನೆಲೆಸಿ ವಿಷ್ಣು ಭಕ್ತಿಯ ಪಾರಮ್ಯವನ್ನು ಮೆರೆಸಿದರು. ಕರ್ನಾಟಕದಲ್ಲಿ ಇಂದು ನಾವು ಕಾಣುತ್ತಿರುವ ಶಿಲ್ಪಕಲಾ ವೈಭವಕ್ಕೆ, ಸುಂದರ ದೇವಾಲಯಗಳ ನಿರ್ಮಾಣದ ಉತ್ತುಂಗತೆಗೆ ಮುಖ್ಯ ಕಾರಣ ಶ್ರೀರಾಮಾನುಜ ಸಿದ್ಧಾಂತವೇ. ಸಾಮಾನ್ಯ ಜನರ, ರೈತರ, ದುರ್ಬಲರ ಏಳ್ಗೆಗಾಗಿ ಕಾಯೇನ ವಾಚಾ ಮನಸಾ ದುಡಿದವರು ಶ್ರೀರಾಮಾನುಜಾಚಾರ್ಯರು. ತೊಂಡನೂರು (ತೊಣ್ಣೂರು) ಎಂಬ ಹಳ್ಳಿಯಲ್ಲಿ ಅವರು ನಿರ್ಮಿಸಿದ ಕೆರೆ ಸಹಸ್ರ ವರ್ಷಗಳಾದ ಮೇಲೂ ನೂರಾರು ಜನರ ಜೀವನಾಧಾರವಾಗಿರುವುದನ್ನು ನೋಡಿದಾಗ ಅವರ ಜೀವನ ಪ್ರೀತಿ, ಪ್ರಜೆಗಳಲ್ಲಿ ಅವರಿಗಿದ್ದ ಕರುಣೆ ವ್ಯಕ್ತವಾಗುತ್ತದೆ.

ಅವರು ಲೋಕೋದ್ಧಾರಕ್ಕಾಗಿ ನಿರೂಪಿಸಿದ ಮುಖ್ಯ ತತ್ತ್ವ ಪ್ರಪತ್ತಿ. ಪ್ರಪತ್ತಿ ಎಂದರೆ ಶರಣಾಗತಿ. ಭಕ್ತಿ ಯೋಗ ಎಂಬುದು ಜ್ಞಾನ ವೃಕ್ಷದ ಹೂವಾದರೆ ಪ್ರಪತ್ತಿಯು ಅದರ ಹಣ್ಣು ಜ್ಞಾನಿಯು ಭಗವಂತನಲ್ಲಿ ಸಂಪೂರ್ಣ ಶರಣಾಗತಿಯನ್ನು ಮಾಡಿ ನಾನು ನಿನ್ನ ದಾಸ, ನನ್ನ ರಕ್ಷಣೆಯ ಭಾರ ನಿನ್ನದು ಎಂದಾಗ ಭಗವಂತನು ಅವನನ್ನು ಅನುಗ್ರಹಿಸುತ್ತಾನೆ. ಸಕಲ ಕಲ್ಯಾಣಗುಣಪರಿಪೂರ್ಣನಾದ ಶ್ರೀಮನ್ನಾರಾಯಣನು ಕರುಣಿಸದೆ ಮುಕ್ತಿಯು ದೊರಕದು. ಅವನ ಸಮಾಶ್ರಯಣವೇ ಮುಕ್ತಿಗೆ ನೇರ ಮಾರ್ಗ. ಇದನ್ನೇ ಶ್ರೀಮದ್ರಾಮಾಯಣವೂ, ಶ್ರೀ ಭಗವದ್ಗೀತೆಯೂ ಪ್ರತಿಪಾದಿಸಿವೆ. ಜಾತಿ, ಮತ, ಕುಲ, ಲಿಂಗ, ವಯಸ್ಸು ಎಂಬ ಯಾವುದೂ ಮುಖ್ಯವಲ್ಲ. ಮುಖ್ಯವಾದ ಅರ್ಹತೆ ಭಗವದ್ಭಕ್ತಿ ಎಂಬುದು ರಾಮಾನುಜ ಸಿದ್ಧಾಂತದ ತಿರುಳು.

ಭಗವಂತನ ಪೂಜೆಯಲ್ಲಿ ದೇವಭಾಷೆ ಸಂಸ್ಕೃತಕ್ಕೆ ಇದ್ದ ಸ್ಥಾನವನ್ನು ದೇಶ ಭಾಷೆಗೂ ಕೊಡಬೇಕು ಎಂಬ ಶ್ರೇಷ್ಠ ನೀತಿಯನ್ನು ಜಾರಿಗೆ ತಂದ ಶ್ರೀರಾಮಾನುಜಾಚಾರ್ಯರಿಗೆ ನಮ್ಮ ನಮ್ರ ನಮನ.

ಕರ್ನಾಟಕದಲ್ಲಿ ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಜನಿಸಿ ಶಿವಭಕ್ತಿಯ ತಂಗಾಳಿಯನ್ನು ಬೀಸಿ ಸಮಾಜಕ್ಕೆ ಹೊಸ ಚೈತನ್ಯವನ್ನು ತುಂಬಿಸಿದ ಮಹಾ ಪುರುಷರು ಜಗಜ್ಯೋತಿ ಎಂದು ಪ್ರಸಿದ್ಧರಾದ ಬಸವಣ್ಣನವರು. ಸಾಮಾಜಿಕವಾಗಿ, ವೈಚಾರಿಕವಾಗಿ, ಧಾರ್ಮಿಕವಾಗಿ, ಭಾಷಿಕವಾಗಿ ಬಸವಣ್ಣ ಮಾಡಿದ ಮಾರ್ಪಾಟು, ತಂದ ಪರಿವರ್ತನೆ ಜಗತ್ತಿನಲ್ಲೇ ಅಪೂರ್ವ. ಜಾತಿಗಿಂತ ನೀತಿ ಮುಖ್ಯ, ಮಾತಿಗಿಂತಲೂ ಕೃತಿ ಮುಖ್ಯ, ಪಾಂಡಿತ್ಯಕ್ಕಿಂತ ಭಕ್ತಿ ಮುಖ್ಯ ಎಂಬುದನ್ನು ತಮ್ಮ ಬದುಕಿನಿಂದಲೇ ತೋರಿಸಿದ ಬಸವಣ್ಣ ಸಂಪ್ರದಾಯದ ಸಂಕೋಲೆಗಳನ್ನು ಕಡಿದು ಹಾಕಿ ಸ್ತ್ರೀ ಪುರುಷ ಸಮಾನತೆಯನ್ನು ಕಾರ್ಯದಲ್ಲಿ ತೋರಿಸಿದರು.

ಅವರ ನೇತೃತ್ವದ ಅನುಭವ ಮಂಟಪ ಮುಕ್ತ ಚಿಂತನೆಯ ತಾಣವಾಯಿತು. ಚೆನ್ನ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭು, ಸಿದ್ಧರಾಮ ಮುಂತಾದ ಶರಣರು ಮಾಡಿದ ಚಿಂತನೆಗಳು ನೂರು ಕಾಲಕ್ಕೂ ನಿಲ್ಲುವ ಅನುಭವಾ ತೀತ ಅನುಭಾವದ ಕನ್ನಡಿಗಳಾಗಿವೆ. ಶರಣಪಥ ವಿಶ್ವಪಥವಾಗಿದೆ.


ಕನ್ನಡ ಭಾಷೆಯ ಪಂಡಿತ ಪ್ರಿಯವಾಗಿದ್ದ ಸಾಹಿತ್ಯವು ಸಮಾಜಮುಖಿಯಾಗಿ ಸರಳ ರೂಪದಲ್ಲಿ ಸರ್ವಜನಪ್ರಿಯವಾಗಲು ಬಸವೋಪಜ್ಞವಾದ ವಚನಸಾಹಿತ್ಯವು ಕಾರಣವಾಯಿತು. ಕಲ್ಲಿನಂತೆ ಕಾಂತಿ ಹೀನವಾಗಿದ್ದ ಅಚ್ಚ ಕನ್ನಡ ಪದಗಳು ಹೊಸ ಚೈತನ್ಯವನ್ನೂ ಅರ್ಥ ವೈಶಾಲ್ಯವನ್ನೂ ಪಡೆದುಕೊಂಡು ಆಧ್ಯಾತ್ಮಿಕ ಚಿಂತನೆಯ ಶಕ್ತಿಗಳಾದುವು. ಪೂಜೆಯೆಂಬುದು ಒಬ್ಬನ ಪರವಾಗಿ ಮತ್ತೊಬ್ಬನು ಮಾಡುವ ಕಾಟಾಚಾರದ ಕೆಲಸವಲ್ಲ, ಭಕ್ತನು ಸಾಕ್ಷಾತ್ತಾಗಿ ಭಗವಂತನಿಗೆ ಸಲ್ಲಿಸುವ ಕೈಂಕರ್ಯ ಎಂಬುದನ್ನು ಅನುಷ್ಠಾನಕ್ಕೆ ತರಲು ತಂದ ಇಷ್ಟಲಿಂಗಾರ್ಚನೆ ಧರ್ಮದ ಕ್ಷೇತ್ರದಲ್ಲಿ ಬಂದ ಅಭೂತಪೂರ್ವ ಆವಿಷ್ಕರಣವಾಗಿತ್ತು. ದುಡಿಯದೆ ತಿನ್ನುವ ಅನ್ನ ಕಸ, ದುಡಿದು ಕಾಯಕದಿಂದ ಸಂಪಾದಿಸಿ ತಿನ್ನುವ ಅನ್ನ ಪ್ರಸಾದ, ಸಮಾಜದ ಯಾವನೂ ಅಲಸನಾಗಿ ಅನ್ನ ತಿಂದು ಕಳ್ಳನಾಗಬಾರದು ಎಂದು ಸಾರಿದ ಬಸವಣ್ಣನವರು ಸಮಾಜೋಪಯೋಗಿಯಾದ ಎಲ್ಲಾ ಕೆಲಸವೂ ಭಗವತ್ಪೂಜೆ ಎಂದು ತಿಳಿಸಿ ಹೇಳಿ ಸಮಸ್ತ ವಿಶ್ವದ ಗುರು ಎನಿಸಿದರು.

ವಿಶ್ವಕ್ಕೆ ಕನ್ನಡದ ನೆಲ ಕೊಟ್ಟ ಅತ್ಯಂತ ಅಮೂಲ್ಯ ರತ್ನವೆಂದರೆ ಬಸವಣ್ಣನವರೇ. ಕನ್ನಡ ಸಾಹಿತ್ಯ ತನ್ನ ವೈಶಿಷ್ಟ್ಯವನ್ನು ತೋರಿಸಲು ಶಕ್ತವಾಗಿದ್ದರೆ ಅದು ವಚನ ಸಾಹಿತ್ಯದಿಂದಲೇ. ಸಮಾಜದಲ್ಲಿ ಇಂದು ನಾವು ತರಲು ಅಪೇಕ್ಷಿಸುವ ಸರ್ವ ಸಮಾನತೆಯನ್ನು ಎಂಟು ನೂರು ವರ್ಷಗಳ ಹಿಂದೆಯೇ ಜಾರಿಗೊಳಿಸಿದ್ದ ಬಸವಣ್ಣನವರ ಜಯಂತಿ ಅರ್ಥಪೂರ್ಣವಾಗಬೇಕು. ಆ ಭಕ್ತಿ ಭಂಡಾರಿಗೆ ನಮ್ಮ ಸಹಸ್ರ ನಮನ.

ಖೇಲೋ ಇಂಡಿಯಾ ಕ್ರೀಡಾಕೂಟ ಸಮಾರೋಪ

ಬಡವರು, ಬುಡಕಟ್ಟು ಕ್ರೀಡಾಪಟುಗಳಿಗೆ ಉತ್ತೇಜನ: ಅಮಿತ್ ಷಾ

ಸಾವಿರಾರು ಕ್ರೀಡಾಪಟುಗಳು, ಗಣ್ಯರು ಭಾಗಿ



ಬೆಂಗಳೂರು, ಮೇ 3– ಜೀವನದಲ್ಲಿ ಗುರಿ ಮುಟ್ಟಲು ಕ್ರೀಡೆ ಅತ್ಯಂತ ಅಗತ್ಯ ಎಂದು ತಿಳಿಸಿದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಗ್ರಾಮೀಣ ಮತ್ತು ಬುಡಕಟ್ಟು ಸಮಾಜದ ಕ್ರೀಡಾಪಟುಗಳಿಗೆ ಸರ್ಕಾರದ ವತಿಯಿಂದ ಉತ್ತೇಜನ ನೀಡಲಾಗುವುದು ಎಂದರು.

ಇಲ್ಲಿನ ಕಂಠೀರವ ಸ್ಟೇಡಿಯಂನಲ್ಲಿ ಇಂದು ನಡೆದ 'ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್' ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದಲ್ಲಿ ಇಂದು ಕ್ರೀಡಾ ಕ್ಷೇತ್ರವೂ ಕೂಡ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದರು.

ಪ್ರತಿಭಾವಂತರು, ಗ್ರಾಮೀಣ ಮತ್ತು ಬುಡಕಟ್ಟು ಸಮಾಜದ ಕ್ರೀಡಾಪಟುಗಳಿಗೆ ಉತ್ತಮವಾದ ಉಚಿತ ತರಬೇತಿ ನೀಡುವ ಮೂಲಕ ಅವರನ್ನು ಉತ್ತೇಜಿಸಲಾಗುವುದು ಎಂದ ಅವರು ಕ್ರೀಡೆ ಜೀವನದ ಮಹತ್ವ ಪೂರ್ಣ ಅಂಗ ಎಂದರು. ನಂತರ ಕಾಫಿ ಟೇಬಲ್ ಪುಸ್ತಕ ಬಿಡುಗಡೆ ಮಾಡಿದರು.

ಇದಕ್ಕೂ ಮುನ್ನ ಮಾತನಾಡಿದ ಕೇಂದ್ರದ ಸಚಿವ ಅನುರಾಗ್ ಠಾಕೂರ್, ಖೇಲೋ ಇಂಡಿಯಾ ಪ್ರಧಾನಿಯವರ ಕನಸು. ಈ ಕ್ರೀಡಾಕೂಟ ಯಶಸ್ವಿಯಾಗಿದೆ. ಇದಕ್ಕೆ ಕಾರಣ ಕರ್ತರಾದ ಮುಖ್ಯಮಂತ್ರಿಗಳು, ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುವೆ ಎಂದರು.

ಈ ಕ್ರೀಡಾಕೂಟದಲ್ಲಿ ರಾಷ್ಟ್ರ ಮಟ್ಟದ ಎರಡು ದಾಖಲೆಗಳು ನಿರ್ಮಾಣವಾಗಿವೆ. ಇದು ಹೆಮ್ಮೆ ಪಡುವ ವಿಚಾರ ಎಂದ ಅವರು, ಕ್ರೀಡೆಯಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕನ್ನಡದಲ್ಲಿ ಭಾಷಣ ಮಾಡಿ ರಾಜ್ಯದಿಂದ ಕನಿಷ್ಠ 10 ಕ್ರೀಡಾಪಟುಗಳನ್ನು ಒಲಿಂಪಿಕ್ಸ್‌ಗೆ ಕಳುಹಿಸುತ್ತೇವೆ. ಇದಕ್ಕಾಗಿ ಅಂತಹವರುಗಳಿಗೆ ಉತ್ತಮ ತರಬೇತಿಯನ್ನು ನೀಡಲಾಗುವುದು ಎಂದರು.

ಆಟಗಾರರು ಸೋಲು–ಗೆಲುವು ಎರಡನ್ನೂ ಸಮನಾಗಿ ತೆಗೆದುಕೊಳ್ಳಬೇಕು. ಸೋಲುವ ಮನಸ್ಥಿತಿಯಿಂದ ಯಾರೂ ಆಟ ಆಡಬಾರದು. ಎಲ್ಲರೂ ಗೆಲ್ಲುವ ಮನೋಭಾವದಿಂದ ಆಟವಾಡಿದಾಗ ಮಾತ್ರ ಗೆಲುವು ಸಾಧ್ಯ ಎಂದ ಅವರು, ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸಿದರು.

ಸಚಿವರುಗಳಾದ ನಾರಾಯಣಗೌಡ, ಆರಗ ಜ್ಞಾನೇಂದ್ರ, ಅಶ್ವತ್ಥನಾರಾಯಣ, ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಚಲನಚಿತ್ರ ನಟ ಸುದೀಪ್ ಸೇರಿದಂತೆ ಸಾವಿರಾರು ಕ್ರೀಡಾಪಟುಗಳು ಮತ್ತು ಗಣ್ಯರುಗಳು ಭಾಗವಹಿಸಿದ್ದರು.

10 ದಿನಗಳ ಕಾಲ ನಡೆದ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ದೇಶದಾದ್ಯಂತ 209 ವಿಶ್ವವಿದ್ಯಾನಿಲಯಗಳ 4 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು. ರಾಜ್ಯದ 16 ವಿಶ್ವವಿದ್ಯಾನಿಲಯಗಳ ಕ್ರೀಡಾಪಟುಗಳು ಸಹ ಇದರಲ್ಲಿ ಇದ್ದರು.

ಸಮಾರೋಪ ಸಮಾರಂಭದಲ್ಲಿ ಯೋಗಾಸನ ಮತ್ತು ಮಲ್ಲಕಂಬ ಸೇರಿದಂತೆ ವಿವಿಧ ಸಾಹಸ ಕ್ರೀಡೆಗಳನ್ನು ಪ್ರದರ್ಶಿಸಲಾಯಿತು. ಇವುಗಳನ್ನು ವೀಕ್ಷಿಸಿದ ಅಮಿತ್ ಷಾ ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಮಿತ್ ಷಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು.

ಸರ್ಕಾರ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಬೇಕು



ನಂಜನಗೂಡು, ಮೇ 3– ಸರ್ಕಾರ ನಶಿಸುತ್ತಿರುವ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ತಾಲೂಕಿನ ದೇವರಸನಹಳ್ಳಿ ಗ್ರಾಮದ ಶ್ರೀ ತಿಬ್ಬಳ್ಳಿ ಬಸವೇಶ್ವರ ಯುವಕರ ಸಂಘದ ವತಿಯಿಂದ ನಡೆದ ಎತ್ತಿನಗಾಡಿ ಓಟದ ಸ್ಪರ್ಧೆಯ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಚಿಕ್ಕವನಿದ್ದಾಗ ಗ್ರಾಮೀಣ ಭಾಗದಲ್ಲಿ ಕುಸ್ತಿ ಪಂದ್ಯಾವಳಿ, ಕೋಲಾಟ, ರಂಗಕುಣಿತ, ಗೋಲಿ ಆಟ, ಕಟ್ಟೆಮಣೆ, ಲಗೋರಿ ಆಟಗಳನ್ನು ಆಡುತ್ತಿದ್ದೆ. ನಾನು ಬುಗುರಿ ಆಟ ಚೆನ್ನಾಗಿ ಆಡುತ್ತಿದ್ದೆ ಎಂದರು.

ಈಗ ಮನೆಗೊಂದು ಟಿ.ವಿ, ಕೈಗೊಂದು ಮೊಬೈಲ್ ಬಂದು ಜನರು ಗ್ರಾಮೀಣ ಕ್ರೀಡೆಗಳನ್ನು ಮರೆತು ಸೋಮಾರಿಗಳಾಗಿದ್ದಾರೆ. ಕಾಯಿಲೆಗಳು ಹೆಚ್ಚಾಗುತ್ತಿವೆ. ಆದ್ದರಿಂದ ಸರ್ಕಾರ ಗ್ರಾಮೀಣ ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಯುವಕರು ಗ್ರಾಮೀಣ ಕ್ರೀಡೆಗಳನ್ನು ಹೆಚ್ಚಾಗಿ ಆಡಬೇಕು ಎಂದ ಅವರು ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಜೋಡೆತ್ತುಗಳಿಗೆ 25 ಸಾವಿರ ನಗದು ಬಹುಮಾನ ಕೊಡುವುದಾಗಿ ತಿಳಿಸಿದರು.

ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಗೋವರ್ಧನ್, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಮಾಜಿ ನಿರ್ದೇಶಕ ಮಂಜುನಾಥ್, ಗ್ರಾ.ಪಂ. ಅಧ್ಯಕ್ಷೆ ಮಂಗಳಮ್ಮ, ಶ್ರೀರಾಂಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ್, ಪಿ.ಪಿ.ಓ. ಮಲ್ಲುಂಡಿ ಮಹದೇವಸ್ವಾಮಿ, ಚಂದನ್‌ಗೌಡ, ಬೊಕ್ಕಳ್ಳಿ ನಂಜುಂಡಸ್ವಾಮಿ, ದಿನೇಶ್‌ಗೌಡ, ಪ್ರೇಮ ಸುಮತಿ ಹಾಜರಿದ್ದರು. ಎತ್ತಿನ ಗಾಡಿ ಓಟದ ಸ್ಪರ್ಧೆ ನೋಡಲು ಅಕ್ಕಪಕ್ಕದ ಊರುಗಳಿಂದ ನೂರಾರು ರೈತರು ಆಗಮಿಸಿದ್ದರು.

ಒಂದನೇ ಪುಟದಿಂದ

ಸಂಪುಟ ಸರ್ಜರಿಗೆ ನಿರ್ಧಾರ

ಬದಲಾವಣೆಯ ಬಗ್ಗೆ ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿದ್ದ ಅಂತೆ ಕಂತೆಗಳಿಗೆ ತೆರೆ ಎಳೆದಿದ್ದಾರೆ. ಅಲ್ಲದೇ, ರಾಜಕೀಯವಾಗಿ ಯಾವುದೇ ಚರ್ಚೆ ನಡೆಸದೇ ದೆಹಲಿಗೆ ವಾಪಸ್ಸಾಗಿದ್ದಾರೆ. ತಾವು ಉಳಿದುಕೊಂಡಿದ್ದ ಖಾಸಗಿ ಹೋಟೆಲ್‌ನಲ್ಲಿ ಇಂದು ಮುಂಜಾನೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಅಮಿತ್ ಷಾ ಚರ್ಚೆ ನಡೆಸಿದ್ದಾರೆ. ಆದರೆ, ಯಾವುದೇ ವಿವರ ಬಹಿರಂಗಗೊಂಡಿಲ್ಲ. ಇದಾದ ನಂತರ ಅದೇ ಹೋಟೆಲ್‌ನಲ್ಲಿ ಕರೆದಿದ್ದ ರಾಜ್ಯದ ಪ್ರಮುಖ ಮುಖಂಡರ ಸಭೆಯನ್ನು ರದ್ದು ಮಾಡಿದರು. ಇದು ಪಕ್ಷದ ವಲಯಗಳಲ್ಲಿ ಭಾರೀ ಚರ್ಚೆಗೆ ಎಡೆಮಾಡಿಕೊಟ್ಟಿದೆ. ಈ ಸಭೆಯಲ್ಲಿ ನಾಯಕತ್ವವೂ ಸೇರಿದಂತೆ ಮಹತ್ವದ ರಾಜಕೀಯ ವಿಚಾರಗಳನ್ನು ಚರ್ಚಿಸುವ ಉದ್ದೇಶವನ್ನು ಹೊಂದಿದ್ದರು ಎಂದು ಹೇಳಲಾಗಿದೆ.


ಬೆಂಗಳೂರಿನ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ, ನೃಪತುಂಗ ಏಕೀಕೃತ ವಿಶ್ವವಿದ್ಯಾನಿಲಯ ಉದ್ಘಾಟಿಸಿದ ನಂತರ ಮುಖ್ಯಮಂತ್ರಿಗಳ ನಿವಾಸದಲ್ಲಿ ಏರ್ಪಡಿಸಿದ್ದ ಔತಣಕೂಟದಲ್ಲಿ ಭಾಗವಹಿಸಿದ್ದ ಅಮಿತ್ ಷಾ ಅವರು ಎಲ್ಲರೊಂದಿಗೂ ನಗುನಗುತ್ತಲೇ ಮಾತನಾಡಿ, ನೀವೆಲ್ಲಾ ಮುಂಬರುವ ಚುನಾವಣೆಗೆ ಸಿದ್ಧರಾಗಿ ಎಂದು ಕಿವಿಮಾತು ಹೇಳಿದರು. ನಂತರ ಅಲ್ಲಿಂದ ನೇರವಾಗಿ ಅನಾರೋಗ್ಯದಿಂದ ಬಳಲುತ್ತಿರುವ ತಮ್ಮ ಸ್ನೇಹಿತ ಹಾಗೂ ಆರ್‌ಎಸ್‌ಎಸ್ ಹಿರಿಯ ಮುಖಂಡರೂ ಆದ ಜಿಂದಾಲ್ ಸಂಸ್ಥಾಪಕ ಸೀತಾರಾಂ ಜಿಂದಾಲ್ ಅವರ ಆರೋಗ್ಯ ವಿಚಾರಿಸಲು ತುಮಕೂರು ರಸ್ತೆಯ ಜಿಂದಾಲ್‌ನಗರಕ್ಕೆ ತೆರಳಿದ್ದರು. ಅಲ್ಲಿ ಸಾಕಷ್ಟು ಸಮಯ ಕಳೆದ ನಂತರ, ಅಲ್ಲಿಂದಲೇ ನೇರವಾಗಿ ಖೇಲೋ ಇಂಡಿಯಾ ಸಮಾರೋಪ ಸಮಾರಂಭಕ್ಕೆ ತೆರಳಿ, ಅಲ್ಲಿಂದ ತಾವು ಉಳಿದುಕೊಂಡಿದ್ದ ಹೋಟೆಲ್‌ಗೆ ಬಂದು ತದನಂತರ ಹೆಚ್‌ಎಎಲ್ ವಿಮಾನ ನಿಲ್ದಾಣದ ಮೂಲಕ ವಿಶೇಷ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದರು.

ಅಮೀತ್ ಷಾ ರಾಜ್ಯ ಪ್ರವಾಸದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಚರ್ಚೆ ಆರಂಭವಾಗಿತ್ತು. ಇತ್ತ ಆಡಳಿತ ಪಕ್ಷದಲ್ಲಿ ನಾಯಕತ್ವ ಬದಲಾವಣೆ ವಿಚಾರದಲ್ಲಿ ದ್ವಂದ್ವ ನಿಲುವು ವ್ಯಕ್ತವಾಗಿತ್ತು. ಯಡಿಯೂರಪ್ಪ ಅಧಿಕಾರದಿಂದ ಕೆಳಗಿಳಿಯುತ್ತಾರೆ ಎಂದು ಈ ಹಿಂದೆ ಭವಿಷ್ಯ ನುಡಿದಿದ್ದ ಬಿಜೆಪಿಯ ಹಿರಿಯ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಮತ್ತೊಮ್ಮೆ ಅಂತಹದ್ದೇ ಬಾಂಬ್ ಸಿಡಿಸಿದ್ದರು. ಪ್ರಧಾನಿ ಮೋದಿ ರಾಜ್ಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಮೇ 10ರೊಳಗೆ ಮಹತ್ವದ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಹೇಳುವ ಮೂಲಕ ತೀವ್ರ ಕುತೂಹಲ ಮೂಡಿಸಿದ್ದರು.


ಪ್ರಧಾನಿ ಮೋದಿ ವಿದೇಶದಿಂದ ವಾಪಸ್ಸಾದ ನಂತರ ಕರ್ನಾಟಕದ ನಾಯಕತ್ವದ ಸಂಬಂಧ ತೀರ್ಮಾನ ಕೈಗೊಳ್ಳುತ್ತಾರೆ ಎಂಬ ಮಾಧ್ಯಮಗಳ ವರದಿ ಕೂಡ ಸಾಕಷ್ಟು ಕುತೂಹಲ ಕೆರಳಿಸಿತ್ತು. ಯತ್ನಾಳ್ ಅವರ ಹೇಳಿಕೆ ಬೆನ್ನ ಹಿಂದೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಕಂದಾಯ ಸಚಿವ ಆರ್. ಅಶೋಕ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಯಕತ್ವ ಬದಲಾವಣೆ ಇಲ್ಲ. ಅವರ ನೇತೃತ್ವದಲ್ಲೇ ಮುಂಬರುವ ಚುನಾವಣೆ ಎದುರಿಸುತ್ತೇವೆ ಎಂದು ಹೇಳಿಕೆ ನೀಡಿದರೆ, ಯಡಿಯೂರಪ್ಪ ಒಂದು ಹೆಜ್ಜೆ ಮುಂದೆ ಹೋಗಿ ಇನ್ನೆರಡ್ಮೂರು ದಿನದಲ್ಲಿ ರಾಜ್ಯ ಸಚಿವ ಸಂಪುಟ ವಿಸ್ತರಣೆ ಆಗಲಿದೆ ಎಂದು ಹೇಳುವ ಮೂಲಕ ನಾಯಕತ್ವ ಬದಲಾವಣೆ ಹೇಳಿಕೆ ನೀಡುತ್ತಿದ್ದವರಿಗೆ ತಿರುಗೇಟು ನೀಡುತ್ತಿದ್ದರು.

ರಾಜ್ಯದ ಬಹುತೇಕ ಹಿರಿಯ ನಾಯಕರು ಹಾಗೂ ಆರ್‌ಎಸ್‌ಎಸ್ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬದಲಾವಣೆಗೆ ಸಮ್ಮತಿಸಿಲ್ಲ ಎಂದು ಹೇಳಲಾಗುತ್ತಿದೆ. ಅಲ್ಲದೇ, ಇನ್ನು ಒಂದು ವರ್ಷ ಬಾಕಿ ಇರುವ ವಿಧಾನಸಭಾ ಚುನಾವಣೆಯ ಸಿದ್ಧತೆ ನಡುವೆ ನಾಯಕತ್ವ ಬದಲಾವಣೆಗೆ ಕೈ ಹಾಕಿದರೆ ತಾವಾಗಿಯೇ ಗೊಂದಲಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ. ಅದರ ಬದಲು ಮುಖ್ಯಮಂತ್ರಿಗಳ ಸಂಪುಟಕ್ಕೆ ಯುವ ಪಡೆಯನ್ನು ಸೇರ್ಪಡೆ ಮಾಡುವ ಮೂಲಕ ಆಡಳಿತವನ್ನು ಚುರುಕುಗೊಳಿಸಿ, ಯೋಜನೆಗಳನ್ನು ತ್ವರಿತವಾಗಿ ಜಾರಿಗೊಳಿಸಿ ಜನರ ವಿಶ್ವಾಸ ಗಳಿಸುವ ಮೂಲಕ ಚುನಾವಣೆ ಎದುರಿಸಿದರೆ ಬಿಜೆಪಿ ಮತ್ತೆ ಅಧಿಕಾರ ಹಿಡಿಯುವ ಸಾಧ್ಯತೆಗಳು ಹೆಚ್ಚಾಗಿವೆ ಎಂಬ ಕಿವಿಮಾತಿಗೆ ಓಗೊಟ್ಟಿರುವ ಕೇಂದ್ರ ವರಿಷ್ಠರು, ಬೊಮ್ಮಾಯಿ ನಾಯಕತ್ವವನ್ನು ಬದಲಾವಣೆ ಮಾಡದಿರಲು ನಿರ್ಧರಿಸಿದ್ದಾರೆಂದು ಬಲ್ಲ ಮೂಲಗಳು ತಿಳಿಸಿವೆ. ಈ ಮಧ್ಯೆ ಪ್ರಧಾನಿ ಮೋದಿ ವಿದೇಶಿ ಪ್ರವಾಸದಿಂದ ವಾಪಸ್ಸಾದ ನಂತರ ಮತ್ತೊಮ್ಮೆ ನಾಯಕತ್ವದ ಬಗ್ಗೆ ಪ್ರಸ್ತಾಪಿಸಿ, ಮುಂದಿನ ನಿರ್ಧಾರವನ್ನು ಕೈಗೊಳ್ಳುವ ಸಾಧ್ಯತೆಗಳಿವೆ ಎಂದು ಕೂಡ ಹೇಳಲಾಗುತ್ತಿದೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಮೈಸೂರಿನ ಗನ್‌ಹೌಸ್ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮಾಲಾರ್ಪಣೆ ಮಾಡಿದರು.



ಮೈಸೂರಿನ ಗನ್‌ಹೌಸ್ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಡಿಸಿಸಿ ಕಾರ್ಯದರ್ಶಿ ಹಾಗೂ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಮಾಲಾರ್ಪಣೆ ಮಾಡಿದರು. ಈ ವೇಳೆ ಬೊಮ್ಮೇನಹಳ್ಳಿ ಗ್ರಾಪಂ ಸದಸ್ಯ ಪಿ.ಮಹದೇವು ಹುಯಿಲಾಳು, ಎಳನೀರು ಜಯರಾಮು, ಮಂಜುನಾಥ್ ಪ್ರಸಾದ್ ಇತರರು ಹಾಜರಿದ್ದರು.



ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಕಾಯಕಯೋಗಿ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ರಾಜ್ಯಾಧ್ಯಕ್ಷೆ ವಿ.ಪಿ. ಸುಶೀಲ, ಪ್ರಧಾನ ಕಾರ್ಯದರ್ಶಿ ಎಂ.ಪುಟ್ಟರಾಜು, ಬಬಿತಾ, ಚಿಕ್ಕತಾಯಮ್ಮ, ಮಲ್ಲೇಶ್, ಭಾಗ್ಯಮ್ಮ, ಎಂ.ಮಾದೇಶ್ ಇತರರಿದ್ದಾರೆ.



ಮೈಸೂರಿನ ಇಂಟರ್‌ನ್ಯಾಷನಲ್ ಲಿಂಗಾಯತ ಯೂತ್ ಫೋರಂ ವತಿಯಿಂದ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಅಧ್ಯಕ್ಷ ಪ್ರಶಾಂತ್, ಉಪಾಧ್ಯಕ್ಷ ವೀರೇಶ, ಖಜಾಂಚಿ ಸುಭಾಷ್, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಕೋಶಾಧ್ಯಕ್ಷ ವರುಣಾ ಮಹೇಶ್ ಮತ್ತು ಐಲೈಫ್‌ನ ಸದಸ್ಯರು ಇದ್ದರು.



ದಾರಿಪುರ ಗ್ರಾಮದಲ್ಲಿ ಬಸವ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ಡಿ.ಚಂದ್ರಶೇಖರ್, ಬಸವಣ್ಣ, ಬಸವೇಶ್, ರವಿ, ಗುರು ಮಹದೇವಸ್ವಾಮಿ, ಹರೀಶ್, ಗುರುಸ್ವಾಮಿ, ಮಲ್ಲೇಶ್, ಪ್ರಕಾಶ, ಗೌಡಿಕೆ ಬಸವರಾಜಪ್ಪ ಹಾಗೂ ಗ್ರಾಮಸ್ಥರು ಹಾಜರಿದ್ದರು.



ಕರ್ನಾಟಕ ರಾಜ್ಯ ಭಾರತ್ ಮಾತಾ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ವತಿಯಿಂದ ಎನ್.ಆರ್.ಮೊಹಲ್ಲಾ ಮಾರುತಿ ಸರ್ಕಲ್ ಬಳಿ ಸಂಘದ ನಾಮಫಲಕಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಮಿಕರ ದಿನಾಚರಣೆ ಶುಭಾಶಯ ಕೋರಲಾಯಿತು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಜಿ.ಸಿದ್ದರಾಜು, ಉಪಾಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಸುರೇಶ್, ಮೈಸೂರು ಜಿಲ್ಲಾಧ್ಯಕ್ಷ ಪುಟ್ಟಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ನಂಜುಂಡ, ಪ್ರಧಾನ ಕಾರ್ಯದರ್ಶಿ ರಾಮಣ್ಣ, ಮಹಿಳಾ ಜಿಲ್ಲಾಧ್ಯಕ್ಷೆ ಕಲ್ಪನಾ, ಉಪಾಧ್ಯಕ್ಷೆ ಗೀತಾ ಇತರರು ಉಪಸ್ಥಿತರಿದ್ದರು.



ಗೋಕುಲಂನ ಕೆಂಪೀರೇಗೌಡರ ಉದ್ಯಾನವನದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಆಚರಿಸಲಾಯಿತು. ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ ಪುಷ್ಪನಮನ ಸಲ್ಲಿಸಿದರು. ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ಆಟೋ ರಾ.ಸಿದ್ಧರಾಮು, ಯತೀಶ್, ಚಿರಂತ್, ಚಾಮರಾಜ ಕ್ಷೇತ್ರದ ಬಿಜೆಪಿ ಕಾರ್ಯದರ್ಶಿ ಹೆಚ್.ಸಿ. ಮೃತ್ಯುಂಜಯ (ಜಯಣ್ಣ), ಬಿ.ಕುಮಾರ್, ಲಕ್ಷ ಮಹದೇವಣ್ಣ, ಸಿದ್ದರಾಜು, ಮಾದಪ್ಪ, ಎಂ. ಶಿವಪ್ರಕಾಶ್, ಶ್ರೀನಿವಾಸಗೌಡ, ರವಿ ಚಾಮ,ಸತೀಶ್,ಸುರೇಂದ್ರ, ಶಿವಕುಮಾರ್, ಜಾವಾ ಕೃಷ್ಣಪ್ಪ ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ವಿಜೃಂಭಣೆಯ ಬಸವ ಜಯಂತಿ



ಮೈಸೂರು,ಮೇ 3(ಎಂಟಿವೈ)– ಕೊರೊನಾ ಹಿನ್ನಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸರಳ ಹಾಗೂ ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತವಾಗಿದ್ದ ಬಸವ ಜಯಂತಿಯನ್ನು ಇಂದು ವಿಜೃಂಭಣೆಯಿಂದ ಆಚರಿಸಲಾಯಿತು.

ಮೈಸೂರಿನ ಗನ್‌ಹೌಸ್ ವೃತ್ತದ ಬಳಿ ಜಿಲ್ಲಾ ಡಳಿತ ಹಾಗೂ ವಿವಿಧ ಬಸವ ಬಳಗಗಳ ವತಿ ಯಿಂದ ಆಯೋಜಿಸಿದ್ದ ಬಸವೇಶ್ವರರ ಪುತ್ಥಳಿ ಮೆರವಣಿಗೆಗೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಎಸ್.ಎ.ರಾಮದಾಸ್, ಮೇಯರ್ ಸುನಂದಾ ಪಾಲನೇತ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬಸವೇಶ್ವರರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿ ದರು. ಬಳಿಕ ವಿದ್ಯಾಪೀಠದ ಸಮೀಪವಿರುವ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಮರ್ಪಿಸಲಾಯಿತು. ನಂತರ ಆರಂಭವಾದ ಮೆರವಣಿಗೆ ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಮೆರವಣಿಗೆಯಲ್ಲಿ ಈಶ್ವರನ ವೇಷಧಾರಿಗಳು, ಬಸವೇಶ್ವರರ ವೇಷಧಾರಿ, ಕಂಸಾಳೆ ತಂಡ, ನಂದಿಧ್ವಜ, ಅಲಂಕೃತ ವಾಹನಗಳಲ್ಲಿ ಬಸವೇಶ್ವರರ ಪುತ್ಥಳಿ, ಭಾವಚಿತ್ರ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಅಕ್ಕ ಮಹಾದೇವಿ ಹಾಗೂ ಬಸವಣ್ಣ ಹಾಗೂ ಇನ್ನಿತರರ ಮಹನೀಯರ ವೇಷಧಾರಿ ಮಕ್ಕಳು ಕುದುರೆ ಹಾಗೂ ಸಾರೋಟ್ ಸವಾರಿ ಮಾಡಿ ಗಮನ ಸೆಳೆದರು. ಬಸವ ಬಳಗಗಳ ಸದಸ್ಯರು, ಯುವಕರು ಮೆರವಣಿಗೆ ಯುದ್ದಕ್ಕೂ ತಮಟೆ, ನಗಾರಿ ಶಬ್ದಕ್ಕೆ ಕುಣಿದು ಕುಪ್ಪಳಿಸಿದರು. ಇದೇ ವೇಳೆ ಮಾಜಿ ಶಾಸಕ ಎಂ.ಕೆ.ಸೋಮ ಶೇಖರ್ ಯುವಕರೊಂದಿಗೆ ಕುಣಿದು ಕುಪ್ಪಳಿಸಿ ಗಮನ ಸೆಳೆದರು. ದಾರಿಯುದ್ದಕ್ಕೆ ಯುವಕರ ತಂಡ ಕೇಸರಿ ಧ್ವಜ ಬೀಸುತ್ತಾ ಗಮನ ಸೆಳೆದರು.



ಒಂದನೇ ಪುಟದಿಂದ

ಬಸವಣ್ಣನ ವಿವಿ ಸ್ಥಾಪನೆ ಸೂಕ್ತ

ಸರ್ವ ಕಾಲಕ್ಕೂ ಪ್ರಸ್ತುತ. ವಿಜ್ಞಾನ, ತಂತ್ರಜ್ಞಾನ ಮುಂದುವರೆದಿರುವ ಈ ಕಾಲದಲ್ಲೂ ಅಸ್ಪೃಶ್ಯತೆ ಆವರಿಸಿ, ಆದರೆ 12ನೇ ಶತ ಮಾನದಲ್ಲಿಯೇ ಶೋಷಿತ ಸಮುದಾಯ ಗಳು ಅನುಭವಿಸುತ್ತಿದ್ದ ಅಸ್ಪೃಶ್ಯತೆಯನ್ನು ನಿವಾರಿಸಲು ಬಸವಣ್ಣನವರ ಪ್ರಯತ್ನ ಅಮೋಘ. ಒಂದೆಡೆ ಬುದ್ಧ, ಬಸವ, ಮತ್ತೊಂದೆಡೆ ಡಾ.ಬಿ.ಆರ್.ಅಂಬೇಡ್ಕರ್ ಪ್ರಾತಃಸ್ಮರಣೀಯರಾಗಿದ್ದಾರೆ. ಈ ಮಹಾನ್ ನಾಯಕರು ಸಮಾನತೆಗಾಗಿ ದೊಡ್ಡ ಕ್ರಾಂತಿಯನ್ನೇ ಮಾಡಿ ಸಮ–ಸಮಾಜ, ಅಸ್ಪೃಶ್ಯತೆ, ಮೇಲು–ಕೀಳು ವ್ಯವಸ್ಥೆ ತೊಡೆದು ಹಾಕಲು ಶ್ರಮಿಸಿದರು. ಹಾಗಾಗಿ ನಾನು ಪ್ರತಿದಿನ ಬೆಳಗ್ಗೆ ಈ ಇಬ್ಬರನ್ನು ಸ್ಮರಿಸುತ್ತೇನೆ ಎಂದರು.

ವೀರಶೈವ ಜಾತಿಯಲ್ಲ ಧರ್ಮ: ವೀರಶೈವ ಜಾತಿ ಅಲ್ಲ, ಅದೊಂದು ಧರ್ಮ. ಬದುಕಿಗೆ ದಾರಿ ತೋರುವ, ಮೋಕ್ಷಕ್ಕೆ ಕೊಂಡೊಯ್ಯುವ ಬೇಕಾದ ಎಲ್ಲ ರೀತಿಯ ಚಿಂತನೆಗಳು ಬಸವಣ್ಣ ಪ್ರತಿಪಾದಿಸಿದ ಧರ್ಮದಲ್ಲಿದೆ. ಅದು ಮಾನವ ಧರ್ಮ. ಎಲ್ಲ ಜೀವಾತ್ಮಗಳ ಲೇಸನ್ನು ಬಯಸಿದ ಧರ್ಮ ಸಾಧಾರಣ ಅಲ್ಲ. ಇಡೀ ಜಗತ್ತಿನಲ್ಲೇ ದೊಡ್ಡ ಧರ್ಮ ಹೆಸರು ಪಡೆದಿದೆ ಎಂದರು.

ಜೈನ, ಸಿಖ್ ಧರ್ಮಗಳ ರೀತಿಯಲ್ಲಿ ಬಸವಣ್ಣ ಪ್ರತಿಪಾದಿಸಿದ ವೀರಶೈವ–ಲಿಂಗಾಯತ ಧರ್ಮ, ವೈದಿಕ ಧರ್ಮದ ವಿರುದ್ಧ ಸಿಡಿದೆದ್ದ ಧರ್ಮವಾಗಿದೆ. ಎಲ್ಲ ಜಾತಿಯ ಶರಣರು ಕಾಣಬಹುದಾದ ಯಾವುದಾದರೂ ಧರ್ಮ ಇದ್ದರೆ ಅದು ವೀರಶೈವ ಧರ್ಮ ಎಂದು ತಿಳಿಸಿದರು. ಸಪ್ತಸಾಗರಗಳನ್ನು ದಾಟಿ ಹೋಗಬೇಕಾದ ಧರ್ಮ ಇಲ್ಲೇ ಉಳಿದಿದ್ದು ವಿಷಾದವೆನಿಸುತ್ತದೆ. ಬಿಜ್ಜಳನ ಆಸ್ಥಾನ ತೊರೆದು ಬಂದ ಬಸ ವಣ್ಣ ಸಾಮಾನ್ಯರಂತೆ ಬದುಕಿದರು. ಈಗ ಕಿರೀಟ ಧರಿಸಿ ಕುದುರೆ ಮೇಲೆ ಕುಳಿತ ಬಸವಣ್ಣರ ಚಿತ್ರಗಳು ನೋವು ತರುತ್ತವೆ. ವೈದಿಕ ಧರ್ಮದಲ್ಲಿ ಹುಟ್ಟಿದರೂ ವೈದಿಕ ಧರ್ಮ ವ್ಯವಸ್ಥೆಯ ವಿರುದ್ಧ ಸಿಡಿದೆದ್ದರು. ಅವರ ವಚನ, ಸಾಹಿತ್ಯಗಳು ಚಿಂತನೆ ಮಾಡುವಂತದ್ದು ಎಂದರು.

ಶೋಷಿತ ಸಮುದಾಯಗಳ ಸ್ವಾಮೀಜಿ ಕಂಡ ಏಕೈಕ ಧರ್ಮ: ವೀರಶೈವ ಧರ್ಮ ಶೋಷಿತ ಸಮುದಾಯಗಳ ಸ್ವಾಮೀಜಿ ಗಳನ್ನು ಕಂಡಿರುವ ಏಕೈಕ ಧರ್ಮ. ಮಾದಾರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಹರಳಯ್ಯ ಸೇರಿದಂತೆ ಇನ್ನಿತರ ಶೋಷಿತ ಸಮುದಾಯವನ್ನು ಪ್ರತಿನಿಧಿಸುವ ಶರಣರನ್ನು ವೀರಶೈವ ಧರ್ಮ ಕಂಡಿದೆ. ಚಪ್ಪಲಿ ಹೊಲಿಯುವ ಸಮುದಾಯದ ಶರಣ ರನ್ನು ಬಸವಣ್ಣನವರು ಬಹುವಚನದಿಂದ ಮಾತನಾಡಿಸಿದ್ದರು. ಇದರಿಂದಲೇ ಬಸ ವಣ್ಣನವರ ಚಿಂತನೆ ಏನಿತ್ತು ಎಂಬುದನ್ನು ಅರಿತುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಗಮನ ಸೆಳೆದ ಕ್ರಾಂತಿ ಯೋಗಿ ಆಲ್ಬಮ್: ಇದಕ್ಕೂ ಮುನ್ನ ಮಂಡ್ಯ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಧಿಕಾರಿ ಸೋಮ ಶೇಖರ್ ಎಸ್.ಜಿಗಣಿ ಅವರು ವಿದ್ವತ್ ಇನ್ನೋವೇಟಿವ್ ಸಲ್ಯೂಷನ್ಸ್ ಸಂಸ್ಥೆಯೊಂದಿಗೆ ನಿರ್ಮಿಸಿರುವ ಬಸವಣ್ಣ ಅವರ ಜೀವನ ಚರಿತ್ರೆ ಮೂಡಿಸುವ ನೀತು ನಿನಾದ್ ಸಂಗೀತ ಸಂಯೋಜಿಸಿರುವ 'ಕ್ರಾಂತಿ ಯೋಗಿ' ವಿಡಿಯೋ ಆಲ್ಬಮ್ ಲೋಕಾರ್ಪಣೆ ಮಾಡಲಾಯಿತು. ಅಣ್ಣ ಬಸವಣ್ಣ ಹಾಡು ಪ್ರಸಾರಗೊಂಡಾಗ ಸಭಿಕರಿಂದ ಭಾರೀ ಕರತಾಡನವಾಯಿತು. ಇದೇ ವೇಳೆ ಪತ್ರಕರ್ತ ಗಣೇಶ್ ಅಮೀನ ಗಡ ಅವರ ಬಣ್ಣದ ಬದುಕಿನ ಚಿನ್ನದ ದಿನಗಳು ಪುಸ್ತಕ 8ನೇ ಆವೃತ್ತಿ ಬಿಡುಗಡೆ ಹಾಗೂ ಮೂಗೂರು ನಂಜುಂಡ ಸ್ವಾಮಿ ಅವರು 'ಕನ್ನಡ ಬೆಳಕು' ಪತ್ರಿಕೆ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮೈಲ್ಯಾಕ್ ಅಧ್ಯಕ್ಷ ಎನ್.ವಿ. ಫಣೀಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಎನ್.ನಂದೀಶ್ ಹಂಚೆ, ಜಿಲ್ಲಾಧಿ ಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಒ ಪೂರ್ಣಿಮಾ, ಮುಡಾ ಆಯುಕ್ತ ಡಾ.ಡಿ.ಬಿ.ನಟೇಶ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಎಸ್‌ಪಿ ಆರ್.ಚೇತನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್. ಚನ್ನಪ್ಪ ಎಲ್.ಎಸ್.ಮಹದೇವಸ್ವಾಮಿ, ಡಿ.ಎ. ಮಹದೇವಸ್ವಾಮಿ, ಕೆ.ಕೆ.ಖಂಡೇಶ್, ಟಿ.ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು.



ಬಿಜೆಪಿ ಮೈಸೂರು ಗ್ರಾಮಾಂತರ ಎಸ್ ಸಿ ಮೋರ್ಚಾ ವತಿಯಿಂದ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಲಾಯಿತು. ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಎ.ಎಸ್.ಪರಮಾನಂದ, ಎಸ್‌ಸಿ ಮೋರ್ಚಾ ಮೈಸೂರು ಗ್ರಾಮಾಂತರ ಅಧ್ಯಕ್ಷ ಸಿ.ಎಂ. ಮಹಾದೇವಯ್ಯ, ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಸಾಮ್ರಾಟ್, ರಾಜು, ರಾಚಯ್ಯ ಶ್ರೀಧರ್, ರಾಚಯ್ಯ ಅನಿಲ್ ಕುಮಾರ್, ಶಿವಕುಮಾರ್, ಇತರರು ಭಾಗವಹಿಸಿದ್ದರು.



ಬಸವ ಜಯಂತಿ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ವೃತ್ತದಲ್ಲಿ ಇರುವ ಬಸವಣ್ಣರವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಜಿ.ಟಿ. ದೇವೇಗೌಡ ಅಭಿಮಾನಿ ಸಂಘದ ಅಧ್ಯಕ್ಷ ಕಾಮನಕೆರೆಹುಂಡಿ ಹೆಚ್. ಗಿರೀಶ್ ಗೌಡ, ಕಾಮನಕೆರೆಹುಂಡಿ ಯುವ ಮುಖಂಡ ಪ್ರವೀಣ್, ಗ್ರಾಪಂ ಮಾಜಿ ಸದಸ್ಯರಾದ ಶಶಿಕಲಾ, ಗೋಲ್ಡ್ ಸುರೇಶ್, ಕೆಆರ್ ಮಿಲ್ ಶಿವಣ್ಣ, ಪ್ರಮೀಳಾ, ಚಂದ್ರಕಲಾ, ನವೀನ್, ಮಂಜುನಾಥ, ಆಶಾ ಮತ್ತಿತರಿದ್ದರು.



ಮೈಸೂರು ಜಿಲ್ಲಾ ಸವಿತಾ ಸಮಾಜದ ವತಿಯಿಂದ ಶ್ರೀ ಬಸವೇಶ್ವರರ ಪುತ್ಥಳಿಗೆ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್ ಅವರ ನೇತೃತ್ವದಲ್ಲಿ ಮಾಲಾರ್ಪಣೆ ಮಾಡಲಾಯಿತು. ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ನಗರ ಪ್ರಧಾನ ಕಾರ್ಯದರ್ಶಿ ಹರೀಶ್ ರೆಡ್ಡಿ, ಬನ್ನೂರು ಪುರಸಭೆ ಸದಸ್ಯೆ ಸೌಮ್ಯರಾಣಿ, ಮುರಳಿಧರ್, ರಾಜುರೆಡ್ಡಿ, ಸಿದ್ದಾರ್ಥ ಲೇಔಟ್ ಸಮಾಜದ ಅಧ್ಯಕ್ಷ ರಾಮು, ಸದಾನಂದ ಎಂಜಿ, ನಾರಾಯಣ್ ಹಾಗೂ ಇತರರಿದ್ದರು



ಮೈಸೂರಿನ ಬಸವೇಶ್ವರ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಪುತ್ಥಳಿಗೆ ವರುಣಾ ಕ್ಷೇತ್ರದ ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು. ಇದೇ ಸಂದರ್ಭದಲ್ಲಿ ವರುಣಾ ಬ್ಲಾಕ್ ಉಪಾಧ್ಯಕ್ಷ ರಾಯನಹುಂಡಿ ರವಿ, ದಂಡಿಕೆರೆ ನಾಗರಾಜ್, ಮುಖಂಡರಾದ ಭುಗತಗಳ್ಳಿ ಮಣಿ, ಚಿಕ್ಕಳ್ಳಿ ಗುರು ಮೂರ್ತಿ, ಶಿವಕುಮಾರ್, ಮಂಜುಳಾ ಮಂಜುನಾಥ್, ತಾ.ಪಂ ಮಾಜಿ ಸದಸ್ಯ ಮುದ್ದರಾಮೇಗೌಡ, ಸಂತೋಷ್ ಕಿರಾಳು, ಗಿರೀಶ್, ಹರೀಶ್ ನಾಯ್ಡು ಮುಂತಾದವರು ಪಾಲ್ಗೊಂಡಿದ್ದರು.



ಹೂಟಗಳ್ಳಿ ಗ್ರಾಮಾಭಿವೃದ್ಧಿ ಶ್ರೀರಾಮ ಸೇವಾ ಸಂಘದ ವತಿಯಿಂದ ಶ್ರೀ ಬಸವೇಶ್ವರ ಜಯಂತಿಯನ್ನು ಆಚರಿಸಲಾಯಿತು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಟಿ.ಪ್ರಕಾಶ್, ಕಾರ್ಯದರ್ಶಿ ರಾಮಚಂದ್ರ ಹಾಗೂ ಪದಾಧಿಕಾರಿಗಳು, ನಿರ್ದೇಶಕರು, ಸದಸ್ಯರು ಹಾಗೂ ಹೂಟಗಳ್ಳಿ ಗ್ರಾಮಸ್ಥರು ಹಾಜರಿದ್ದರು.



ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ವತಿಯಿಂದ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು. ಸಂಘದ ಅಧ್ಯಕ್ಷ ಜೆ. ಗೋವಿಂದರಾಜು, ಪದಾಧಿಕಾರಿಗಳಾದ ರೇವಣ್ಣ, ಸಿ.ಎಸ್. ರಮೇಶ್ ಕುಮಾರ್, ಟಿ.ಸತೀಶ್ ಜವರೇಗೌಡ, ಹೆಚ್.ಎಂ. ಗಿರೀಶ್, ಕುಮಾರ್, ಎಸ್. ರಘು, ರೇವಣ್ಣ, ಬಸವರಾಜು, ಶ್ರೀಪತಿ ಉಪಸ್ಥಿತರಿದ್ದರು.



ಕಾಯಕಯೋಗಿ ಸಮಾನತೆಯ ಹರಿಕಾರ ಜಗಜ್ಯೋತಿ ಬಸವಣ್ಣನವರ ಜಯಂತಿ ಪ್ರಯುಕ್ತ ವಾರ್ಡ್ ನಂ 28 ಗಾಂಧಿನಗರದಲ್ಲಿ ಪೌರಕಾರ್ಮಿಕರಿಗೆ ನಗರಪಾಲಿಕೆ ಸದಸ್ಯೆ ಡಾ. ಅಶ್ವಿನಿ ಶರತ್‌ರವರ ನೇತೃತ್ವದಲ್ಲಿ ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸಲಾಯಿತು. ಪಾಲಿಕೆಯ ಸ್ಯಾನಿಟರಿ ಸೂಪರ್‌ವೈಸರ್ ಡಿ.ಲಿಂಗಯ್ಯ, ಪಾಲಿಕೆಯ ಪೌರಕಾರ್ಮಿಕರು ಹಾಗೂ ಶರತ್ ಸತೀಶ್, ದೇವರಾಜು, ಸುರೇಶ್, ರಾಜೇಶ್, ಮಂಜುನಾಥ್, ರಾಜು, ವಿಜಯ್, ರಾಕೇಶ್, ರಂಗಸ್ವಾಮಿ, ಉಮೇಶ್ ಇದ್ದರು.



ಮೈಸೂರಿನ ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯತಾಣ ವಾತ್ಸಲ್ಯ ಸೇವಾಶ್ರಮದಲ್ಲಿ ಮಂಗಳವಾರ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಯಿತು. ಚಿತ್ರದಲ್ಲಿ ವಾತ್ಸಲ್ಯ ಸೇವಾಶ್ರಮದ ಅಧ್ಯಕ್ಷ ಎ.ಸಿ. ರವಿಕುಮಾರ್, ಶ್ರೀಮತಿ ನಾಗರತ್ನ, ಶಶಿ, ವಿಜಯಕುಮಾರಿ, ಮಂಜು ಹದಿನಾರು, ಗುರು, ರಾಜಣ್ಣ, ಗೌರಮ್ಮ, ಶ್ರೀಮತಿ ಮಾಲಾ ಅವರನ್ನು ಚಿತ್ರದಲ್ಲಿ ಕಾಣಬಹುದು.



ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಶ್ರೀ ಬಸವೇಶ್ವರ ಜಯಂತಿಯನ್ನು ಆಚರಿಸಲಾಯಿತು. ಅಧ್ಯಕ್ಷ ಜಯನಗರ ಮಹೇಶ್, ಉಪಾಧ್ಯಕ್ಷ ಸುರೇಶ್ ಕುಮಾರ್, ಕಾರ್ಯದರ್ಶಿ ಕಾಳೇಗೌಡ, ಜಂಟಿ ಕಾರ್ಯದರ್ಶಿ ಪಳನಿ ಎಸ್, ಖಜಾಂಚಿ ರವಿಕುಮಾರ್, ನಿರ್ದೇಶಕರಾದ ಯೋಗೇಶ್, ಸಂತೋಷ್ ಕುಮಾರ್, ಪ್ರಕಾಶ್ ಹಾಜರಿದ್ದರು.

ಮೈಸೂರು ಮಿತ್ರ ಬುಧವಾರ 04 ಮೇ 2022

ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ ಧೀಮಂತ ಪುರುಷ ಬಸವಣ್ಣ



ಮಂಡ್ಯ,ಮೇ 3(ಮೋಹನ್‌ರಾಜ್)– 12ನೇ ಶತಮಾನದಲ್ಲಿ ಬಹುದೊಡ್ಡ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ ಧೀಮಂತ ಪುರುಷ ಬಸವಣ್ಣ. ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಬದಲಾವಣೆಯನ್ನು ತಂದ ಬಸವಣ್ಣನವರ ಜೀವನ ಎಲ್ಲರಿಗೂ ದಾರಿದೀಪ ಎಂದು ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಮಂಡ್ಯ, ಜಿಲ್ಲಾ ಬಸವ ಸಮಿತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಮಂಗಳವಾರ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ವಿಶ್ವಗುರು ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಹೊಸ ಬದಲಾವಣೆ ತರುವಲ್ಲಿ ಬಸವಣ್ಣರವರ ಪಾತ್ರ ಅಪಾರವಾದದ್ದು, ಮೊದಲು ನಮ್ಮನ್ನು ನಾವು ತಿದ್ದುಕೊಳ್ಳಬೇಕು, ಇತರರನ್ನು ಪ್ರೀತಿಸಬೇಕು, ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸಬೇಕು ಎಂಬೆಲ್ಲಾ ಹಿತನುಡಿಯನ್ನು ಹೇಳಿದ್ದಾರೆ. ಬಸವಣ್ಣನವರ ಆದರ್ಶಗಳಂತೆ ನಡೆದುಕೊಂಡು ಉತ್ತಮ ಸಮಾಜ ನಿರ್ಮಿಸೋಣ ಎಂದರು. ಜಿಲ್ಲಾಧಿಕಾರಿ ಎಸ್.ಅಶ್ವತಿ ಮಾತನಾಡಿ, ಸಮಾಜದಲ್ಲಿ ಸಮಾನತೆಯನ್ನು ಸೃಷ್ಟಿಸಲು ಹೋರಾಡಿದ ಹಾಗೂ ಕ್ರಾಂತಿಯ ಜ್ಯೋತಿಯನ್ನು ಬೆಳಗಿಸಿದ ನಾಯಕರು ಬಸವಣ್ಣನವರು ಎಂದರು.

ಲಿಂಗ, ವರ್ಗ ಸಮುದಾಯಗಳನ್ನು ದಾಟಿ ಹೊರಗೆ ಬಂದು ಎಲ್ಲರೂ ಸಮಾಜದಲ್ಲಿ ಸಮಾನತೆಯಿಂದ ಬದುಕೋಣ ಹಾಗೂ ಸಮಾಜದ ಸುಧಾರಣೆ ಕೆಲಸವನ್ನು ಮಾಡೋಣ ಎಂದು ತಮ್ಮ ವಚನಗಳಲ್ಲಿ ಬಿತ್ತರಿಸಿದವರು ಬಸವಣ್ಣನವರು ಎಂದ ಅವರು, ಬಸವಣ್ಣನವರು ಮೇಲು ಕೀಳು ಎಂಬ ತಾರತಮ್ಯವನ್ನು ಕಿತ್ತೊಗೆದು ಎಲ್ಲರೂ ಸಮಾನರು ಎಂದು ಭಾವಿಸಿ ಆರ್ಥಿಕ, ಸಾಮಾಜಿಕ ವಿಷಯಗಳನ್ನು ಕುರಿತು ತಮ್ಮ ಅನುಭವ ಮಂಟಪದಲ್ಲಿ ಸಾರ್ವಜನಿಕರೊಂದಿಗೆ ಚರ್ಚಿಸುತ್ತಿದ್ದರು ಎಂದು ಹೇಳಿದರು.

12ನೇ ಶತಮಾನದಲ್ಲಿಯೇ ಬಸವಣ್ಣನವರಿಗೆ ಸಮಾಜದ ಅಭಿವೃದ್ಧಿಯ ಬಗ್ಗೆ ಬಹಳ ಕಾಳಜಿ ಇತ್ತು ಹಾಗಾಗಿ ಇಂತಹ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಿಸುವುದರ ಜೊತೆಗೆ ಅವರ ತತ್ವಾದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತು ನಮ್ಮ ಕೆಲಸವನ್ನು ಎಷ್ಟು ಶ್ರದ್ಧೆಯಿಂದ ನಿರ್ವಹಿಸಬೇಕು ಎಂಬುದರ ಅರ್ಥವನ್ನು ತಿಳಿಸುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಬೇಬಿ ಮಠದ ಚಂದ್ರವನ ಆಶ್ರಮದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಮಹಾಸ್ವಾಮೀಜಿ, ಉಪವಿಭಾಗಾಧಿಕಾರಿ ಐಶ್ವರ್ಯ, ಎಎಸ್ಪಿ ವೇಣುಗೋಪಾಲ್, ಜಿಲ್ಲಾ ಬಸವ ಜಯಂತಿ ಸಮಿತಿ ಅಧ್ಯಕ್ಷ ಎಂ.ಬಿ. ರಾಜಶೇಖರ್, ನಗರಸಭೆ ಆಯುಕ್ತ ಎಸ್. ಲೋಕೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್.ಉದಯ ಕುಮಾರ್, ನಗರಸಭೆ ಅಧ್ಯಕ್ಷ ಎಚ್.ಎಸ್. ಮಂಜು ಇತರರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯಲ್ಲಿ 45 ಸಾವಿರ ಪದವೀಧರರ ನೋಂದಣಿ



ಭಾರತೀನಗರ, ಮೇ 3 (ಅಣ್ಣೂರು ಸತೀಶ್)– ನಾಲ್ಕು ಜಿಲ್ಲೆಗಳಿಂದ 45 ಸಾವಿರ ಪದವೀಧರರನ್ನು ಈಗಾಗಲೇ ನೋಂದಣಿ ಮಾಡಿಸಲಾಗಿದೆ ಎಂದು ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡ ತಿಳಿಸಿದರು.

ಇಲ್ಲಿನ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಭಾರತೀನಗರ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಈ ನಾಲ್ಕು ಜಿಲ್ಲೆಗಳಿಂದ 1.35 ಲಕ್ಷ ಮತದಾರರಿದ್ದು, ಅದರಲ್ಲಿ ಮಂಡ್ಯ ಜಿಲ್ಲೆಯಲ್ಲೇ 45 ಸಾವಿರ ಮತಗಳಿವೆ. ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಮತಗಳಿರುವುದರಿಂದ ನಮ್ಮ ಕಾರ್ಯಕರ್ತರು ಮತಗಳ ಬೇಟೆಗೆ ಮುನ್ನುಗ್ಗಬೇಕು ಎಂದರು.

ಈಗಾಗಲೇ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳನ್ನು ಸಂಪರ್ಕ ಮಾಡಿದ್ದೇನೆ, ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಕಾರ್ಯಕರ್ತರು ಪದವೀಧರರೇ ಆಗಬೇಕಿಲ್ಲ. ಒಬ್ಬ ಕಾರ್ಯಕರ್ತ 15 ರಿಂದ 20 ಮತಗಳನ್ನು ಹಾಕಿಸಬಹುದು. 4 ಜಿಲ್ಲೆಯಿಂದ 27 ತಾಲೂಕುಗಳನ್ನು ನಾನೊಬ್ಬನೇ ಸಂಪರ್ಕಿಸಲು ಸಾಧ್ಯವಿಲ್ಲ. ಕಾರ್ಯಕರ್ತರು, ಬಂಧುಗಳು ಮತ್ತು ಹಿತೈಷಿಗಳು ಮತದಾರರನ್ನು ಸಂಪರ್ಕಿಸಿ ಮತ ಹಾಕಿಸುತ್ತಾರೆಂಬ ವಿಶ್ವಾಸ ನನಗಿದೆ ಎಂದು ತಿಳಿಸಿದರು.

ನಮ್ಮ ತಂದೆ ಜಿ.ಮಾದೇಗೌಡರ ಹೆಸರು ರಾಜ್ಯದಲ್ಲೇ ಪ್ರಸಿದ್ಧಿಗೊಂಡಿರುವ ಹಿನ್ನೆಲೆಯಲ್ಲಿ ನಾನು ಎಲ್ಲೇ ಹೋದರೂ ನಮ್ಮ ಕಾಲೇಜಿನಲ್ಲಿ ಓದಿದಂತಹ ವಿದ್ಯಾರ್ಥಿಗಳು ಉನ್ನತ ಹುದ್ದೆಯಲ್ಲಿದ್ದಾರೆ. ಅವರು ನನ್ನನ್ನು ಗುರುತಿಸಿ ಮಾತನಾಡಿಸುತ್ತಿರುವುದು ಸಂತಸ ತಂದಿದೆ ಎಂದರು. ಈ ಸಂದರ್ಭದಲ್ಲಿ ಕಾವೇರಿ ನೀರಾವರಿ ನಿಗಮದ ನಿವೃತ್ತ ಕಾರ್ಯಪಾಲಕ ಅಭಿಯಂತರ ಬಸವರಾಜೇಗೌಡ, ಭಾರತೀ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಮಾದರಹಳ್ಳಿ ಗ್ರಾ.ಪಂ ಅಧ್ಯಕ್ಷ ಎಂ.ಇ.ಕೃಷ್ಣ, ಚಿಕ್ಕರಸಿನಕೆರೆ ಗ್ರಾ.ಪಂ ಉಪಾಧ್ಯಕ್ಷ ಶಿವಲಿಂಗಯ್ಯ, ಭಾರತೀನಗರ ಉಪಾಧ್ಯಕ್ಷ ಕಬ್ಬಾಳಯ್ಯ, ಸದಸ್ಯರಾದ ಪುಟ್ಟರಾಮು, ವಿನಯ್, ಕಾಡುಕೊತ್ತನಹಳ್ಳಿ ಗ್ರಾ.ಪಂ ಸದಸ್ಯ ರುದ್ರಯ್ಯ, ಅಣ್ಣೂರು ಪಿಎಸಿಸಿ ಮಾಜಿ ಅಧ್ಯಕ್ಷ ಆರ್.ಸಿದ್ದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುಟ್ಟನಹಳ್ಳಿ ಶಿವಲಿಂಗೇಗೌಡ ಮಾತನಾಡಿದರು.

ಜಲ ಸಂರಕ್ಷಣೆಗೆ ಜಲಶಕ್ತಿ ಅಭಿಯಾನ

ಮಂಡ್ಯ, ಮೇ 3–ಕುಂದೂರು ಗ್ರಾಪಂ ವ್ಯಾಪ್ತಿಯಲ್ಲಿ ಜಲಮೂಲಗಳ ಸಂರಕ್ಷಣೆ, ಅಂತರ್ಜಲ ವೃದ್ಧಿ ಹಾಗೂ ಕೃಷಿ ಚಟುವಟಿಕೆಗಳಿಗೆ ಅಗತ್ಯ ಪ್ರಮಾಣದ ನೀರು ಒದಗಿಸುವ ಸಲುವಾಗಿ ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಜಲಶಕ್ತಿ ಅಭಿಯಾನದ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸಲು ಕಲ್ಯಾಣಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕೃಷ್ಣ ತಿಳಿಸಿದರು. ಕುಂದೂರು ಭಾಗದಲ್ಲಿ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡುವುದರ ಜತೆಗೆ ಗ್ರಾಮೀಣ ಭಾಗದ ಜನರಿಗೆ ನೀರಿನ ಪೂರಕ ವಾತಾವರಣ ನಿರ್ಮಾಣ ಮಾಡುವ ಉದ್ದೇಶದಿಂದ ಮಾ.22 ರಿಂದ ನ.30ರವರೆಗೆ 'ಕ್ಯಾಚ್ ದ ರೇನ್' ಅಭಿಯಾನ ಪ್ರಾರಂಭವಾಗಿದೆ ಎಂದು ಹೇಳಿದರು.

ಮಳೆ ನೀರು ಸಂರಕ್ಷಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವುದು ಯೋಜನೆಯ ಉದ್ದೇಶ. ಮಳೆ ನೀರು ಸಂರಕ್ಷಣೆ ಮಾಡಲು ನರೇಗಾ ಯೋಜನೆಯಡಿ ಅವಕಾಶ ಕಲ್ಪಿಸಿದ್ದು, ಅಂತರ್ಜಲ ಸಂರಕ್ಷಣೆಗೆ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದರು.

ಗ್ರಾಪಂ ವ್ಯಾಪ್ತಿಯಲ್ಲಿರುವ ಕೆರೆ, ಕಲ್ಯಾಣಿಗಳ ಅಭಿವೃದ್ಧಿ ಮಾಡುವುದು. ನೀರು ಹರಿದು ಹೋಗುವ ನಾಲೆ, ಕಾಲುವೆಗಳ ಪುನಶ್ಚೇತನ, ಹೊಸ ಕೆರೆ, ಗೋಕಟ್ಟೆ, ಮಳೆ ನೀರು ಸಂಗ್ರಹ ಮಾದರಿ ಅಳವಡಿಕೆ, ಅರಣ್ಯೀಕರಣ ಕಾಮಗಾರಿಗೆ ಅವಕಾಶವಿದೆ. ಸೋಕ್ ಪಿಟ್‌ಗಳ ನಿರ್ಮಾಣ, ಬದುಗಳ ನಿರ್ಮಾಣ, ವೈಯಕ್ತಿಕ ಕಾಮಗಾರಿಗಳನ್ನು ನರೇಗಾ ಯೋಜನೆಯಡಿ ಕೈಗೆತ್ತಿಕೊಳ್ಳಬಹುದು ಎಂದರು. ತಾಲೂಕು ಮಾಹಿತಿ ಶಿಕ್ಷಣ ಮತ್ತು ಸಂವಹನ ಸಂಯೋಜಕರಾದ ಸುನಿಲ್‌ಕುಮಾರ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.



ಕೆ.ಆರ್.ಪೇಟೆ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ ಜಗಜ್ಯೋತಿ ಬಸವೇಶ್ವರರ ಜಯಂತಿ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ವಿ.ರೂಪ ಮಾತನಾಡಿದರು. ಈ ವೇಳೆ ವೀರಶೈವ ತಾಲೂಕು ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್, ಉಪಾಧ್ಯಕ್ಷ ಪ್ರಕಾಶ್, ಪುರಸಭೆ ಅಧ್ಯಕ್ಷೆ ಮಹದೇವಿ ನಂಜುಂಡ, ಪುರಸಭಾ ಸದಸ್ಯ ಡಾ.ಕೆ.ಎಸ್.ರಾಜೇಶ್, ಉದ್ಯಮಿ ಮೃತ್ಯುಂಜಯ ಗುರುಸ್ವಾಮಿ ಇತರರಿದ್ದಾರೆ.

ಪದೇ ಪದೇ ಸಿಎಂ ಬದಲಾದರೆ ಅಭಿವೃದ್ಧಿ ಅಸಾಧ್ಯ



ಮಂಡ್ಯ,ಮೇ 3(ಮೋಹನ್‌ರಾಜ್)– ಬಿಜೆಪಿ ಸರ್ಕಾರದಲ್ಲಿ ಮೂರು ಮುಖ್ಯಮಂತ್ರಿಗಳನ್ನು ರಾಜ್ಯದ ಜನ ನೋಡಿದ್ದು, ಮತ್ತೆ ಸಿಎಂ ಬದಲಾವಣೆಯ ಮಾತುಗಳು ಕೇಳಿ ಬರುತ್ತಿರುವುದರಿಂದ ಪದೇ ಪದೇ ಸಿಎಂ ಬದಲಾದರೆ ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂದು ಕೆಪಿಸಿಸಿ ವಕ್ತಾರ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಮಂಗಳವಾರ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಿಂದ ಮಾತ್ರ ಸ್ಥಿರ ಹಾಗೂ ಜನಪರ ಸರ್ಕಾರ ಕೊಡಲು ಸಾಧ್ಯ. ಈ ಬಗ್ಗೆ ಜನರಿಗೂ ಸಹ ಮನವರಿಕೆಯಾಗಿದ್ದು, ಮಂಡ್ಯ ಜಿಲ್ಲೆಯ ಜನ ಸಹ ಏಳಕ್ಕೆ ಏಳು ಸೀಟನ್ನು ಗೆಲ್ಲಿಸಿ ಏನಾಗಿದೆ ಎಂಬುದನ್ನು ಅರಿತಿದ್ದಾರೆ. ಮಂಡ್ಯದಲ್ಲೂ ಸಹ ಪೂರ್ಣ ಪ್ರಮಾಣದಲ್ಲಿ ಮುಂದಿನ ಚುನಾವಣೆಯಲ್ಲಿ ಬದಲಾವಣೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರಕ್ಕೆ ಅಭಿವೃದ್ಧಿ, ಸೌಹಾರ್ದಯುತದ ಕಡೆ ಗಮನ ಕೊಡುವುದನ್ನು ಬಿಟ್ಟು ಚುನಾವಣೆಯಲ್ಲಿ ಮತಕ್ಕಾಗಿ ಕೋಮು ಗಲಭೆ ಸೃಷ್ಟಿಸುತ್ತಾರೆ. ಕೋಮುಗಲಭೆಗೆ ಬಿಜೆಪಿ ಹೆಚ್ಚಿನ ಮಹತ್ವ ಕೊಡುತ್ತಾ ಬಂದಿದೆ ಎಂದು ಕಿಡಿಕಾರಿದರು.

ಚುನಾವಣೆ ಬಂದಾಗ ಮುಖಂಡರುಗಳು ಪಕ್ಷಾಂತರ ಮಾಡುವುದು ಸರ್ವೆ ಸಾಮಾನ್ಯ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದು, ಜಿಲ್ಲೆಯಲ್ಲಿ ಓರ್ವ ಬಿಜೆಪಿ ಶಾಸಕರು ಸಹ ಇದ್ದಾರೆ. ಈ ನಿಟ್ಟಿನಲ್ಲಿ ಚುನಾವಣೆ ತಯಾರಿ, ಪಕ್ಷಾಂತರ ಬಿಜೆಪಿಯಲ್ಲಿ ಜೋರಾಗಿದೆ. ಆದರೆ ಕಾಂಗ್ರೆಸ್‌ನಲ್ಲಿ ಈ ಹಿಂದೆಯೇ ಚುನಾವಣೆ ತಯಾರಿ ಶುರುವಾಗಿದ್ದು, ಕೆಪಿಸಿಸಿ ಅಧ್ಯಕ್ಷರು, ವಿಪಕ್ಷ ನಾಯಕರು ಜನವಿರೋಧಿ ಹೋರಾಟದ ಮೂಲಕ ಚುನಾವಣೆಗೆ ಸಜ್ಜಾಗಿದ್ದು, ಕೇವಲ ಚುನಾವಣೆ ದೃಷ್ಟಿ ಮಾತ್ರವಲ್ಲದೇ, ಜನರಿಗಾಗಿಯೂ ಹೋರಾಟ ಮಾಡುತ್ತಾ, ಚುನಾವಣೆಗೆ ಸಿದ್ಧವಾಗುತ್ತಿದೆ ಎಂದರು.

ಜಿಲ್ಲೆಯಲ್ಲಿ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡವರು ಯಾರೂ ಸಹ ಬಿಜೆಪಿ ಸೇರುತ್ತಿಲ್ಲ. ಸಚ್ಚಿದಾನಂದ ಈ ಹಿಂದೆಯೇ ಕಾಂಗ್ರೆಸ್ ಬಿಟ್ಟಿದ್ದು, ಅವರು ಸಕ್ರೀಯವಾಗಿ ಯಾವ ಪಕ್ಷದಲ್ಲೂ ಇಲ್ಲದ ಕಾರಣ ಅವರು ಬಿಜೆಪಿಗೆ ಹೋಗುತ್ತಿದ್ದಾರೆ. ಸುಮಲತಾ ಪಕ್ಷೇತರ ಸಂಸದೆಯಾಗಿದ್ದು, ಅವರು ರಾಜಕೀಯ ನಿರ್ಧಾರ ಕೈಗೊಳ್ಳುವಲ್ಲಿ ಸಕ್ರೀಯರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಮಧು ಜಿ.ಮಾದೇಗೌಡ, ಮುಖಂಡರಾದ ಗಣಿಗ ರವಿಕುಮಾರ್, ಸಿ.ಡಿ.ಗಂಗಾಧರ್, ಡಾ.ಕೃಷ್ಣ, ವಿಜಯ್‌ಕುಮಾರ್, ಹಾಲಹಳ್ಳಿ ಅಶೋಕ್, ತ್ಯಾಗರಾಜು ಇದ್ದರು.

ಪಾಂಡವಪುರದಲ್ಲೂ ಬಸವ ಜಯಂತಿ ಆಚರಣೆ



ಪಾಂಡವಪುರ, ಮೇ 3– ಪಟ್ಟಣದ ಶಾಂತಿನಗರದ ವೀರಶೈವ ವಿವಿಧೋದ್ದೇಶ ಸಹಕಾರ ಸಂಘದ ಕಚೇರಿಯಲ್ಲಿ ಬಸವ ಜಯಂತಿಯನ್ನು ಆಚರಣೆ ಮಾಡಲಾಯಿತು. ಸಂಘದ ಅಧ್ಯಕ್ಷ ಅಮೃತಿ ರಾಜಶೇಖರ್ ಸೇರಿದಂತೆ ಸಂಘದ ಪದಾಧಿಕಾರಿಗಳು ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಇದೇ ವೇಳೆ ಸಾರ್ವಜನಿಕರಿಗೆ ಮಜ್ಜಿಗೆ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಲೋಕೇಶ್ವರಿ, ಮಾಜಿ ಅಧ್ಯಕ್ಷ ಬಿ.ನಿಂಗಪ್ಪ, ನಿರ್ದೇಶಕರಾದ ಕೆ.ಎಂ.ಮಹದೇವಪ್ಪ, ಡಿ.ಎಂ.ಶಿವಪ್ಪ, ಬಿ.ಎಸ್. ಶಿವಣ್ಣ, ಪದ್ಮರಾಜ್, ಎಂ.ಶಿವಕುಮಾರ್, ಪುಷ್ಪಲತಾ, ಮಹದೇವ, ಬೋರಯ್ಯ, ಕಾರ್ಯದರ್ಶಿ ಪಿ.ಲೀಲಾ, ಶಿಕ್ಷಕರಾದ ನಾಗೇಂದ್ರ, ಲಿಂಗರಾಜು ಸೇರಿದಂತೆ ಸಮುದಾಯದ ಮುಖಂಡರು ಹಾಜರಿದ್ದರು.

ಮಾಜಿ ಸಿಎಂ ಎಸ್.ಎಂ.ಕೃಷ್ಣರ ಸೇವೆ ರಾಜ್ಯಕ್ಕೆ ಅಗತ್ಯವಿದೆ

ಭಾರತೀನಗರ, ಮೇ 3(ಅಣ್ಣೂರು ಸತೀಶ್)– ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿ ರಾಜಕಾರಣಿ ಎಸ್.ಎಂ.ಕೃಷ್ಣ ಅವರ ಸೇವೆ ಕರ್ನಾಟಕ ರಾಜ್ಯಕ್ಕೆ ಅಗತ್ಯವಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಶುಭಾಶಯ ಕೋರಿದ ಅವರು, ಎಸ್.ಎಂ.ಕೃಷ್ಣ ಅವರು ಉತ್ತಮ ರಾಜಕಾರಣಿ, ಮುಖ್ಯಮಂತ್ರಿಯಾಗಿ, ರಾಜ್ಯಪಾಲರಾಗಿ, ಕೇಂದ್ರ ಸಚಿವರಾಗಿ ಅವರದೇ ರೀತಿಯಲ್ಲಿ ಕೊಡುಗೆಯನ್ನು ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಕೊಟ್ಟಿದ್ದಾರೆ. ಅವರು ಶತಾಯುಷಿಯಾಗಬೇಕು, ಅವರು ರಾಜಕೀಯದಲ್ಲಿ ಕಲ್ಪಿಸಿದ ಅವಕಾಶದಿಂದ ನಾನು ಮದ್ದೂರು ಕ್ಷೇತ್ರದ ಶಾಸಕನಾಗಿ 4 ಬಾರಿ ಆಯ್ಕೆಯಾಗಿದ್ದೇನೆ.

ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಬರಗಾಲ ಹಾಗೂ ಡಾ.ರಾಜಕುಮಾರ್ ಅಪಹರಣವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಅಲ್ಲದೆ, ಉತ್ತಮ ಆಡಳಿತ ನೀಡಿ ಹೆಸರು ಗಳಿಸಿದ್ದಾರೆ. ಅವರು ಅನ್ಯ ಪಕ್ಷದಲ್ಲಿದ್ದರೂ ಅವರೊಂದಿಗಿನ ಒಡನಾಟ ಮತ್ತು ಬಾಂಧವ್ಯ ಚೆನ್ನಾಗಿದೆ ಎಂದು ಹಾರೈಸಿದರು.

ಹುಣಸೂರು ತಾಲೂಕಿನಾದ್ಯಂತ ಭಾರೀ ಬಿರುಗಾಳಿ ಮಳೆ

● ಎರಡು ಹಸುಗಳು ಸಾವು ● ಮನೆಗಳಿಗೆ ನೀರು ನುಗ್ಗಿ ದಿನಸಿ ಸಾಮಗ್ರಿಗಳು ಹಾಳು ● ಅಡಿಕೆ, ತೆಂಗಿನಮರಗಳಿಗೆ ಸಿಡಿಲು ● ಧರೆಗುರುಳಿದ ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್‌ಗಳು ● ಗೋಡೆ ಕುಸಿತ





ಹುಣಸೂರು, ಮೆ.3(ಕೆಕೆ)– ಕಳೆದೆರಡು ದಿನಗಳಿಂದ ಗುಡುಗು, ಸಿಡಿಲು ಸಹಿತ ಸುರಿದ ಭಾರೀ ಬಿರುಗಾಳಿ ಮಳೆಯಿಂದ ಹುಣಸೂರು ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಲಕ್ಷಾಂತರ ರೂ. ಮೌಲ್ಯದ ಆಸ್ತಿ–ಪಾಸ್ತಿ ನಷ್ಟವಾಗಿ, ಎರಡು ಹಸುಗಳು ಸಾವನ್ನಪ್ಪಿ, ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮನೆಗಳಿಗೆ ನೀರು: ಭಾರೀ ಮಳೆಯಿಂದ ಎಂದಿನಂತೆ ನಗರದ ಮಂಜುನಾಥ ಹಾಗೂ ಸಾಕೇತ ಬಡಾವಣೆಯ ಕೆಲ ಮನೆಗಳಿಗೆ ನೀರು ನುಗ್ಗಿ ದಿನಸಿ ಸಾಮಗ್ರಿಗಳು ನೀರಿನಲ್ಲಿ ತೊಯ್ದು ಹೋಗಿದ್ದು, ನಿವಾಸಿಗಳು ಪರದಾಡುವಂತಾಗಿದೆ. ಬಡಾವಣೆಯ ಕೆಲವೆಡೆ ನೀರು ನಿಂತಿದ್ದು, ಜನರು ಓಡಾಡುವುದೇ ಕಷ್ಟವಾಗಿದೆ. ಮುಸ್ಲಿಂ ಬ್ಲಾಕ್‌ನಲ್ಲಿ ಕಾಮಗಾರಿಗೆ ಹಾಕಿದ್ದ ಸೆಂಟ್ರಿಂಗ್ ಸಾಮಗ್ರಿಗಳು ಕೊಚ್ಚಿಕೊಂಡು ಹೋಗಿವೆ. ವಿಷಯ ತಿಳಿಯುತ್ತಿದ್ದಂತೆ ನಗರಸಭೆಯ ಪೌರಾಯುಕ್ತ ರವಿಕುಮಾರ್ ನೇತೃತ್ವದಲ್ಲಿ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಮನೆಗಳಿಗೆ ನುಗ್ಗಿದ ನೀರು ಹೊರ ಹಾಕಿದ್ದಲ್ಲದೆ, ಬಡಾವಣೆಗಳಲ್ಲಿ ನಿಂತಿದ್ದ ನೀರು ಹೊರ ಹೋಗುವಂತೆ ಕ್ರಮವಹಿಸಿದ್ದಾರೆ.

ಅಡಿಕೆ ಮರಗಳಿಗೆ ಹಾನಿ: ಹನಗೋಡು ಹೋಬಳಿಯ ಚಿಲ್ಕುಂದದಲ್ಲಿ ವೆಂಕಟರಾಮಯ್ಯ ಹಾಗೂ ರಘುನಾಥ ಅವರಿಗೆ ಸೇರಿದ 50ಕ್ಕೂ ಹೆಚ್ಚು ಅಡಿಕೆ ಮತ್ತು ತೆಂಗಿನಮರಗಳಿಗೆ ಸಿಡಿಲು ಬಡಿದು ಸುಟ್ಟು ಹೋಗಿವೆ. ಇದರಿಂದ ಅಪಾರ ನಷ್ಟವಾಗಿದೆ.

ಧರೆಗುರುಳಿದ ಟ್ರಾನ್ಸ್‌ಫಾರ್ಮರ್, ಮರಗಳು: ಎರಡು ದಿನಗಳ ಕಾಲ ಸುರಿದ ಬಿರುಗಾಳಿ ಮಳೆಗೆ ಬಿಳಿಕೆರೆ ಹೋಬಳಿಯಲ್ಲಿ ಹೆಚ್ಚು ಹಾನಿಯಾಗಿದೆ. ಬಿಳಿಕೆರೆ–ದಲ್ಲಾಳು ರಸ್ತೆ ಹಾಗೂ ಮೈದನಹಳ್ಳಿ–ವಡ್ಡರಹಳ್ಳಿ ರಸ್ತೆಗಳಲ್ಲಿ ವಿದ್ಯುತ್ ಕಂಬಗಳ ಸಮೇತ ಎರಡು ಟ್ರಾನ್ಸ್‌ಫಾರ್ಮರ್‌ಗಳು ನೆಲಕ್ಕುರುಳಿವೆ. ಮೈದನಹಳ್ಳಿಯಲ್ಲಿ ಕುಮಾರ್ ಅವರ ಮನೆ ಮೇಲೆ ತೆಂಗಿನಮರ ಬಿದ್ದು ಹಾನಿಯಾಗಿದ್ದರೆ, ಇವರಿಗೆ ಸೇರಿದ ಇಟ್ಟಿಗೆ ಫ್ಯಾಕ್ಟರಿಯ ಶೀಟ್‌ಗಳು ಗಾಳಿಗೆ ತೂರಿಕೊಂಡು ಹೋಗಿವೆ ಹುಣಸೂರು–ಮೈಸೂರು ಹೆದ್ದಾರಿಯ ಹತ್ತಾರು ಕಡೆ ಮರಗಳು ನೆಲಕ್ಕುರುಳಿದ್ದು, ಸಂಚಾರಕ್ಕೆ ಅಡ್ಡಿಯಾಗಿ ವಾಹನ ಸವಾರರು ಪರದಾಡಬೇಕಾಯಿತು. ವಿಷಯ ತಿಳಿದ ಸಂಬಂಧಪಟ್ಟ ಇಲಾಖೆಯವರು ಸ್ಥಳಕ್ಕೆ ಆಗಮಿಸಿ ಮರಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಹನಗೋಡು ಹೋಬಳಿಯ ಹೊಸ ಪೆಂಜಳ್ಳಿ ಸುತ್ತ–ಮುತ್ತ ಕೂಡ 13 ವಿದ್ಯುತ್ ಕಂಬಗಳು ಧರೆಗುರುಳಿವೆ. ಚೆಸ್ಕಾಂ ಸಿಬ್ಬಂದಿಗಳು ದುರಸ್ತಿ ಕಾಮಗಾರಿ ನಡೆಸಿ ಸರಿಪಡಿಸಿದರು.

ಮನೆಗಳ ಗೋಡೆ ಕುಸಿತ : ನಾಗರಹೊಳೆ ರಸ್ತೆಯ ನಾಗಾಪುರ ಗಿರಿಜನ ಪುನರ್ವಸತಿ ಕೇಂದ್ರ ಪಕ್ಷಿರಾಜಪುರ, ಉಮ್ಮತ್ತೂರು, ಚಿಕ್ಕಹೆಜ್ಜೂರು ಹಾಗೂ ವಿನೋಬಾ ಕಾಲೋನಿಯ ಮಹದೇವಪ್ಪ ಉಮ್ಮತ್ತೂರು ಸೇರಿದಂತೆ ಹತ್ತಕ್ಕೂ ಹೆಚ್ಚು ಮನೆಗಳ ಮೇಲ್ಛಾವಣಿ ಹಾರಿ ಹೋಗಿವೆ. ಗೋಡೆಗಳು ಕುಸಿದು ಬಿದ್ದಿದೆ. ಎರಡನೇ ಪಕ್ಷಿರಾಜಪುರದ ಸವಿತಾ ಮನೆ ಮೇಲೆ ತೆಂಗಿನಮರ ಉರುಳಿ ಮನೆಗೆ ಹಾನಿಯಾಗಿದೆ. ತಾಲೂಕಲ್ಲಿ ಹತ್ತಾರು ಎಕರೆ ಬಾಳೆ ಬೆಳೆ ನಾಶವಾಗಿವೆ.

ಸಿಡಿಲಿಗೆ ಹಸುಗಳು ಬಲಿ: ಬಿಳಿಕೆರೆಯ ಅಣ್ಣೇಗೌಡರ ಪತ್ನಿ ಜಯಮ್ಮನವರಿಗೆ ಸೇರಿದ ಸುಮಾರು ಲಕ್ಷ ರೂ. ಬೆಲೆ ಬಾಳುವ ಎರಡು ಇಲಾತಿ ಹಸುಗಳು ಕೊಟ್ಟಿಗೆಯಲ್ಲೇ ಸಿಡಿಲಿಗೆ ಬಲಿಯಾಗಿದ್ದು, ಅದರಿಂದಲೇ ಜೀವನ ನಡೆಸುತ್ತಿದ್ದ ಕುಟುಂಬ ಕಂಗಾಲಾಗಿದೆ.

ಹಾನಿ ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳು, ಗ್ರಾಮಲೆಕ್ಕಿಗರು ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಹಾನಿ ಪ್ರದೇಶಗಳಿಗೆ ತಹಸೀಲ್ದಾರ್ ಡಾ. ಅಶೋಕ್ ಕೂಡ ಭೇಟಿ ನೀಡಿದ್ದರು.

ಸರಗೂರಲ್ಲಿ ಸಂಭ್ರಮದ ರಂಜಾನ್ ಆಚರಣೆ



ಸರಗೂರು, ಮೇ 3(ನಾಗೇಶ್)– ಪಟ್ಟಣದ ಮುಸ್ಲಿಂ ಬಾಂಧವರು ಸಂಭ್ರಮದಿಂದ ರಂಜಾನ್ ಹಬ್ಬವನ್ನು ಆಚರಿಸಿದರು.

ಇಲ್ಲಿನ ಜಾಮೀಯಾ ಮಸೀದಿ ಗುರುಗಳಾದ ಅಬ್ದುಲ್ ರಶೀದ್ ಹಾಗೂ ನೂರ್ ಮಸೀದಿ ಗುರುಗಳಾದ ಅಬ್ದುಲ್ ಜಲೀಲ್ ಜನತೆಗೆ ಪವಿತ್ರ ರಂಜಾನ್ ಹಬ್ಬದ ಶುಭಾಶಯ ತಿಳಿಸಿದರು. ಬಳಿಕ ಮಾತನಾಡಿದ ಅವರು, ಒಂದು ತಿಂಗಳ ಉಪವಾಸದ ನಂತರ ಬರುವ ಹಬ್ಬವೇ ಪವಿತ್ರ ರಂಜಾನ್. ಈ ಹಬ್ಬದ ಆಚರಣೆಯಿಂದ ಎಲ್ಲರಲ್ಲೂ ಉತ್ತಮ ಬಾಂಧವ್ಯ ಬೆಳೆಯುತ್ತದೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷ ಹಬ್ಬವನ್ನು ಸರಳವಾಗಿ ಆಚರಿಸಲಾಗಿತ್ತು ಈ ಬಾರಿ ಸಂಭ್ರಮದಿಂದ ಆಚರಿಸಲಾಗುತ್ತಿದೆ ಎಂದರು.

ನಂತರ ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಪ್ರಮುಖ ರಸ್ತೆಯಲ್ಲಿ ಮೆರವಣಿಗೆಯಲ್ಲಿ ಸಾಗಿ ಮಸೀದಿಗೆ ಆಗಮಿಸಿ ಸಾಂಕೇತಿಕವಾಗಿ ಪ್ರಾರ್ಥನೆ ಸಲ್ಲಿಸಲಾಯಿತು. ರಂಜಾನ್ ಪ್ರಯುಕ್ತ ಮುಖಂಡ ಜಾವೀದ್ ಉಚಿತವಾಗಿ ಕಬ್ಬಿನ ಹಾಲು ವಿತರಿಸಿ, ಮಕ್ಕಳಿಗೆ ಸಿಹಿ ಹಂಚಿದರು. ಪುಟ್ಟ ಮಕ್ಕಳು ಹೊಸಬಟ್ಟೆ ತೊಟ್ಟು ರಂಜಾನ್ ಹಬ್ಬಕ್ಕೆ ಮೆರಗು ತಂದರು. ಈ ವೇಳೆ ಮುಖಂಡರಾದ ಅಬ್ದುಲ್ ಮಜೀದ್, ಹಾಜಿ ಅಬ್ದುಲ್ ಅಜೀಜ್, ಪಪಂ ಮಾಜಿ ಸದಸ್ಯ ಮಹಮ್ಮದ್ ಉಸ್ಮಾನ್, ಮುಜೀಬ್, ಸುಭಾನ್, ಜಲೀಲ್, ನಾಸೀರ್, ಜಾವೀದ್, ಇಬ್ರಾಹಿಂ, ಹಿದಾಯತ್, ಸುಹೇಲ್, ಅನಾಸ್, ರಫಿ, ಚಾಂದ್, ಸೇಟು ಹಾಗೂ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.



ತಿ.ನರಸೀಪುರದ 11ನೇ ವಾರ್ಡ್‌ನಲ್ಲಿ ಪುರಸಭಾ ಸದಸ್ಯ ಟಿ.ಎಂ.ನಂಜುಂಡ ಸ್ವಾಮಿ ರಂಜಾನ್ ಪ್ರಯುಕ್ತ ವಾರ್ಡ್ ನಿವಾಸಿಗಳಿಗೆ ಆಹಾರ ಕಿಟ್ ವಿತರಿಸಿದರು. ಈ ವೇಳೆ ಪುರಸಭಾ ಸದಸ್ಯರಾದ ಪ್ರಕಾಶ್, ಮುಖಂಡರಾದ ವಿನೋದ್, ಮಾದೇಶ್, ಹೇಮಂತ್, ಶಾಂತಕುಮಾರ, ಬಾಬು, ಸೋಮಣ್ಣ, ಅಕ್ಬರ್ ಅಲಿ, ದೇವರಾಜ್, ರಾಜೇಶ್ ಮತ್ತಿತರಿದ್ದರು.

ಕಾಯಕವೇ ಕೈಲಾಸ ತತ್ವ ಇಂದಿಗೂ ಪ್ರಚಲಿತ

ಹನಗೋಡು, ಮೇ 3(ಮಹೇಶ್)– ಹಲವು ಸಾಮಾಜಿಕ ಸುಧಾರಣಾ ಕಾರ್ಯ ಮಾಡಿ ಸಮಾಜದ ಅನಿಷ್ಟ ಪದ್ಧತಿ ಹೋಗಲಾಡಿಸಲು ಶ್ರಮಿಸಿದ ಯುಗಪುರುಷ



ಬಸವಣ್ಣ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ಇಲ್ಲಿಗೆ ಸಮೀಪದ ಅರಸು ಕಲ್ಲಹಳ್ಳಿಯಲ್ಲಿ ಆಯೋಜಿಸಿದ್ದ ಬಸವ ಜಯಂತಿ ಉದ್ಘಾಟಿಸಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದ ಸಮಾಜ ಸುಧಾರಕರಾಗಿ, ಒಬ್ಬ ಕವಿ ಮತ್ತು ತತ್ವಜ್ಞಾನಿಯಾಗಿ ಪ್ರತಿಪಾದಿಸಿದ ಕಾಯಕವೇ ಕೈಲಾಸ ಎಂಬ ತತ್ವ ಇಂದಿಗೂ ಪ್ರಚಲಿತವಾಗಿದ್ದು, ಅನುಭವ ಮಂಟಪವೆಂಬ ಅದ್ಭುತ ಪರಿಕಲ್ಪನೆ ಇಂದಿಗೂ ಮಾದರಿಯಾಗಿದ್ದು ಎಲ್ಲಾ ವರ್ಗದವರನ್ನೂ ಒಂದೆಡೆ ತರುವ ಪ್ರಯತ್ನದ ಭಾಗವಾಗಿ ಈ ಅನುಭವ ಮಂಟಪ ಪ್ರಾರಂಭಿಸಿ ಸಮಾಜದಲ್ಲಿ ಬೇರೂರಿದ್ದ ಅಸ್ಪೃಶ್ಯತೆ, ಲಿಂಗ ತಾರತಮ್ಯಕ್ಕೆ ಕೊನೆ ಹಾಡಿ, ಹೆಣ್ಣುಮಕ್ಕಳಿಗೂ ಸಮಾನ ಶಿಕ್ಷಣ ನೀಡಬೇಕು ಎಂದು ಪ್ರತಿಪಾದಿಸಿದ ಮಹಾನ್ ಪುರುಷ. ಸಮಾಜ ಜಾತಿ ವ್ಯವಸ್ಥೆಯಿಂದ ಸಂಪೂರ್ಣ ಮುಕ್ತವಾಗಿರಬೇಕು. ಸರ್ವ ಧರ್ಮಗಳು ಸಮಾನತೆಯಿಂದ ಕೂಡಿರಬೇಕು ಎಂದು ಬಯಸಿದ್ದ ಬಸವಣ್ಣನವರು ಕಾಯಕವೇ ಕೈಲಾಸ ಎನ್ನುತ್ತ ಸಕಲರಿಗೂ ಮಾದರಿಯಾಗಿ ಜಗಜ್ಯೋತಿಯಾಗಿದ್ದು ಇವರ ಆದರ್ಶ ಹಾಗೂ ಮಾರ್ಗದರ್ಶನದಲ್ಲಿ ನಾವುಗಳು ನಡೆಯಬೇಕೆಂದು ತಿಳಿಸಿದರು. ಕಾರ್ಯಕ್ರಮಕ್ಕೂ ಮುನ್ನ ಜಗಜ್ಯೋತಿ ಬಸವೇಶ್ವರರ ಭಾವಚಿತ್ರವನ್ನು ಅಲಂಕರಿಸಿದ ಟ್ರಾಕ್ಟರ್‌ನಲ್ಲಿ ಇರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ಅನ್ನದಾಸೋಹ ನಡೆಸಲಾಯಿತು. ಕಾರ್ಯಕ್ರಮದಲ್ಲಿ ವೀರಶೈವ ಮುಖಂಡ ಸೋಮಶೇಖರ್, ಕೆಂಪನಂಜಯ್ಯ, ಕಲ್ಲಹಳ್ಳಿ ಗ್ರಾಪಂ ಅಧ್ಯಕ್ಷೆ ನಾಗವೇಣಿ, ಗ್ರಾಮದ ಯಜಮಾನ ನಿರ್ವಣಾಯ್ಯ, ಚಿಕ್ಕರಾಮೇಗೌಡ, ಬೋಗಪ್ಪ, ವಿಷಕಂಠ ಶಿವಣ್ಣ, ಗ್ರಾಪಂ ಸದಸ್ಯರಾದ ರಾಜಶೇಖರ್, ಸವಿತಾ, ರವಿ, ಡೇರಿ ಅಧ್ಯಕ್ಷ ರಮೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಗಮನ: ಶಾಸಕ ಅಶ್ವಿನ್



ತಿ.ನರಸೀಪುರ, ಮೇ 3(ಎಸ್‌ಕೆ)– ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಗಮನಹರಿಸಲಾಗುವುದು. ನಾನು ಜನಸಾಮಾನ್ಯರ ಶಾಸಕನಾಗಿರುವುದಕ್ಕೆ ಇಷ್ಟಪಡುತ್ತೇನೆಯೇ ವಿನಃ ಉಳ್ಳವರ ಶಾಸಕನಾಗಲು ಇಷ್ಟವಿಲ್ಲ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಮಾರ್ಮಿಕವಾಗಿ ನುಡಿದರು.

ತಾಲೂಕಿನ ಮೂಗೂರು ಗ್ರಾಮದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ 4 ವರ್ಷದಿಂದ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದು, ಈಗ ನಾಲೆಗಳ ರಸ್ತೆಗಳನ್ನು ರೈತರ ಒತ್ತಾಯದ ಮೇರೆಗೆ ಅಭಿವೃದ್ಧಿ ಮಾಡಲು ಮುಂದಾಗಿದ್ದೇನೆ ಎಂದರು

ಗ್ರಾಮಗಳಲ್ಲಿ 3.29 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದ್ದು, ಕಾವೇರಿ ನೀರಾವರಿ ನಿಗಮಿತದ ಅನುದಾನದಡಿ ಟಿ. ದೊಡ್ಡಪುರ, ಕನ್ನಹಳ್ಳಿ ಮೋಳೆ ಮತ್ತು ಮೂಗೂರು ಗ್ರಾಮಗಳಲ್ಲಿ ನಂ. 38, 39, 40 ಪಿಕಪ್ ನಾಲೆಗಳ ರಸ್ತೆ ನಿರ್ಮಾಣದ ಕಾಮಗಾರಿಗಳಿಗೆ ಶಾಸಕರು ಇಂದಿನಿಂದಲೇ ಕೆಲಸವನ್ನು ಆರಂಭಮಾಡಿ ಎಂದು ತಾಕೀತು ಮಾಡಿದರು. ಮೂಗೂರು ಮೋಳೆ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯಡಿ 35 ಲಕ್ಷ ರೂ.ವೆಚ್ಚದ ರಸ್ತೆ ಮತ್ತು ಚರಂಡಿ ನಿರ್ಮಾಣ, ಹೊಸಹಳ್ಳಿ ಗ್ರಾಮದಲ್ಲಿ ಕೆಐಆರ್‌ಡಿಎಲ್ ಅನುದಾನದಲ್ಲಿ 24 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ಪೂಜೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರಾಧ್ಯಕ್ಷ ಸಿ.ಬಿ.ಚಿನ್ನಸ್ವಾಮಿ, ಜಿಪಂ ಮಾಜಿ ಸದಸ್ಯ ಎಂ.ಆರ್. ಸೋಮಣ್ಣ, ಜಯಪಾಲ್ ಭರಣಿ, ತಾಪಂ ಮಾಜಿ ಸದಸ್ಯ ಎಂ.ಚಂದ್ರಶೇಖರ್, ಕೊತ್ತೇಗಾಲ ಗ್ರಾಪಂ ಅಧ್ಯಕ್ಷ ಮರಯ್ಯ, ಮೂಗೂರು ಗ್ರಾಪಂ ಅಧ್ಯಕ್ಷ ಚಂದ್ರಮ್ಮ, ಉಪಾಧ್ಯಕ್ಷ ಜಿ.ಮೋಹನ್ ಕುಮಾರ್, ವಾಟಾಳ್ ಗ್ರಾಪಂ ಅಧ್ಯಕ್ಷೆ ಚನ್ನಾಜಮ್ಮ, ಡೈರಿ ಅಧ್ಯಕ್ಷ ವೀರೇಶ್, ಗ್ರಾಪಂ ಸದಸ್ಯರಾದ ಜೈಬಸವಣ್ಣ, ರಾಜೇಶ್, ಚೇತನ್, ಭಾಗ್ಯಮ್ಮ, ಗೌರೀಶ್, ಸವಿತಾ, ನಾಗಮ್ಮ ಬಸವರಾಜು, ಪುರುಷೋತ್ತಮ, ಮುಖಂಡರಾದ ಗ್ರಾಪಂ ಮಾಜಿ ಅಧ್ಯಕ್ಷ ಎಂ.ಜಗದೀಶ್ ಮೂರ್ತಿ, ಎಂ.ಆರ್. ಶಿವಮೂರ್ತಿ, ಸುಂದ್ರ, ಚಿಕ್ಕಸ್ವಾಮಿ, ಪ್ರಭುಸ್ವಾಮಿ, ರಮೇಶ್, ಸಿದ್ದಪ್ಪ, ಸತೀಶ್, ಪಾಪಣ್ಣ, ಶಿವಕುಮಾರ್, ಗ್ರಾಪಂ ಮಾಜಿ ಉಪಾಧ್ಯಕ್ಷ ಎಂ.ಕೆಸಿದ್ದರಾಜು, ಎಂ.ಸಿದ್ದರಾಜು, ದೇವಾನಂದ, ಜಗಪತಿ, ಬಸವಣ್ಣ, ಮಹದೇವು, ಸುಬ್ಬಣ್ಣ, ಯಶೋಧಮ್ಮ, ರಮೇಶ, ಶಿವಕುಮಾರ್, ನಿಂಗರಾಜು, ಕುಳ್ಳನಂಜೇಗೌಡ, ಕೆಂಚೇಗೌಡ, ಕಾವೇರಿ ನೀರಾವರಿ ನಿಗಮದ ಇಇ ಮಹೇಶ, ಲೋಕೊಪಯೋಗಿ ಎಇಇ ನಟೇಶ್, ಎಇಇ ಮಂಜುನಾಥ್, ಎಇಇ ನಟೇಶ್, ಎಇಗಳಾದ ಶಬರೀಶ್, ಬಿಂದು, ಸುಧೀಂದ್ರ, ರೇಣುಕೇಶ್ವರ್, ರವಿ, ದಿಲೀಪ್, ಪಿಡಿಓ ಪೂರ್ಣಿಮಾ, ಆರ್‌ಐ ಬಸವರಾಜು, ಗುತ್ತಿಗೆದಾರ ಶ್ರೀನಿವಾಸಲು ರೆಡ್ಡಿ ಇತರರಿದ್ದರು.



ಕೆ.ಆರ್.ನಗರದ ಮುಸ್ಲಿಂ ಬ್ಲಾಕ್‌ನಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ನಡೆದ ಪ್ರಾರ್ಥನೆಯಲ್ಲಿ ಶಾಸಕ ಸಾ.ರಾ.ಮಹೇಶ್ ಭಾಗಿಯಾಗಿ ಸಮಸ್ತ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ಕೋರಿದರು.



ಇತ್ತೀಚೆಗೆ ಕಣ್ಣಾಮುಚ್ಚಾಲೆ ಆಡುತ್ತಿದ್ದ ವೇಳೆ ಐಸ್‌ಕ್ರೀಂ ಬಾಕ್ಸ್‌ನಲ್ಲಿ ಅವಿತು ಕುಳಿತು ಉಸಿರುಗಟ್ಟಿ ಮೃತಪಟ್ಟ ಬಾಲಕಿಯರ ಕುಟುಂಬಗಳಿಗೆ ಶಾಸಕ ಬಿ.ಹರ್ಷವರ್ಧನ್ ಸಾಂತ್ವನ ಹೇಳಿದರು. ಈ ವೇಳೆ ಮುಖಂಡರಾದ ಸುಬ್ಬಣ್ಣ, ಬಿ.ಎಂ.ರಾಮು, ಅಬ್ದುಲ್ ರಜಾಕ್ ಸೇರಿದಂತೆ ಇತರರಿದ್ದರು.

‘ಕ್ರಾಂತಿ ಯೋಗಿ’ಗೆ ಕೊಡಗಿನಾದ್ಯಂತ ನಮನ

ವಚನಗಳ ಮೂಲಕವೇ ಸಾಮಾಜಿಕ ಪರಿವರ್ತನೆಗೆ ಕಾರಣರಾದ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತ್ಯುತ್ಸವವನ್ನು ಜಿಲ್ಲಾದ್ಯಂತ ಮಂಗಳವಾರ ಸಂಭ್ರಮದಿಂದ ಆಚರಿಸಲಾಯಿತು. ಎಲ್ಲೆಡೆ ಬಸವಣ್ಣನ ವಿಚಾರಧಾರೆಗಳು ಪ್ರತಿಧ್ವನಿಸಿದವು. ಅವರ ಭಾವಚಿತ್ರಕ್ಕೆ ಪುಷ್ಪನಮನ, ಪೂಜೆ ಸಲ್ಲಿಸಲಾಯಿತು.

ಬಸವೇಶ್ವರರ ಆದರ್ಶ ಅಳವಡಿಸಿಕೊಳ್ಳಲು ಸಲಹೆ



ಮಡಿಕೇರಿ ಮೇ 3– 12ನೇ ಶತಮಾನದಲ್ಲಿ ಬಸವೇಶ್ವರರು ಸಾಮಾಜಿಕ ಪರಿವರ್ತನೆ ಮಾಡಿ, ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರು. ಆ ದಿಸೆಯಲ್ಲಿ ವಿಶ್ವಜ್ಞಾನಿ, ಜಗದ ಜ್ಯೋತಿ, ಭಕ್ತಿ ಭಂಡಾರಿ ಬಸವೇಶ್ವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಸಾರ್ಥಕತೆ ಬರಲಿದೆ ಎಂದು ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಬಣ್ಣಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಅಖಿಲ ಭಾರತ ವೀರ ಶೈವ–ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಇವರ ಸಹಕಾರದಲ್ಲಿ ನಗರದ ಭಾರತೀಯ ವಿದ್ಯಾ ಭವನದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಹನ್ನೆರಡನೇ ಶತಮಾನದಲ್ಲಿ ಜಾತಿ ನಿರ್ಮೂಲನೆಗೆ ಹಾಗೂ ಸ್ತ್ರೀಯರಿಗೆ ಸಮಾನ ಅವಕಾಶ ನೀಡಲು ಬಸವೇಶ್ವರರು ಶ್ರಮಿಸಿದರು. ಕನ್ನಡದಲ್ಲಿ ವಚನಗಳನ್ನು ರಚಿಸುವ ಮೂಲಕ ಎಲ್ಲರಿಗೂ ಅರ್ಥವಾಗುವಂತೆ ಸಾಮಾಜಿಕ ಸಂದೇಶಗಳನ್ನು ನೀಡಿದ್ದರು ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಸಿ.ಎಂ.ಧರ್ಮಪ್ಪ ಮಾತನಾಡಿ, ಬಸವೇಶ್ವರರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ್ದರು. ಸಮಾಜದ ಸುಧಾರಣೆ ಕ್ರಾಂತಿಕಾರಕ ಬದಲಾವಣೆಗೆ ಪ್ರಯತ್ನಿಸಿದರು ಎಂದರು. ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಮಾತನಾಡಿ, ಕಾಯಕವೇ ಕೈಲಾಸ ಎಂಬಂತೆ, ನುಡಿದಂತೆ ನಡೆಯಬೇಕು. ನಮ್ಮ ಕೆಲಸಗಳು ಮಾತನಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರ ಶೈವ–ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಅಧ್ಯಕ್ಷ ಎಚ್.ವಿ.ಶಿವಪ್ಪ, ಪ್ರಧಾನ ಕಾರ್ಯದರ್ಶಿ ಶಂಭು, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ತಹಸೀಲ್ದಾರ್ ಪಿ.ಎಸ್.ಮಹೇಶ್, ಪೌರಾಯುಕ್ತ ಎಸ್.ವಿ. ರಾಮದಾಸ್, ಸಮಾಜದ ಪ್ರಮುಖರು ಇತರರು ಇದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೆ.ಟಿ.ದರ್ಶನಾ ಸ್ವಾಗತಿಸಿದರು, ಕುಮಾರ್ ನಿರೂಪಿಸಿದರು, ಶಂಕರಯ್ಯ ಪ್ರಾರ್ಥಿಸಿದರು, ಮಣಜೂರು ಮಂಜುನಾಥ್ ವಂದಿಸಿದರು.

ವಿಧಾನಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ ಅವರು ನಗರದ ಮಹದೇವಪೇಟೆಯ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ವೀರಗಾಸೆ, ಗೊರವರ ಹಾಗೂ ಡೊಳ್ಳು ಕುಣಿತ ವಿವಿಧ ಜಾನಪದ ಕಲಾ ತಂಡದ ಕಲಾವಿದರು ಮೆರವಣಿಗೆಯಲ್ಲಿ ಗಮನ ಸೆಳೆದರು. ಹಲವು ಇಲಾಖೆ ಅಧಿಕಾರಿಗಳು ಇದ್ದರು.

ವಿ.ಪೇಟೆಯಲ್ಲಿ ವಿಶ್ವಗುರು ಜಯಂತಿ



ವಿರಾಜಪೇಟೆ, ಮೇ 3– ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ವಿಶ್ವಗುರು ಬಸವ ಜಯಂತಿಯನ್ನು ಆಚರಿಸಲಾಯಿತು. ತಹಸೀಲ್ದಾರ್ ಯೋಗಾನಂದ ಅವರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಗ್ರೇಡ್–2 ತಹಸೀಲ್ದಾರ್ ಪ್ರದೀಪ್ ಕುಮಾರ್, ಉಪ ತಹಸೀಲ್ದಾರ್ ಪೊನ್ನು, ಚುನಾವಣಾ ವಿಭಾಗದ ಅಧಿಕಾರಿ ಮಂಜುನಾಥ್, ಶಿಕ್ಷಕ ಎ.ವಿ.ಮಂಜುನಾಥ್, ಗ್ರಾಮಲೆಕ್ಕಿಗ ಕೃಷ್ಣ ಮತ್ತು ಸಿಬ್ಬಂದಿ ಇದ್ದರು.



ಕುಶಾಲನಗರ ಪಟ್ಟಣದ ಆದರ್ಶ ದ್ರಾವಿಡ ಕಾಲೋನಿಯ ಪಟ್ಟಾಲಮ್ಮ ದೇವಾಲಯದ ಆವರಣದಲ್ಲಿ ತಾಲೂಕು ಕಸಾಪದಿಂದ ಜಗಜ್ಯೋತಿ ಬಸವೇಶ್ವರರ ಜಯಂತಿ ಆಚರಿಸಲಾಯಿತು. ಪಪಂ ಅಧ್ಯಕ್ಷ ಜಯವರ್ಧನ, ಸಾಮಾಜಿಕ ಹೋರಾಟಗಾರ ವಿ.ಪಿ.ಶಶಿಧರ್, ಕಸಾಪ ತಾಲೂಕು ಅಧ್ಯಕ್ಷ ಕೆ.ಎಸ್.ಮೂರ್ತಿ, ವಿಶ್ವನಾಥ್, ಪರಿಷತ್‌ನ ಕೋಶಾಧಿಕಾರಿ ಕೆ.ವಿ.ಉಮೇಶ್, ಕಾರ್ಯದರ್ಶಿ ಮಂಜು, ಭಾರ್ಗವಿ, ಟಿ.ಬಿ.ಮಂಜುನಾಥ್ ಇದ್ದರು.

ಮಹಾನ್ ದಾರ್ಶನಿಕರ ಸ್ಮರಣೆ



ಸೋಮವಾರಪೇಟೆ, ಮೇ 3– ಇಲ್ಲಿನ ಅಟಲ್‌ಜೀ ಕನ್ನಡ ಭವನದಲ್ಲಿ ತಾಲೂಕು ಆಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ 12ನೇ ಶತಮಾನದ ಮಹಾನ್ ದಾರ್ಶನಿಕ ಬಸವಣ್ಣ ಅವರ ಜನ್ಮದಿನ ಆಚರಿಸಲಾಯಿತು.

ಕಾರ್ಯಕ್ರಮವನ್ನು ಮಾದ್ರೆ ಮುದ್ದಿನಕಟ್ಟೆ ಮಠಾಧೀಶ ಶ್ರೀ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಪಪಂ ಅಧ್ಯಕ್ಷ ಪಿ.ಕೆ.ಚಂದ್ರು, ತಾಪಂ ಮಾಜಿ ಉಪಾಧ್ಯಕ್ಷ ಎಂ.ಬಿ.ಅಭಿಮನ್ಯುಕುಮಾರ್, ವಿದ್ಯಾರ್ಥಿನಿ ಎ.ಎಸ್.ಶ್ರೀಶಾ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಆರ್.ಗೋವಿಂದರಾಜು, ತಾಪಂ ಇಓ ಜಯಣ್ಣ, ಪಪಂ ಮುಖ್ಯಾಧಿಕಾರಿ ನಾಚಪ್ಪ, ಪೊಲೀಸ್ ವೃತ್ತ ನಿರೀಕ್ಷಕ ಬಿ.ಜಿ.ಮಹೇಶ್, ಕಸಾಪ ಮಾಜಿ ಅಧ್ಯಕ್ಷ ಜೆ.ಸಿ.ಶೇಖರ್, ವೀರಶೈವ ಸಮಾಜದ ಅಧ್ಯಕ್ಷ ಬಿ.ಪಿ.ಶಿವಕುಮಾರ್, ಅಬಕಾರಿ ಇಲಾಖೆಯ ನಿರೀಕ್ಷಕ ಲೋಕೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ



ಕುಶಾಲನಗರ, ಮೇ 3– ಇಲ್ಲಿನ ಬಸವೇಶ್ವರ ದೇವಸ್ಥಾನದಲ್ಲಿ ಕೊಡಗು ಜಿಲ್ಲಾ ವೀರ ಶೈವ ಮಹಾಸಭಾದಿಂದ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಯಿತು. ಬಳಿಕ, ಬಸವಣ್ಣ ಹಾಗೂ ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಶಿವಪ್ಪ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಟಿ.ಎಸ್.ಸಾಂಭಶಿವಮೂರ್ತಿ, ಖಜಾಂಚಿ ಉದಯಕುಮಾರ್, ಪ್ರಮುಖರಾದ ಪಿ.ಮಹದೇವಪ್ಪ, ಮಧುಸೂದನ್, ಲವಕುಮಾರ್, ಚೇತನ್ ಚಂದ್ರಶೇಖರ್, ಕಮಲಾ, ಮಣಿಯಮ್ಮ, ಚಂದ್ರಕಲಾ, ಮೋಹಿನಿ, ಭಾಗೀರಥಿ ಮತ್ತಿತರರು ಇದ್ದರು.

ವಿದ್ಯುತ್ ಸ್ಪರ್ಶ: ಕಾರ್ಮಿಕ ಸಾವು

ವೀರಾಜಪೇಟೆ, ಮೇ 3– ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ಪ್ರವಹಿಸಿ ಕಾರ್ಮಿಕನೊಬ್ಬ ಸಾವನ್ನಪ್ಪಿರುವ ಘಟನೆ ವಿರಾಜಪೇಟೆ ಆರ್ಜಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಗ್ರಾಮದ ಕೆ.ಅಯ್ಯಪ್ಪ ಅವರ ತೋಟದ ಲೈನ್ ಮನೆಯಲ್ಲಿ ವಾಸವಿದ್ದ ಪಣಿಎರವರ ತೋಲ ಅಲಿಯಾಸ್ ಮಂಜ(38) ಮೃತಪಟ್ಟ ಕಾರ್ಮಿಕ.

ಪಣಿಎರವರ ತೋಲ ಆರ್ಜಿ ಗ್ರಾಮದ ಕೆ.ಅಯ್ಯಪ್ಪ ಅವರ ತೋಟದ ಲೈನ್ ಮನೆಯಲ್ಲಿ ವಾಸವಾಗಿದ್ದು, ಮಂಗಳವಾರ ಬೆಳಗ್ಗೆ ತೋಟದಲ್ಲಿದ್ದ ಬೃಹತ್ ಗಾತ್ರದ ಮರಗಳ ಕೊಂಬೆಗಳನ್ನು ಕಡಿಯುವ ಕೆಲಸಕ್ಕಾಗಿ ಕಬ್ಬಿಣದ ಏಣಿಯೊಂದಿಗೆ ತೆರಳಿದ್ದರು. ಈ ವೇಳೆ ತೋಟದ ಮಧ್ಯ ಭಾಗದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿಗೆ ಏಣಿ ಸ್ಪರ್ಶವಾಗಿದೆ. ಪರಿಣಾಮ ಕಾರ್ಮಿಕ ಪಣಿಎರವರ ತೋಲ ಅಲಿಯಾಸ್ ಮಂಜ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ವಿರಾಜಪೇಟೆ ನಗರ ಪೊಲೀಸರು ಭೇಟಿ ನೀಡಿ ಸ್ಥಳ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿದ್ಯುತ್ ತಂತಿ ತುಳಿದು ಕಾಡಾನೆ ಸಾವು

ಸಿದ್ದಾಪುರ, ಮೇ 3– ವಿದ್ಯುತ್ ತಂತಿ ತುಳಿದು ಕಾಡಾನೆಯೊಂದು ಸಾವನ್ನಪ್ಪಿರುವ ಘಟನೆ ಮರಗೋಡು ಸಮೀಪ ಅರೆಕಾಡು ಬಳಿಯ ಕಾಟೆಬಾಣೆ ಗ್ರಾಮದಲ್ಲಿ ನಡೆದಿದೆ.

ಇತ್ತೀಚೆಗೆ ಗ್ರಾಮದಲ್ಲಿ ಸುರಿದ ಗಾಳಿ ಸಹಿತ ಮಳೆಯಿಂದ ಇಲ್ಲಿನ ಖಾಸಗಿ ತೋಟವೊಂದರಲ್ಲಿ ವಿದ್ಯುತ್ ಕಂಬವೊಂದು ಮುರಿದು ತಂತಿ ನೆಲದ ಮೇಲೆ ಬಿದ್ದಿತ್ತು. ಇದನ್ನು ಕಾಡಾನೆ ತುಳಿದು ಸಾವನ್ನಪ್ಪಿದೆ. ಘಟನೆ ನಡೆದು ನಾಲ್ಕೈದು ದಿನಗಳಾಗಿದ್ದು, ಆನೆಯ ದೇಹವು ಕೊಳೆತು ದುರ್ವಾಸನೆ ಬರಲಾರಂಭಿಸಿದ್ದಾಗ ಪ್ರಕರಣ ಬೆಳಕಿಗೆ ಬಂದಿದೆ. ಪಶು ವೈದ್ಯ ಡಾ.ಚೆಟ್ಟಿಯಪ್ಪ ಮರಣೋತ್ತರ ಪರೀಕ್ಷೆ ನಡೆಸಿದರು. ಸ್ಥಳಕ್ಕೆ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್.ಮೂರ್ತಿ ಸೇರಿದಂತೆ ಮತ್ತಿತರರು ಭೇಟಿ ನೀಡಿದರು.

ಸಡಗರ ಸಂಭ್ರಮದಿಂದ ರಂಜಾನ್ ಆಚರಣೆ



ಮಡಿಕೇರಿ, ಮೇ 3– ಮುಸ್ಲಿಮರ ಪವಿತ್ರ ರಂಜಾನ್ ಉಪವಾಸ ಮುಕ್ತಾಯವಾಗಿದ್ದು, ಈದ್ ಉಲ್ ಫಿತ್ರ್ ಆಚರಣೆಯನ್ನು ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಮಂಗಳವಾರ ಸಡಗರ ಸಂಭ್ರಮದಿಂದ ಆಚರಿಸಿದರು.

ಕುಶಾಲನಗರ ವರದಿ: ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶ್ರದ್ಧಾ–ಭಕ್ತಿಯಿಂದ ರಂಜಾನ್ ಆಚರಿಸಲಾಯಿತು.

ಇಲ್ಲಿನ ಹಿಲಾಲ್ ಮಸೀದಿ ಹಾಗೂ ಜಾಮಿಯಾ ಮಸೀದಿಯಲ್ಲಿ ಮುಸ್ಲಿಂ ಬಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ನಂತರ ಬಿಎಂ ರಸ್ತೆಯ ಮೂಲಕ ಮೆರವಣಿಗೆ ನಡೆಸಿ, ಗಂಧದ ಕೋಟೆಯ ಬಳಿ ಇರುವ ಈದ್ಗಾ ಮೈದಾನದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ಈ ವೇಳೆ ಪರಸ್ಪರ ಆಲಂಗಿಸಿಕೊಂಡು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಹಿಲಾಲ್ ಮಸೀದಿ ಕಮಿಟಿ ಪ್ರಮುಖರು, ಜಾಮಿಯಾ ಮಸೀದಿ ಮುಸ್ಲಿಂ ಮುಖಂಡರು ಇದ್ದರು.

ಸೋಮವಾರಪೇಟೆ ವರದಿ: ಪಟ್ಟಣ ಸೇರಿದಂತೆ ಬಜೆಗುಂಡಿ, ಕಲ್ಕಂದೂರು, ಹೊಸತೋಟ, ತಣ್ಣೀರುಹಳ್ಳ, ಕಾಗಡಿಕಟ್ಟೆ ಸೇರಿದಂತೆ ಹಲವೆಡೆ ರಂಜಾನ್ ಆಚರಿಸಲಾಯಿತು.

ಬೆಳಗ್ಗೆಯಿಂದಲೇ ಮುಸ್ಲಿಂ ಬಾಂಧವರು ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಖಬರ್‌ಸ್ಥಾನದಲ್ಲಿ ಸೇರಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ಮಡಿಕೇರಿಯ ಜಲಾಲಿಯ ಮಸೀದಿಯಲ್ಲಿ ನಡೆದ ಹಬ್ಬದಾಚರಣೆಯಲ್ಲಿ ಧರ್ಮಗುರುಗಳಾದ ಅಜೀಜ್ ಸಖಾಫಿ ಪಾಲ್ಗೊಂಡಿದ್ದರು.

6 ಅಡಿ ನಾಗರಹಾವು ರಕ್ಷಣೆ



ಮಡಿಕೇರಿ, ಮೇ 3– ಸಿದ್ದಾಪುರದ ಬಜಾಕೊಲ್ಲಿ ಪೈಸಾರಿಯಲ್ಲಿ ಬೃಹತ್ ಗಾತ್ರದ ನಾಗರಹಾವನ್ನು ಉರಗ ರಕ್ಷಕ ಸುರೇಶ್ ರಕ್ಷಿಸಿ ಅರಣ್ಯಕ್ಕೆ ಬಿಟ್ಟಿದ್ದಾರೆ.

ಬಜಾಕೊಲ್ಲಿಯ ಅಬ್ದುಲ್ ರೆಹಮಾನ್ ಅವರ ಮನೆಯೊಳಗೆ ಹಾವು ಇರುವ ಬಗ್ಗೆ ಮಾಹಿತಿ ನೀಡಿದ ಹಿನ್ನೆಲೆ ಸ್ಥಳಕ್ಕೆ ಆಗಮಿಸಿದ ಸ್ನೇಕ್ ಸುರೇಶ್ ಹಾಗೂ ವಿನೋದ್ ಮನೆಯೊಳಗಿದ್ದ 6 ಅಡಿ ಉದ್ದದ ನಾಗರ ಹಾವನ್ನು ಹಿಡಿದು ಸುರಕ್ಷಿತವಾಗಿ ಅಬ್ಬೂರು ಅರಣ್ಯಕ್ಕೆ ಬಿಟ್ಟರು.

ಬಿಸಿಲಿನ ವಾತಾವರಣ ಹೆಚ್ಚಿರುವುದರಿಂದ ಹಾವುಗಳು ನೀರು ಹುಡುಕಿಕೊಂಡು ಬರುವುದು ಸಹಜ. ಆದ್ದರಿಂದ ಯಾರೂ ಹಾವನ್ನು ಕೊಲ್ಲದಂತೆ ಮನವಿ ಮಾಡಿದರು.

ಮುರುವಂಡ ಕಾವೇರಮ್ಮ ನಿಧನ

ಮಡಿಕೇರಿ, ಮೇ 3– ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ಅವರ ಅತ್ತೆ, ವಿರಾಜಪೇಟೆ ತಾಲೂಕು ಕೊಳತೋಡು ಗ್ರಾಮ ನಿವಾಸಿ ಮುರುವಂಡ ಕಾವೇರಮ್ಮ(87) ಮಂಗಳವಾರ ಬೆಳಗ್ಗೆ ನಿಧನರಾದರು. ಅಂತ್ಯಕ್ರಿಯೆ ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಿತು.

ಮೇಚಂಡ ಸಂಜು ಬೋಪಯ್ಯ

ಮಡಿಕೇರಿ, ಮೇ 3– ಬಾಳಲೆ ಕೊಟ್ಟಗೇರಿ ನಿವಾಸಿ ಮೇಚಂಡ ಸಂಜು ಬೋಪಯ್ಯ(51) ಅವರು ಮಂಗಳವಾರ ನಿಧನರಾದರು. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ಚಾಮರಾಜನಗರ ಜಿಲ್ಲೆಯಾದ್ಯಂತ ಅದ್ಧೂರಿ ಬಸವ ಜಯಂತಿ ಆಚರಣೆ

ಸಮ ಸಮಾಜ ನಿರ್ಮಾಣಕ್ಕೆ ದುಡಿದ ಮಾನವತಾವಾದಿ ಬಸವಣ್ಣ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ

ಚಾಮರಾಜನಗರ, ಮೇ 3–ಸಾಮಾಜಿಕ ತಾರತಮ್ಯ, ಜಾತೀಯತೆ ಹೋಗಲಾಡಿಸಿ, ಸಮ ಸಮಾಜ ನಿರ್ಮಾಣದ ಮೂಲಕ ಇಡೀ ಮನುಕುಲದ ಶ್ರೇಯಸ್ಸಿಗೆ ದುಡಿದ ಮಹಾನ್ ಮಾನವತಾವಾದಿ ಬಸವಣ್ಣನವರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಾನ್ ಮಾನವತಾವಾದಿ, ಸಮಾಜ ಸುಧಾರಕರಾದ ಜಗಜ್ಯೋತಿ ಬಸವೇಶ್ವರರ 889ನೇ ಜನ್ಮದಿನ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಯಕವೇ ಕೈಲಾಸದಡಿ ಪ್ರತಿಯೊಬ್ಬರೂ ತಾವು ಮಾಡುವ ಕೆಲಸ–ಕಾರ್ಯದಲ್ಲಿ ದೇವರನ್ನು ಕಾಣಬೇಕೆಂದ ಬಸವಣ್ಣನವರ ಆದರ್ಶ ತತ್ವಸಿದ್ಧಾಂತಗಳನ್ನು ದಿನನಿತ್ಯದ ಕಾಯಕದಲ್ಲಿ ನಾವೆಲ್ಲರೂ ಅಳವಡಿಸಿಕೊಳ್ಳಬೇಕಾಗಿದೆ. ನುಡಿದಂತೆ ನಡೆದ ಬಸವಣ್ಣನವರ ಕಾಲದಲ್ಲಿ ಹೇಳುವವರು, ಕೇಳುವವರು ಇಬ್ಬರೂ ಪ್ರಾಮಾಣಿಕರಾಗಿದ್ದರು. ಪರಿಸ್ಥಿತಿ ಬದಲಾಗಿರುವುದು ಈಗಿನ ದುರಂತ ಎಂದರು.

ಕಾರ್ಯಕ್ರಮದಲ್ಲಿ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ನೀಡಿರುವ ಸಂದೇಶವನ್ನು ವಾಚಿಸಲಾಯಿತು.



ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಬಸವತತ್ವ ಪ್ರಚಾರಕ ಎಲ್.ಬಸಪ್ಪ ಬೊಮ್ಮಲಾಪುರ ಮಾತನಾಡಿದದರು. ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠಧ್ಯಾಕ್ಷ ಚನ್ನಬಸವಸ್ವಾಮಿ ಕಾರ್ಯಕ್ರಮ ಸಾನ್ನಿಧ್ಯ ವಹಿಸಿದ್ದರು. ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ಟಿ.ಪಿ. ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಎಎಸ್ಪಿ ಕೆ.ಎಸ್.ಸುಂದರರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚನ್ನಪ್ಪ ಇತರರು ಕಾರ್ಯಕ್ರಮದಲ್ಲಿದ್ದರು. ಬಳಿಕ ಕದಳಿ ಮಹಿಳಾ ವೇದಿಕೆಯಿಂದ ನಡೆದ ಬಸವಣ್ಣನವರ ವಚನ ಗಾಯನ ಗಮನ ಸೆಳೆಯಿತು.

ಹನೂರು ವರದಿ: ಪಟ್ಟಣದಲ್ಲಿ ತಾಲೂಕು ಆಡಳಿತದಿಂದ ಬಸವ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಶಾಸಕ ನರೇಂದ್ರ ಮಾತನಾಡಿದರು. ಸಾಲೂರು ಬೃಹನ್ ಮಠದ ಶಾಂತಮಲ್ಲಿಕಾರ್ಜುನ ಶ್ರೀಗಳು ಪ್ರವಚನ ನೀಡಿದರು. ಕಾರ್ಯಕ್ರಮದಲ್ಲಿ ಹನೂರು ಪಪಂ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷ ಗಿರೀಶ್ ಎಪಿಎಂಸಿ ಅಧ್ಯಕ್ಷ ಬಾಲು ನಾಯಕ ಉಪಾಧ್ಯಕ್ಷ ಜಗನ್ನಾಥ್ ನಾಯ್ಡು, ತಹಸೀಲ್ದಾರ್ ನಾಗರಾಜು, ಬಿಇಓ ಸ್ವಾಮಿ, ಇಓ ಧರಣೇಶ್ ಇನ್ನಿತರರಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದಲ್ಲಿ ಬಸವಣ್ಣನವರ ಭಾವಚಿತ್ರವನ್ನು ಅದ್ಧೂರಿ ಮೆರವಣಿಗೆ ಮಾಡಲಾಯಿತು.




ಗುಂಡ್ಲುಪೇಟೆ ಗುರುಭವನದಲ್ಲಿ ತಾಲೂಕು ಆಡಳಿತ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ನಿರಂಜನಕುಮಾರ್ ಅವರು ಪತ್ರಕರ್ತರನ್ನು ಸನ್ಮಾನಿಸಿದರು.

ಗುಂಡ್ಲುಪೇಟೆ ವರದಿ: ಪಟ್ಟಣದ ಗುರುಭವನದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಬಸವ ಜಯಂತಿ ಆಚರಿಸಲಾಯಿತು. ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿದರು. ಕಬ್ಬಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಎಸ್.ಎಂ.ಸಿದ್ದರಾಜಪ್ಪ ಮುಖ್ಯ ಭಾಷಣ ಮಾಡಿದರು. ಇದೇ ಸಂದರ್ಭದಲ್ಲಿ ಸಮಿತಿಯಿಂದ ‘ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್’ ತಾಲೂಕು ವರದಿಗಾರ ಸೋಮಶೇಖರ್ ಸೇರಿದಂತೆ ಪತ್ರಕರ್ತರನ್ನು ಸನ್ಮಾನಿಸಲಾಯಿತು. ತಹಸೀಲ್ದಾರ್ ರವಿಶಂಕರ್, ಬಿಇಓ ಎಸ್.ಸಿ.ಶಿವಮೂರ್ತಿ, ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತರಾಜು, ವೀರಶೈವ ಮಹಾಸಭಾ ಮಾಜಿ ಜಿಲ್ಲಾಧ್ಯಕ್ಷ ಕೊಡಸೋಗೆ ಶಿವಬಸಪ್ಪ, ತಾಲೂಕು ಅಧ್ಯಕ್ಷ ನಂಜಪ್ಪ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಆಲತ್ತೂರು ಜಯರಾಂ, ಪುರಸಭೆ ಸದಸ್ಯರಾದ ನಾಗೇಶ್, ಸೇರಿದಂತೆ ಹಲವರಿದ್ದರು.

ಆಲೂರು ವರದಿ: ಚಾಮರಾಜನಗರ ತಾಲೂಕಿನ ಆಲೂರಿನಲ್ಲಿ ಜಗಜ್ಯೋತಿ ಶ್ರೀಬಸವೇಶ್ವರ ಜಯಂತಿಯನ್ನು ಗ್ರಾಮದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಗ್ರಾಮದ ಬಸವ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಗ್ಗೆ ಶ್ರೀಬಸವೇಶ್ವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಮಂಗಳಾರತಿ ನೆರವೇರಿಸಲಾಯಿತು. ಧ್ವಜಾರೋಹಣವನ್ನು ಸಮಾಜದ ಅಧ್ಯಕ್ಷ ಎ.ಎಸ್.ನಾಗರಾಜು ನೆರವೇರಿಸಿದರು. ನಂತರ ಮಾತನಾಡಿದ ಅವರು ಮೇ 14ರಂದು ಗ್ರಾಮದಲ್ಲಿ ಶ್ರೀಬಸವೇಶ್ವರ ಭಾವಚಿತ್ರ ವನ್ನು ಬೆಳ್ಳಿ ರಥದಲ್ಲಿ ಇಟ್ಟು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ತಿಳಿಸಿದರು ಈ ಸಂದರ್ಭದಲ್ಲಿ ಸಮಾಜದ ಮುಖಂಡರು ಶ್ರೀಬಸವೇಶ್ವರ ಯುವಕ ಸಂಘದ ಸದಸ್ಯರು ಗ್ರಾಮಸ್ಥರಿ ಹಾಜರುದ್ದರು.

ಬೇಗೂರು ವರದಿ: ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದಲ್ಲಿ ವಿಶ್ವಗುರು ಬಸವೇಶ್ವರ ಸೇವಾ ಸಮಿತಿಯಿಂದ ಬಸವ ಜಯಂತಿ ಆಚರಣೆ ಕಾರ್ಯಕ್ರಮಕ್ಕೆ ಸೋಮಹಳ್ಳಿ ಶಿಲಾ ಮಠಾಧ್ಯಕ್ಷ ಶ್ರೀ ಸಿದ್ದಮಲ್ಲಸ್ವಾಮಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಮಾತನಾಡಿದರು. ಅಡವಿ ಮಠದ ಶಿವಲಿಂಗೇಂದ್ರ ಸ್ವಾಮಿ, ಚಿಕ್ಕತ್ತುಪ್ಪೂರು ಮಠದ ಚೆನ್ನವೀರಸ್ವಾಮಿ, ಭೋಗಯ್ಯನಹುಂಡಿ ಮಠದ ನಂಜುಂಡಸ್ವಾಮಿ, ಶಿವಕುಮಾರ ಪುರ ವಿರಕ್ತ ಮಠದ ವೀರಭದ್ರಸ್ವಾಮಿ, ಕಬ್ಬಹಳ್ಳಿ ಮಠದ ಗುರುಸಿದ್ದಸ್ವಾಮಿ, ಕೊಡಗಾಪುರ ಮಹದೇವಸ್ವಾಮಿ, ಮಾದಾಪಟ್ಟಣದ ವಿರಕ್ತ ಮಠದ ಕಿರಿಯ ಶ್ರೀ ತೋಂಟದಾರ್ಯಸ್ವಾಮಿ, ಚಾಮುಲ್ ಅಧ್ಯಕ್ಷ ಎಚ್. ಎಸ್.ನಂಜುಂಡ ಪ್ರಸಾದ್ ಇತರರಿದ್ದರು.



ಬೇಗೂರಿನಲ್ಲಿ ಬಸವ ಜಯಂತಿ ಆಚರಿಸಲಾಯಿತು.

ಬಸವೇಶ್ವರರ ಅದ್ಧೂರಿ ಮೆರವಣಿಗೆ



ಚಾ.ನಗರ, ಮೇ 3(ಎಸ್‌ಎಸ್)– ಜಿಲ್ಲಾಡಳಿತ ನಗರದಲ್ಲಿ ಬಸವ ಜಯಂತಿ ಅಂಗವಾಗಿ ಆಯೋಜಿಸಿದ್ದ ಶ್ರೀ ಬಸವೇಶ್ವರರ ಭಾವಚಿತ್ರ ಮೆರವಣಿಗೆ ಅದ್ಧೂರಿಯಾಗಿ ಜರುಗಿತು.

ಪ್ರವಾಸಿ ಮಂದಿರದಿಂದ ಆರಂಭವಾದ ಮೆರವಣಿಗೆಗೆ ನಗರದ ಶ್ರೀಸಿದ್ಧಮಲ್ಲೇಶ್ವರ ವಿರಕ್ತ ಮಠದ ಮಠಾಧ್ಯಕ್ಷ ಚನ್ನಬಸವಸ್ವಾಮಿ ಹಾಗೂ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ನಂತರ ಮೆವರಣಿಗೆಯು ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೇಮರಳ್ಳಿ ವೃತ್ತ, ಭುವನೇಶ್ವರಿ ವೃತ್ತದ ಮೂಲಕ ಸಾಗಿ ವೇದಿಕೆ ಕಾರ್ಯಕ್ರಮ ಆಯೋಜಿಸಿದ್ದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಕೊನೆಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಪಾಲ್ಗೊಂಡಿದ್ದವು.

ಮೆರವಣಿಗೆ ವೇಳೆ ಅಲ್ಲಲ್ಲಿ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಅವರು ಲಾಡು, ಬಾದೂಷ, ಹೋಳಿಗೆ, ಮಜ್ಜಿಗೆ ಪಾನಕ, ವಿತರಿಸುವ ಮೂಲಕ ಬಸವ ಜಯಂತಿ ಶುಭಾಶಯ ಕೋರಲಾಯಿತು.

ಜಿಲ್ಲೆಯಾದ್ಯಂತ ಸಂಭ್ರಮದ ರಂಜಾನ್ ಆಚರಣೆ

ಚಾಮರಾಜನಗರ, ಮೇ 3(ಎಸ್‌ಎಸ್)– ಜಿಲ್ಲೆಯಾದ್ಯಂತ ಮುಸ್ಲಿಮರು ತ್ಯಾಗ, ಶಾಂತಿ, ಪ್ರೀತಿಯ ಸಂಕೇತವಾದ ರಂಜಾನ್ ಹಬ್ಬವನ್ನು ಸಂಭ್ರಮ, ಸಡಗರದಿಂದ ಮಂಗಳವಾರ ಆಚರಿಸಿದರು.

ರಂಜಾನ್ ಹಬ್ಬದ ಅಂಗವಾಗಿ ಈದ್ಗಾ ಮೈದಾನ ಹಾಗೂ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಈ ವೇಳೆ ಎಲ್ಲರಿಗೂ ಒಳಿತಾಗಲಿ ಎಂದು ಪ್ರಾರ್ಥಿಸಲಾಯಿತು. ಕೊರೊನಾ ಕಾರಣದಿಂದ 2 ವರ್ಷಗಳಿಂದ ರಂಜಾನ್ ಹಬ್ಬವನ್ನು ಸರಳವಾಗಿ ಆಚರಿಸಲಾಗಿತ್ತು. ಸಾಮೂಹಿಕ ಪ್ರಾರ್ಥನೆ ಆಗಿರಲಿಲ್ಲ. ಆದರೆ ಈಗ ಕೊರೊನಾ ಇಲ್ಲದಿರು ವುದರಿಂದ ಹಬ್ಬವನ್ನು ಸಡಗರದಿಂದ ಆಚರಿಸಲಾಯಿತು. ಈ ವೇಳೆ ಬಾಂಧವರು ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಸಾಮೂಹಿಕ ಪ್ರಾರ್ಥನೆ ವೇಳೆ ಮುಸ್ಲಿಮರಿಗೆ ಹಬ್ಬದ ಶುಭಾಶಯ ತಿಳಿಸಿದರು. ಚಾಮರಾಜನಗರದಲ್ಲಿ ಸೋಮವಾರಪೇಟೆ ಬಳಿ ಇರುವ ಈದ್ಗಾ ಮೈದಾನ ಹಾಗೂ ಜಿಲ್ಲಾ ಕ್ರೀಡಾಂಗಣದ ಎದುರು ಇರುವ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು.

ನಂತರ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.


ಈ ವೇಳೆ ಹಿಂದೂಗಳು ಸಹ ಮುಸ್ಲಿಮರಿಗೆ ಸಿಹಿ ವಿತರಿಸುವ ಮೂಲಕ ಹಿಂದೂ–ಮುಸ್ಲಿಮರು ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಸೌಹಾರ್ದತೆ ಮೆರೆದರು.



ಯಳಂದೂರು ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಚಿತ್ರ : ಯಳಂದೂರು ನಾಗರಾಜು

ಉಮ್ಮತ್ತೂರು ನಾಗೇಶ್ ನಿಧನ

ಚಾಮರಾಜನಗರ, ಮೇ 3–ತಾಲೂಕಿನ ಉಮ್ಮತ್ತೂರು ಗ್ರಾಮದ ನಿವಾಸಿ, ಬಿಜೆಪಿ ಜಿಲ್ಲಾ ವಕ್ತಾರ, ತಾಪಂ ಮಾಜಿ ಸದಸ್ಯರೂ ಆದ ಮೈಸೂರು ಮಿತ್ರ ಪತ್ರಿಕಾ ಪ್ರತಿನಿಧಿ



ಉಮ್ಮತ್ತೂರು ನಾಗೇಶ್(56) ಮಂಗಳವಾರ ಮಧ್ಯಾಹ್ನ ನಿಧನರಾದರು. ಇವರು ನಾಲ್ಕು ದಿನಗಳ ಹಿಂದೆ ಅನಾರೋಗ್ಯಕ್ಕೀಡಾಗಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಇಂದು ಕೊನೆಯುಸಿರೆಳೆದಿದ್ದಾರೆ. ಮೃತರು ತಾಯಿ, ಪತ್ನಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಉಮ್ಮತ್ತೂರಿನಲ್ಲಿ ನಾಳೆ(ಬುಧವಾರ) ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸಚಿವರ ಸಂತಾಪ: ನಾಗೇಶ್ ಅವರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸಂತಾಪ ಸೂಚಿಸಿದ್ದಾರೆ. ಉಮ್ಮತ್ತೂರು ತಾಪಂ ಸದಸ್ಯರು, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಲ್ಲದೆ, ಪತ್ರಕರ್ತರಾಗಿ ಸ್ನೇಹಜೀವಿಯಾಗಿದ್ದರು. ನಾಗೇಶ್ ಅವರ ಕುಟುಂಬಕ್ಕೆ ಅಗಲಿಕೆ ನೋವು ಸಹಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವುದಾಗಿ ತಿಳಿಸಿದ್ದಾರೆ.

ಪಿಎಸ್ಐ ಹುದ್ದೆಗಳ ಭರ್ತಿಗಾಗಿ ಎಎಸ್ಐಗಳಿಗೆ ಬಡ್ತಿ

ಬೆಂಗಳೂರು,ಮೇ3–ಪಿಎಸ್ಐ ನೇಮಕಾತಿ ಹಗರಣವು ಸಿಬ್ಬಂದಿ ಕೊರತೆ ಹೊಂದಿರುವ ಪೊಲೀಸ್ ಪಡೆಗೆ ಹೊಸ ನೇಮಕಾತಿಗಳ ಬಹುನಿರೀಕ್ಷಿತ ಸೇರ್ಪಡೆಗೆ ಹಿನ್ನಡೆಯನ್ನುಂಟು ಮಾಡಿದೆ. ಕರ್ನಾಟಕದಲ್ಲಿ ಪ್ರಸ್ತುತ 800 ಪಿಎಸ್ಐ ಹುದ್ದೆಗಳು ಖಾಲಿ ಇವೆ. ಕಲಬುರಗಿ ಮತ್ತು ಬೆಂಗಳೂರಿನ ಕೇಂದ್ರಗಳಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳು ವರದಿಯಾದ ನಂತರ ಸರ್ಕಾರ ಕಳೆದ ವಾರ 545 ಪಿಎಸ್ಐಗಳ ನೇಮಕಾತಿಯನ್ನು ರದ್ದುಗೊಳಿಸಿದೆ. ಏಪ್ರಿಲ್ ಅಂತ್ಯದ ವೇಳೆಗೆ ನಾವು 545 ಹೊಸ ಪಿಎಸ್ಐ ನೇಮಕಾತಿಗಳನ್ನು ಮಾಡಬೇಕಾಗಿತ್ತು. 402 ಪಿಎಸ್ಐ ಹುದ್ದೆಗಳಿಗೆ ಮತ್ತೊಂದು ಸುತ್ತಿನ ನೇಮಕಾತಿ ನಡೆಯುತ್ತಿದೆ, ಇದಕ್ಕಾಗಿ ದೈಹಿಕ ಪರೀಕ್ಷೆ ಮುಗಿದಿದೆ. ಲಿಖಿತ ಪರೀಕ್ಷೆಗಳು ಶೀಘ್ರದಲ್ಲೇ ನಡೆಯಲಿವೆ. ಆದರೆ ಪರೀಕ್ಷೆಗಳು (545 ಅಭ್ಯರ್ಥಿಗಳಿಗೆ) ರದ್ದುಗೊಂಡ ಹಿನ್ನೆಲೆಯಲ್ಲಿ, ಕೆಲವು ವ್ಯವಸ್ಥೆ ತೊಂದರೆಯಾಗದಂತೆ ನೋಡಿಕೊಳ್ಳಲು ಸಹಾಯಕ ಸಬ್ ಇನ್ಸ್‌ಪೆಕ್ಟರ್‌ಗಳನ್ನು (ASI) ಎಸ್ಐಗಳಾಗಿ ಬಡ್ತಿ ನೀಡಿದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಡಿಜಿ ಮತ್ತು ಐಜಿಪಿ ಪ್ರವೀಣ್ ಸೂದ್ ಟಿಎನ್ಐಇಗೆ ತಿಳಿಸಿದರು.

ಒಂದನೇ ಪುಟದಿಂದ

ಸಂಭ್ರಮದ ರಂಜಾನ್

ಕೋಮು ಸೌಹಾರ್ದಕ್ಕಾಗಿ ಪ್ರಾರ್ಥಿಸಿದರು. ಮೈಸೂರು ಪ್ರಾಂತ್ಯದ ಧರ್ಮಗುರು ಸರ್ ಖಾಜಿ ಮೌಲಾನಾ ಮಹಮದ್ ಉಸ್ಮಾನ್ ಷರೀಫ್ ಅವರು ಸಾಮೂಹಿಕ ಪ್ರಾರ್ಥನೆಯ ನೇತೃತ್ವ ವಹಿಸಿ, ರಂಜಾನ್ ಸಂದೇಶ ನೀಡಿದರು. ಕೊರೊನಾದಿಂದಾಗಿ ಕಳೆದ 2 ವರ್ಷ ರಂಜಾನ್ ಹಬ್ಬ ಆಚರಿಸಿರಲಿಲ್ಲ. ಎಲ್ಲಾ ಈದ್ಗಾ ಮೈದಾನಗಳು ಬಿಕೋ ಎನ್ನುತ್ತಿದ್ದವು. ದೇವರ ಕೃಪೆಯಿಂದಾಗಿ ಈ ವರ್ಷ ಪರಿಸ್ಥಿತಿ ತಿಳಿಯಾಗಿದ್ದು, ಹಬ್ಬ ಆಚರಿಸುವ ಅವಕಾಶ ಲಭಿಸಿರುವುದಕ್ಕೆ ನಾವು ಆ ದೇವರಿಗೆ ಕೃತಜ್ಞರಾಗಿರಬೇಕು ಎಂದು ನುಡಿದರು.

ಮುಂದೆಂದೂ ಕೊರೊನಾದಂತಹ ಮಹಾಮಾರಿ ಸೋಂಕು ಹರಡದಿರಲಿ, ಎಲ್ಲಾ ವರ್ಷವೂ ಶ್ರದ್ಧಾ ಭಕ್ತಿಗಳಿಂದ ರಂಜಾನ್ ಸೇರಿದಂತೆ ಎಲ್ಲಾ ಹಬ್ಬಗಳನ್ನು ಆಚರಿಸುವಂತಾಗಲಿ ಎಂದು ಪ್ರಾರ್ಥಿಸಿದ ಮೌಲಾನಾ ಮಹಮದ್ ಉಸ್ಮಾನ್ ಷರೀಫ್, 30 ದಿನಗಳ ಉಪವಾಸ ಪೂರ್ಣಗೊಂಡಿರುವುದರಿಂದ ಎಲ್ಲರೂ ಬಡವರು, ಅನಾಥ ವೃದ್ಧರಿಗೆ ಜಾತಿ, ಧರ್ಮ ಹೀಗೆ ಭೇದ ಭಾವ ಮರೆತು ಸಹಾಯ ಮಾಡುವ ಮೂಲಕ ರಂಜಾನ್ ಹಬ್ಬವನ್ನು ಅರ್ಥಪೂರ್ಣಗೊಳಿಸಿ. ಬಡವರೂ ಸಹ ನೆಮ್ಮದಿಯಿಂದ ಹಬ್ಬ ಆಚರಿಸುವಂತೆ ಮಾಡಿ ಎಂದರು. ಕೋಮು ಸೌಹಾರ್ದ, ಸಹೋದರತ್ವ, ಸಹಬಾಳ್ವೆ, ದೇಶದ ಸಮಗ್ರತೆ, ಐಕ್ಯತೆಯನ್ನು ಸಾರುವ ಮೂಲಕ ಸಮಾಜದಲ್ಲಿ ಶಾಂತಿ, ಪ್ರೀತಿ ನೆಲೆಸುವಂತೆ ಮಾಡೋಣ, ಜಾತಿ, ಧರ್ಮ, ಬಡವ, ಶ್ರೀಮಂತ ಎಂಬ ಭೇದ ಭಾವ ಮರೆತು ಒಟ್ಟಾಗಿ ಶಾಂತಿಯಿಂದ ಬದುಕೋಣ ಎಂದು ಉಸ್ಮಾನ್ ಷರೀಫ್ ಅವರು ಇದೇ ವೇಳೆ ನುಡಿದರು.

ಎಸ್‌ಜೆಸಿಇ ನಿವೃತ್ತ ಡೀನ್ ಡಾ.ಶಹೀದ್ ಉರ್ ರೆಹಮಾನ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹಂಗಾಮಿ ಉಪ ಮೇಯರ್ ಅನ್ವರ್ ಬೇಗ್ ಅಫ್ಸರ್, ಮುಸ್ಲಿಂ ಕೋ-ಆಪರೇಟಿವ್ ಬ್ಯಾಂಕ್‌ನ ಡಾ. ಅಬ್ದುಲ್ ರವೂಫ್, ಜಮೀಲ್ ಅಹ್ಮದ್ ಅಶ್ರಫಿ, ಮೌಲಾನಾ ಅಬ್ದುಲ್ ಸಲಾಂ, ಖಾದ್ರಿ, ಗಯಾಸ್ ಅಹಮದ್, ಅಫ್ತಾಬ್ ಪಾಷ, ಮೊಹಮದ್ ಮುಷ್ತಾಕ್ ಅಹಮದ್, ಶೌಕತ್ ಪಾಷ, ಸುಹೇಲ್ ಬೇಗ್ ಸೇರಿದಂತೆ ಹಲವು ಮುಸ್ಲಿಂ ಮುಖಂಡರು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.

ಕುಸಿಯುತ್ತಿದೆ ಶ್ರೀರಂಗಪಟ್ಟಣ ಕೋಟೆ

ಕೈಗೊಳ್ಳುತ್ತಿಲ್ಲ. ಐದು ರಾಜವಂಶಗಳ ಆಳ್ವಿಕೆ ಕಂಡ ಈ ಕೋಟೆಯು ಸುಮಾರು ಆರು ಕಿ.ಮೀ. ಸುತ್ತಳತೆ ಹೊಂದಿದೆ. ಕೋಟೆಯ ಸುತ್ತ ನಾಡಿನ ಜೀವನದಿ ಕಾವೇರಿಯು ಹರಿಯುತ್ತ ಒಂದು ಜಲದುರ್ಗವನ್ನೇ ನಿರ್ಮಿಸಿದೆ.

ಪ್ರತ್ಯೇಕವೇ ಪ್ರಥಮ ಕಾವಲುಗಾರನಂತೆ ಕೋಟೆಯನ್ನು ರಕ್ಷಿಸಲು ಟೊಂಕಕಟ್ಟಿ ನಿಂತಿರುವುದು ಅಂದಿನ ಕಾಲದಲ್ಲೇ ಬ್ರಿಟಿಷ್ ಅಧಿಕಾರಿಗಳನ್ನು ವಿಸ್ಮಯಗೊಳಿಸಿತ್ತು. ಆದರೆ ಇಂದು ಕೋಟೆಯ ಪೂರ್ವ ದ್ವಾರದ ಬಲ ಭಾಗದ ಕಂದಕದಲ್ಲಿ ಆಳುದ್ದ ಕೊಳಚೆ ನೀರು ನಿಂತಿದೆ. ಕಾವೇರಿ ಬಡಾವಣೆಗೆ ತೆರಳುವ ಮಾರ್ಗದ ಪಕ್ಕದ ಕಂದಕದಲ್ಲೂ 10 ಅಡಿಗಳಿಗಿಂತಲೂ ಹೆಚ್ಚು ಕೊಳಚೆ ನೀರು ತುಂಬಿ ಕೊಂಡಿದೆ. ಪುರಸಭೆ ಕಚೇರಿ ಹಿಂದಿನ ಕಂದಕದಲ್ಲೂ ಕಲುಷಿತ ನೀರು ಮಡುಗಟ್ಟಿದೆ. ಇದರಿಂದ ಕಂದಕ ಕೊಳಚೆ ಗುಂಡಿಯಾಗಿ ಮಾರ್ಪಾಡಾಗಿದೆ. ನೀರಿನ ಜತೆಗೆ ತ್ಯಾಜ್ಯವೂ ಸೇರಿಕೊಂಡು ಕೊಳೆಯುತ್ತಿರುವುದರಿಂದ ಕಂದಕದಿಂದ ಗಬ್ಬು ವಾಸನೆ ಹರಡುತ್ತಿದೆ. ಕಂದಕದ ಪಕ್ಕದಲ್ಲಿ ವಾಸಿಸುವವರು, ಸುತ್ತಮುತ್ತ ಹಾಗೂ ಓಡಾಡುವವರು ಮೂಗು ಮುಚ್ಚಿ ಓಡಾಡುವ ಸ್ಥಿತಿ ಬಂದಿದೆ. ಕೋಟೆಗೆ ಹೊಂದಿಕೊಂಡಿರುವ ಕಂದಕದಲ್ಲಿ ಕಾಲುವೆಯಂತೆ ನೀರು ನಿಂತಿರುವುದರಿಂದ ಮೂರು ಶತಮಾನದಷ್ಟು ಹಳೆಯದಾದ ಕೋಟೆಯ ಅಸ್ತಿತ್ವಕ್ಕೆ ಅಪಾಯ ಎದುರಾಗಿದೆ.

ಪಟ್ಟಣದ ಈ ಐತಿಹಾಸಿಕ ಕೋಟೆಯನ್ನು ನೋಡಲೆಂದೇ ದೇಶ-ವಿದೇಶಗಳಿಂದ ನಿತ್ಯ ಸಾವಿರಾರು ಮಂದಿ ಪ್ರವಾಸಿಗರು ಸಾವಿರಾರು ರೂ. ಗಳನ್ನು ವ್ಯಯಿಸಿ ಇಲ್ಲಿಗೆ ಬರುತ್ತಾರೆ. ಹಾಗೆ ಬಂದವರಿಗೆ ಆಳೆತ್ತರದ ಗಿಡಗಂಟಿಗಳು, ಕುಸಿದು ಬಿದ್ದಿರುವ ಕೋಟೆ ಹಾಗೂ ಕೊಳಚೆ ನಾರುತ್ತಿರುವ ಕಂದಕಗಳು ಸ್ವಾಗತಿಸುತ್ತಿವೆ. ಅಲ್ಲದೆ ಪಟ್ಟಣದ 2 ಪ್ರಮುಖ ಐತಿಹಾಸಿಕ ಸೆರೆಮನೆಗಳ ಪೈಕಿ ಥಾಮಸ್ 'ಇನ್‌ಮಾನ್‌ಡಂಜನ್' (ಸೆರೆಮನೆ) ಎಲ್ಲಿದೆ ಎಂಬುದು ಪಕ್ಕದ ಬೀದಿಯವರಿಗೂ ಗೊತ್ತಿಲ್ಲದ ಮಟ್ಟಿಗೆ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಐತಿಹ್ಯ ಕೋಟೆಯ ಆಚೆ ದಡದಲ್ಲಿರುವ ಈ ಸೆರೆಮನೆ ನೋಡಲು ಹೋಗುವವರಿಗೆ ದಾರಿಯೂ ಇಲ್ಲ. ಕಂದಕ ಒಳಗಿನ ಮುಳ್ಳಿನ ಪೊದೆಗಳು ಹಾಗೂ ಕೊಳಚೆ ನೀರನ್ನು ದಾಟಿ ಈ ಸೆರೆಮನೆಗೆ ಹೋಗುವುದೇ ಹರಸಾಹಸವಾಗಿದೆ. ಟಿಪ್ಪು ಸುಲ್ತಾನ್ ಕಾಲದ ಐತಿಹಾಸಿಕ ಶಸ್ತ್ರಾಗಾರಗಳಿಗೆ ಕಾಯಕಲ್ಪ ನೀಡುವ ಕೆಲಸ ನಡೆಯುತ್ತಿದ್ದರೂ ನಿರ್ವಹಣೆ ಮರೀಚಿಕೆಯಾಗಿದೆ. ಬೆಂಗಳೂರು-ಮೈಸೂರು ಜೋಡಿ ರೈಲು ಮಾರ್ಗಕ್ಕೆ ಅಡ್ಡಿಯಾಗಿದ್ದ, ರೈಲು ನಿಲ್ದಾಣದ ಬಳಿಯ ಶಸ್ತ್ರಾಗಾರವನ್ನು 13 ಕೋಟಿ ಭಾರೀ ವೆಚ್ಚದಲ್ಲಿ ಸ್ಥಳಾಂತರಿಸಲಾಗಿದೆ. ನಂತರದ ದಿನಗಳಲ್ಲಿ ಪ್ರಾಚ್ಯವಸ್ತು ಇಲಾಖೆ ಈ ಸ್ಮಾರಕದ ಕಡೆ ನಿರಾಸಕ್ತಿ ತಾಳಿದ್ದು, ಸ್ಮಾರಕದ ಸುತ್ತಲೂ ಗಿಡಗಂಟಿಗಳು ಬೆಳೆದಿವೆ. ರಕ್ಷಣಾ ಬೇಲಿ ಬಟ್ಟೆ ಒಣಗಿಸಲು ಬಳಕೆಯಾಗುತ್ತಿದೆ.

ಗ್ಯಾರಿಸನ್ ಆಸ್ಪತ್ರೆ: ಪಟ್ಟಣದ ಬ್ರಿಟಿಷ್ ಸ್ಮಾರಕದ ಬಲಕ್ಕಿರುವ ಗ್ಯಾರಿಸನ್ ಹಾಸ್ಪಿಟಲ್ (ಸೈನಿಕರ ಆಸ್ಪತ್ರೆ) ಸ್ಮಾರಕ ಹಾಳು ಕೊಂಪೆಯಾಗಿದೆ. ಜಾಮಿಯಾ ಮಸೀದಿ ಎಡಗಿರುವ ಕೋಟೆಯಲ್ಲಿ ನೀರು ಪಾಚಿಕಟ್ಟಿ ಗಬ್ಬು ನಾರುತ್ತಿದೆ. ಸಾಯಿಬಾಬಾ ಆಶ್ರಮದ ಎದುರಿನ ಯೂರೋಪಿಯನ್ನರ ಸಮಾಧಿ ಸ್ಥಳ ಗ್ಯಾರಿಸನ್ ಸೆಮಿಟರಿಗೆ ದಾರಿಯೇ ಇಲ್ಲ. ಚಂದಗಾಲು ರಸ್ತೆಯಲ್ಲಿರುವ ಗುಲಾಂ ಅಲಿಖಾನ್ ಗುಂಬಜ್ ಹೆಸರಿನ ಬೃಹತ್ ಸ್ಮಾರಕದ ಒಂದೊಂದೇ ಭಾಗ ಕುಸಿಯುತ್ತಿವೆ. 'ಚಿಕ್ಕದೇವರ ಮಂಗಲ' ಎಂದೇ ಹೆಸರಾಗಿದ್ದ ತಾಲ್ಲೂಕಿನ ಬೆಳಗೊಳ ಗ್ರಾಮದ ಚೋಳರ ಕಾಲದ ಮೂರು ದೇಗುಲಗಳ ಜೀರ್ಣೋದ್ಧಾರಕ್ಕೆ ದಶಕದ ಹಿಂದೆಯೇ ಚಾಲನೆ ನೀಡಿ, ರಾಜ್ಯ ಪ್ರಾಚ್ಯವಸ್ತು ಇಲಾಖೆ ಸುಮಾರು 30 ಲಕ್ಷ ವೆಚ್ಚದಲ್ಲಿ ಕಾಯಕಲ್ಪ ಕಾರ್ಯ ಕೈಗೆತ್ತಿಕೊಂಡಿತ್ತು. ಆದರೆ ಆ ಕಾರ್ಯ ಅರ್ಧಕ್ಕೇ ನಿಂತಿದೆ. ತಾಲೂಕಿನ ಕೊಡಿಯಾಲ, ಬನ್ನಹಳ್ಳಿ, ಅಲಗೂಡು ಗ್ರಾಮಗಳಲ್ಲಿರುವ ಐತಿಹಾಸಿಕ ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳನ್ನು ಸಂರಕ್ಷಿಸುವ ಕೆಲಸ ಆಗಬೇಕಿದೆ.

ಸಹೋದರಿಯರ ಸಾವು

ಹಣ್ಣು ಕೀಳುವಾಗ ಕಾಲು ಜಾರಿ ಹೊಂಡಕ್ಕೆ ಬಿದ್ದಿದ್ದಾರೆ. ನೀರು ತುಂಬಿದ್ದ ಹೊಂಡದಿಂದ ಹೊರಬರಲು ಸಾಧ್ಯವಾಗದೇ ಮುಳುಗಿ ಅಸುನೀಗಿದ್ದಾರೆ. ಅಕ್ಕಪಕ್ಕದ ಜಮೀನಿನವರ ಸಹಾಯದಿಂದ ಮೃತದೇಹಗಳನ್ನು ಹೊರತೆಗೆಯಲಾಯಿತು. ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಬಸವ ಜಯಂತಿ ಆಚರಣೆ ಸಡಗರದಲ್ಲಿದ್ದ ಕುಟುಂಬದಲ್ಲಿ ಶೋಕ ಮನೆ ಮಾಡಿತು. ಈ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿಲ್ಲ. ಸ್ಥಳಕ್ಕೆ ಗುಂಡ್ಲುಪೇಟೆ ಶಾಸಕ ಸಿ.ಎಸ್.ನಿರಂಜನಕುಮಾರ್, ಬಿಜೆಪಿ ಎಸ್.ಸಿ. ಶಿವಮೂರ್ತಿ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಕ್ಯಾಪ್ಸಿಕಮ್ ರವಿ ಬರ್ಬರ ಹತ್ಯೆ

ಹಾಗೂ ಸಿಬ್ಬಂದಿ, ಶ್ವಾನ ದಳ ಹಾಗೂ ಬೆರಳಚ್ಚು ತಜ್ಞರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ, ಮಾಹಿತಿ ಕಲೆ ಹಾಕಿದರು. ಬಳಿಕ ರವಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಶವಾಗಾರಕ್ಕೆ ಸಾಗಿಸಿದ್ದು, ಬುಧವಾರ ವೈದ್ಯಕೀಯ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಗುವುದು ಎಂದು ಪೋಲೀಸರು ತಿಳಿಸಿದ್ದಾರೆ. ದುಷ್ಕರ್ಮಿಗಳು ಬಂದು ಹಾಕಿ ಕಚೇರಿಯಲ್ಲಿ ಒಬ್ಬರೇ ಇರುವುದನ್ನು ಖಚಿತಪಡಿಸಿಕೊಂಡು ಮಾರಕಾಸ್ತ್ರಗಳಿಂದ ದಾಳಿ ನಡೆಸಿದ್ದಾರೆ. ರವಿ ನೋವಿನಿಂದ ಕಿರುಚುವ ಶಬ್ದ ಕೇಳಿ ಅವರ ಮಳಿಗೆಯ ಕೆಲಸಗಾರರು, ಅಕ್ಕಪಕ್ಕದ ಮಳಿಗೆಯವರು ಧಾವಿಸಿದ್ದಾರೆ. ಈ ವೇಳೆ ಲಾಂಗ್, ಮಚ್ಚು ತೋರಿಸಿ, ಅವರನ್ನು ಬೆದರಿಸಿ ಹಾಕಿದ್ದಾರೆ. ಇದರಿಂದ ಸಹಾಯಕ್ಕೆ ಧಾವಿಸಿದವರು ಹಿಂದೆ ಸರಿಯುತ್ತಿದ್ದಂತೆ ಕೊಲೆಗಾರರು ಸ್ಥಳದಿಂದ ಪರಾರಿಯಾಗಿದ್ದಾರೆ. ಇದಕ್ಕೆ ವ್ಯವಹಾರಿಕ ಅಥವಾ ಹಳೇ ವೈಷಮ್ಯ ಕಾರಣವಿರಬಹುದು ಎಂದು ಶಂಕಿಸಲಾಗಿದೆಯಾದರೂ ನಿಖರ ಕಾರಣ ತನಿಖೆಯಿಂದ ತಿಳಿಯಬೇಕಿದೆ.

ಮೂರು ತಿಂಗಳ ಹಿಂದೆ ಗಲಾಟೆಯೊಂದರಲ್ಲಿ ಗುಂಪೊಂದು ರವಿ ಮೇಲೆ ಲಾಂಗ್‌ನಿಂದ ಹಲ್ಲೆ ನಡೆಸಲು ಯತ್ನಿಸಿತ್ತು. ಘಟನೆ ಬಗ್ಗೆ ರವಿ ಪೊಲೀಸರಿಗೂ ದೂರು ನೀಡಿದ್ದರು ಎಂದು ಸ್ಥಳದಲ್ಲಿದ್ದವರು ಮಾತನಾಡಿಕೊಳ್ಳುತ್ತಿದ್ದರು. ಸಾರ್ವಜನಿಕರ ಸುಳಿವಿನ ಮೇರೆಗೆ ಪೊಲೀಸರು ಓರ್ವ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ ಇದನ್ನು ಪೊಲೀಸರು ಖಚಿತಪಡಿಸಿಲ್ಲ. ಈ ಸಂಬಂಧ ರವಿ ಕುಟುಂಬದವರು ನೀಡಿರುವ ದೂರಿನನ್ವಯ ಓರ್ವ ರೌಡಿಶೀಟರ್ ಸೇರಿದಂತೆ ಮೂವರ ವಿರುದ್ಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮಧ್ಯಮ ವರ್ಗ ಕುಟುಂಬದ ರವಿ ಹಲವು ವರ್ಷಗಳ ಹಿಂದೆಯೇ ಜೀವನೋಪಾಯಕ್ಕಾಗಿ ಎಪಿಎಂಸಿ ಸೇರಿದ್ದರು. ಕೂಲಿ ಕೆಲಸದಿಂದ ವ್ಯಾಪಾರದ ಎಲ್ಲಾ ಮಜಲುಗಳ ಬಗ್ಗೆ ಚೆನ್ನಾಗಿ ಅನುಭವ ಹೊಂದಿದ್ದ ರವಿ, ಹಂತಹಂತವಾಗಿ ಬೆಳೆದು ಆರ್ಥಿಕವಾಗಿ ಸ್ಥಿತಿವಂತರಾಗಿದ್ದರು. ರವಿಯ ಚಲನವಲನಗಳ ಬಗ್ಗೆ ಚೆನ್ನಾಗಿ ತಿಳಿದವರೇ ಈ ಕೃತ್ಯ ನಡೆಸಿದ್ದಾರೆ ಎನ್ನುವುದು ಸ್ಥಳೀಯರ ಮಾತು. ಆದರೂ ಯಾವ ಕಾರಣಕ್ಕೆ ಯಾರು ಹತ್ಯೆ ಮಾಡಿದ್ದಾರೆ ಎನ್ನುವುದನ್ನು ಪೊಲೀಸರ ತನಿಖೆಯಿಂದಲೇ ತಿಳಿಯಬೇಕಿದೆ. ರವಿ, ತಂದೆ-ತಾಯಿ, ಪತ್ನಿ, ಮೂವರು ಮಕ್ಕಳು, ಸಹೋದರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಹತ್ಯೆ ನಡೆದ ಸ್ಥಳದಲ್ಲಿ ರವಿ ಕುಟುಂಬದವರು, ಸಂಬಂಧಿಕರ ರೋದನ ಮುಗಿಲು ಮುಟ್ಟಿತ್ತು.

ಬಸವ ಮಾರ್ಗ ಸುಖ ಜೀವನಕ್ಕೆ ನಾಂದಿ

● ಬಸವ ಜಯಂತಿಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಅಭಿಮತ ● ಬಸವ ತತ್ವ ಹಲವು ಸಮಸ್ಯೆಗೆ ಪರಿಹಾರ: ಶಾಸಕ ರಾಮದಾಸ್ ● ಎಲ್ಲಾ ಹಂತದ ಪಠ್ಯದಲ್ಲಿ ಬಸವಣ್ಣನ ತತ್ವ ಅಳವಡಿಕೆ ಅಗತ್ಯ: ಎಂಎಲ್‌ಸಿ ಮಂಜೇಗೌಡ



"ಜಾತಿಯ ಹಂಗಿಲ್ಲದೆ ಎಲ್ಲಾ ವರ್ಗದ ವಚನಕಾರರ ಜೊತೆಗೂಡಿ ವಚನಗಳ ಮೂಲಕ ತಮ್ಮ ಹೊಸ ಚಿಂತನೆಗಳನ್ನು ಕಟ್ಟಿಕೊಡುತ್ತಿದ್ದರು. ಈ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸವನ್ನು ಇವರು ಮಾಡುತ್ತಿದ್ದರು. 12ನೇ ಶತಮಾನದ ಬಹುದೊಡ್ಡ ಸಮಾಜ ಸುಧಾರಕರು ಬಸವಣ್ಣನವರು. ಬಸವಣ್ಣ ಆ ಕಾಲಕ್ಕೆ ನೊಂದವರ, ದೀನದಲಿತರ ಉದ್ಧಾರಕ್ಕೆ ಪಣ ತೊಟ್ಟಿದ್ದರು. –ಜಿ.ಟಿ.ದೇವೇಗೌಡ, ಶಾಸಕರು

ಮೈಸೂರು,ಮೇ3(ಎಂಟಿವೈ)–ಕರ್ನಾಟಕದ ಪಾಲಿಗೆ 12ನೇ ಶತಮಾನ ಬಹಳ ಮಹತ್ವದ್ದಾಗಿದ್ದು, ಅಸ್ಪೃಶ್ಯತೆ ತೊಡೆದು ಹಾಕುವುದರೊಂದಿಗೆ ಹೊಸ ಚಿಂತನೆ ಹುಟ್ಟು ಹಾಕಿದ ಕಾಲಘಟ್ಟವಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ಅಭಿಮತ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 12ನೇ ಶತಮಾನ ಸಮಾಜದಲ್ಲಿ ಬಹುದೊಡ್ಡ ಬದಲಾವಣೆಯ ಹೊಸ ಚಿಂತನೆ ರೂಪುಗೊಂಡ ಕಾಲಘಟ್ಟವದು. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟವಾದ ಕಾಲಘಟ್ಟವದು. ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಸೇರಿದಂತೆ ಹಲವು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿದ್ದ ಆ ಕಾಲದಲ್ಲಿ ಬಸವಣ್ಣರವರು ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿದ್ದರು ಎಂದರು.

ಕೆಳವರ್ಗದವರನ್ನು ಮೇಲ್ವರ್ಗದವರು ಅತ್ಯಂತ ಹೀನಾಯವಾಗಿ ಕಾಣುತ್ತಿದ್ದ ಸಮಯದಲ್ಲಿ, ಸುಧಾರಣೆ ತರಲು ಮುಂದಾದರು. ಮೇಲುಕೀಳನ್ನು ಹೋಗಲಾಡಿಸಲೆಂದೇ ಬಸವಣ್ಣನವರು ಕಲ್ಯಾಣದಲ್ಲಿ ಕ್ರಾಂತಿಯ ಬೀಜ ಬಿತ್ತಿದರು. ಸಮಾನತೆ, ಸಹಬಾಳ್ವೆಗಾಗಿ ಕೈ ಚಾಚಿದರು. ಕಠೋರ ಮಡಿಮೈಲಿಗೆಯು ಜಾತಿ, ಧರ್ಮವನ್ನೇ ಹಾಸಿ, ಹೊದ್ದು ಮಲಗಿದ್ದ ಕಾಲದಲ್ಲಿ ಬಸವಣ್ಣನವರ ಹೋರಾಟವೇನೂ ಸುಲಭದ ಮಾತಾಗಿರಲಿಲ್ಲ. ಅನುಭವ ಮಂಟಪ ನಿರ್ಮಿಸಿದರು. ಅನುಭವ ಮಂಟಪ ಎಂಬುದೇ ಅದ್ಭುತ ಪರಿಕಲ್ಪನೆ, ಅದರಡಿ ಎಲ್ಲ ವರ್ಗದವರನ್ನೂ ಬರಮಾಡಿಕೊಂಡರು. ಕೆಳವರ್ಗದವರನ್ನು ಮೇಲೆತ್ತಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದರು ಎಂದು ತಿಳಿಸಿದರು.

ವಿಶ್ವಗುರು ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದರೆ ಜೀವನ ಸುಖಮಯ, ಸಮಾಜವೂ ಸುಂದರ. 'ಕಾಯಕವೇ ಕೈಲಾಸ' ಎಂದು ಕಲಿಸಿಕೊಟ್ಟವರು ಬಸವಣ್ಣನವರು. ಸಮಾಜದಲ್ಲಿ ಹೊಸ ಕ್ರಾಂತಿಯನ್ನು ಮಾಡಿದ ಶರಣರಲ್ಲಿ ಅಗ್ರಗಣ್ಯರು, ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಅರಿವಿನ ಕಿರಣ ಬೀರಿದವರು. ವಿಶ್ವಗುರುವಿನ ಒಂದೊಂದು ವಚನವು ಎಲ್ಲರ ಬದುಕಿಗೂ ಆದರ್ಶ. ಅಂದು ಹೆಣ್ಣು ಮಕ್ಕಳಿಗೂ ಕೂಡ ಸಮಾನ ಶಿಕ್ಷಣ ನೀಡಬೇಕು ಎನ್ನುವ ಬಸವಣ್ಣನವರ ಪರಿಕಲ್ಪನೆ ಇಂದು ಹೆಣ್ಣು ಮಕ್ಕಳು ಸಾಧನೆಯತ್ತ ಮುಂದೆ ಸಾಗಲು ಸಹಾಯಕವಾಗಿದೆ. ಹೀಗಾಗಿ ವಿಶ್ವಗುರು ಬಸವಣ್ಣನವರು ಇಂದಿಗೂ ಕೂಡ ಜನರ ಮನದಲ್ಲಿ ಅಚ್ಚಳಿಯದೆ ಉಳಿದುಕೊಂಡಿದ್ದಾರೆ ಎಂದರಲ್ಲದೆ, ದಾರ್ಶನಿಕರ ಜಯಂತಿಗಳಿಗೆ ಸರ್ಕಾರಿ ರಜೆ ಕೊಡುವುದು ಸರಿಯಲ್ಲ. ಕಾಯಕವೇ ಕೈಲಾಸವೆಂದು ಪ್ರತಿಪಾದಿಸಿದ ಬಸವಣ್ಣರ ಜಯಂತಿ ರಜೆ ವಾಪಸ್ ಪಡೆಯುವಂತೆ ಬಸವ ಜಯಂತ್ಯುತ್ಸವ ಸಮಿತಿ ಸರ್ಕಾರಕ್ಕೆ ಒತ್ತಾಯಿಸಬೇಕು ಎಂದು ಸಲಹೆ ನೀಡಿದರು.

ಅನೇಕ ಸಮಸ್ಯೆಗಳಿಗೆ ಉತ್ತರ: ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ಬಸವಣ್ಣರ ವಿಚಾರಧಾರೆಗಳು ನಮ್ಮನ್ನು ಕಾಡುವ ಅನೇಕ ಸಮಸ್ಯೆಗಳಿಗೆ ಉತ್ತರ ಕೊಡುತ್ತದೆ. ನಾವು ಪ್ರತಿದಿನವೂ ಬಸವಣ್ಣನವರ ವಿಚಾರಧಾರೆಗಳ ಬಗ್ಗೆ ಚಿಂತನ ಮಂಥನ ಮಾಡುತ್ತಿದ್ದೇವೆ. ಅವರ ವಿಚಾರಧಾರೆಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡುತ್ತೇವೆ. ಅವರ ಜೀವನದ ಕನಸನ್ನು ನನಸಾಗಿಲ್ಲ ಎನ್ನುವ ಮಾತು ಕೇಳುತ್ತಿದ್ದೇವೆ. ಬಸವಣ್ಣರ ಕನಸು ನನಸು ಮಾಡಬೇಕಾದವರು ಯಾರು ಎಂದು ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಸವಣ್ಣ ಒಬ್ಬ ವ್ಯಕ್ತಿಯಲ್ಲ ಶಕ್ತಿಯಾಗಿದ್ದರು. 12ನೇ ಶತಮಾನದಲ್ಲಿ ಬಸವಣ್ಣರ ದೇಹವಿತ್ತು ಅಷ್ಟೇ. ಆದರೆ 21 ನೇಶತಮಾನದಲ್ಲಿ ಅವರ ವಿಚಾರಧಾರೆಗಳ ಮೂಲಕ ನಮ್ಮೊಂದಿಗೆ ಬಸವಣ್ಣ ಇದ್ದಾರೆ ಎಂದರು.

ಯಾವುದೇ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ, ಬಸವಣ್ಣರ ವಚನದಿಂದ ಸಾಧ್ಯ. ಅವರ 5 ಸಾವಿರ ವಚನಗಳು ಜಗತ್ತಿನ ಬಹುತೇಕ ಸಮಸ್ಯೆಗೆ ಪರಿಹಾರ ದೊರಕಿಸಿಕೊಡುವ ದೊಡ್ಡ ಶಕ್ತಿಯಾಗಿ



ಪರಿಣಮಿಸಿದೆ. ಒಂದಲ್ಲ ಒಂದು ವಚನ ಜಗತ್ತನ್ನು ಕಾಡುವ ಸಮಸ್ಯೆಗೆ ಪರಿಹಾರ ದೊರಕಿಸಿಕೊಡುತ್ತದೆ. ಆ ಮೂಲಕ ಬಸವಣ್ಣನವರು ವಿಶ್ವದ ದೊಡ್ಡ ಶಕ್ತಿಯಾಗಿದ್ದಾರೆ. ಮನುಕುಲದ ವಿಚಾರಧಾರೆಗೆ ಬಸವಣ್ಣನವರು ತತ್ವ ಜೀವ ತುಂಬಿದೆ. ಅವರ ವಿಚಾರಧಾರೆ, ತತ್ವ, ಸಿದ್ಧಾಂತ ಕೇವಲ ಹಿಂದೂ ಧರ್ಮಕ್ಕೆ ಮಾತ್ರ ಸೀಮಿತಗೊಳ್ಳದೆ, ಕ್ರಿಶ್ಚಿಯನ್, ಮುಸ್ಲಿಂ ಸಮುದಾಯಗಳಿಗೂ ಪೂರಕವಾಗಿ ಮಾರ್ಪಟ್ಟಿದೆ ಎಂದರು

ಬಸವಣ್ಣನವರು ಎರಡು ಸಾಲುಗಳ ವಚನದ ಮೂಲಕ ಮಹತ್ತರ ಸಂದೇಶ ಸಾರುವ ಪ್ರಯತ್ನ ಮಾಡಿ ಯಶಸ್ವಿಯಾದರು. ಕಾಯಕವೇ ಕೈಲಾಸ ಎಂದು ಹೇಳುವ ಮೂಲಕ ಕಾಯಕದ ಮಹತ್ವ ಸಾರಿದರು. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ಅವರ ವಚನ ಮೋಸ, ವಂಚನೆ ಮಾಡುವವರ ಮನಪರಿರ್ತನೆ ಮಾಡಿದೆ. ಇವನಾರವ ಎನಿಸಬೇಡ, ಇವ ನಮ್ಮವ ಎನಿಸಯ್ಯ ಈ ಎಲ್ಲಾ ವಚನಗಳು ಎರಡೇ ಸಾಲಿನಲ್ಲಿದ್ದರೂ ಜೀವನುದ್ದಕ್ಕೂ ಮೌಲ್ಯ ಕಲಿಸುತ್ತವೆ ಎಂದು ವಿವರಿಸಿದರು.

ಪಠ್ಯಕ್ರಮದಲ್ಲಿ ಅಳವಡಿಸಬೇಕು: ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ವಿಶ್ವಗುರು ಬಸವಣ್ಣನವರ ವಚನಗಳನ್ನು ಪ್ರತಿಯೊಬ್ಬರೂ ಓದುವಂತಾಗಬೇಕು. ಅದಕ್ಕಾಗಿ 1ನೇ ತರಗತಿಯಿಂದ ಎಂಬಿಬಿಎಸ್‌ವರೆಗೂ ಪಠ್ಯಕ್ರಮದಲ್ಲಿ ಬಸವಣ್ಣನವರ ವಚನಗಳನ್ನು ಸರ್ಕಾರ ಸೇರಿಸಬೇಕೆಂದು ಒತ್ತಾಯಿಸಿದರು.

ಬಸವಣ್ಣನವರ ವಚನ, ಗಾಂಧೀಜಿಯವರ ಮಾತು, ಡಾ.ಅಂಬೇಡ್ಕರ್‌ರವರ ಕೊಡುಗೆ, ಡಾ. ಬಾಬು ಜಗಜೀವನರಾಂ ಅವರ ಸಾಧನೆಗಳು, ಡಾ. ಶಿವಕುಮಾರಸ್ವಾಮೀಜಿಯವರ ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಬಸವಣ್ಣನವರು 'ಕಾಯಕವೇ ಕೈಲಾಸ' ಎಂದಿದ್ದಾರೆ. ಗಾಂಧೀಜಿಯವರು 'ಬೀದಿ ಕಸವನ್ನಾದರು ಗುಡಿಸು, ಅಚ್ಚುಕಟ್ಟಾಗಿ ಗುಡಿಸು', 'ಹಕ್ಕನ್ನು ಪ್ರತಿಪಾದಿಸುವುದಕ್ಕಿಂತ ಮುಂಚೆ, ಕರ್ತವ್ಯವನ್ನು ಪಾಲಿಸು' ಎಂದಿದ್ದಾರೆ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಅಂತರಜಾತಿ ವಿವಾಹ ಮಾಡಿಸಿ ಕ್ರಾಂತಿಯನ್ನೇ ಮಾಡಿದ ಮಹಾಪುರುಷ, 800 ವರ್ಷಗಳು ಕಳೆದರೂ ಬಸವಣ್ಣನವರನ್ನು ನಾವು ನೆನಪು ಮಾಡಿಕೊಂಡು ಪೂಜಿಸುತ್ತಿದ್ದೇವೆ ಎಂದರೆ ಅವರು ಮಾಡಿದ ಸಾಮಾಜಿಕ ಕ್ರಾಂತಿ, ಸಮಾಜದಲ್ಲಿ ಸಮಾನತೆ ತರುವ ಪ್ರಯತ್ನ ಮೆಚ್ಚುವಂತದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಎಲ್ಲಾ ಇಲಾಖೆಯಲ್ಲೂ ಅಕ್ರಮ ನಡೆದಿದೆ

● ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಆರೋಪ ● ಅಕ್ರಮದಲ್ಲಿ ಯುವಕರಿಗೆ ನ್ಯಾಯ ಸಿಗುತ್ತಾ?



ಬೆಂಗಳೂರು, ಮೇ 3(ಕೆಎಂಶಿ)–ಪಿಎಸ್ಐ, ಪಿಡಬ್ಲ್ಯೂಡಿ, ಶಿಕ್ಷಣ ಇಲಾಖೆ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ನೇಮಕಾತಿ ಅಕ್ರಮ ನಡೆದಿದೆ. ಉದ್ಯೋಗ ವಿಚಾರದಲ್ಲಿ ಯುವಕರಿಗೆ ನ್ಯಾಯ ಎಲ್ಲಿ ಸಿಗುತ್ತದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವಿಚಾರವಾಗಿ ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅನುಮಾನ ಇಲ್ಲದೆ ದೂರು ದಾಖಲಿಸಲು ಸಾಧ್ಯವೇ? ಈ ವಿಚಾರವಾಗಿ ತನಿಖೆ ಸರಿಯಾಗಿ ಆಗುತ್ತದೆಯಾ? ಇವರು ಅಕ್ರಮದ ಅಂಗಡಿ ತೆರೆದಿದ್ದ ಕಾರಣ ಜನ ಅವರ ಬಳಿ ಖರೀದಿಗೆ ಹೋಗಿದ್ದಾರೆ. ಇವರು ಅಂಗಡಿ ತೆರೆಯದಿದ್ದರೆ ಅವರು ಹೋಗುತ್ತಿದ್ದರಾ, ಅಂಗಡಿ ತೆರೆದವರು ಯಾರು, ಸಂಪರ್ಕ ಕೊಟ್ಟವರ್ಯಾರು ಈ ಪ್ರಕರಣದಲ್ಲಿ ಪೊಲೀಸರು, ರಾಜಕಾರಣಿಗಳು ಯಾವ ರೀತಿ ಭಾಗಿಯಾಗಿದ್ದಾರೆ. ಯಾರು ಆಸ್ತಿ ಮಾಡಿದ್ದಾರೆ, ಯಾರು ಸಾಲ ಮಾಡಿದ್ದಾರೆ, ಇವೆಲ್ಲವೂ ಬಹಿರಂಗವಾಗಬೇಕು ಎಂದು ಪ್ರಶ್ನಿಸಿದ್ದಾರೆ.

ಇದ್ಯಾವುದೂ ನಡೆಯದೇ ಏಕಾಏಕಿ ಪರೀಕ್ಷೆ ರದ್ದು ಮಾಡಿ, ಮರು ಪರೀಕ್ಷೆಗೆ ಆದೇಶಿಸಿದರೆ ನಾವು ಸುಮ್ಮನಿರಲು ಸಾಧ್ಯವೇ? ಅಕ್ರಮದಲ್ಲಿ ಯಾರು ಭಾಗಿಯಾಗಿದ್ದಾರೆ, ಯಾರು, ಯಾರಿಂದ ವಸೂಲಿ ಮಾಡಿದ್ದಾರೆ ಎಂಬುದು ಬಹಿರಂಗವಾಗಬೇಕು.

ಮಾಗಡಿ ಕ್ಷೇತ್ರವೊಂದರಲ್ಲಿ ಎರಡು ಕೋಟಿ ರೂ. ಅಕ್ರಮ ನಡೆದಿದ್ದು ಇದರಲ್ಲಿ ಭಾಗಿಯಾಗಿರುವ ಸಚಿವರು ರಾಜೀನಾಮೆ ನೀಡಬೇಕು. ಕಾಂಗ್ರೆಸ್ ಪಕ್ಷ ಇದರ ಬಗ್ಗೆ ಹೋರಾಟ ಮಾಡುತ್ತದೆ. ಈ ವಿಚಾರವಾಗಿ ಯಾವುದೇ ವೇದಿಕೆಯಲ್ಲಿ ಚರ್ಚೆ ಮಾಡಲು ನಮ್ಮ ಪಕ್ಷದ ವಕ್ತಾರರು ಸಿದ್ಧರಿದ್ದಾರೆ ಎಂದರು.


ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಯತ್ನಾಳ್ ಅವರ ಹೇಳಿಕೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಯತ್ನಾಳ್ ಅವರಾಗಲಿ ಅಥವಾ ಬೇರೆ ಯಾರೇ ಮಾತನಾಡಿದರು ಅದು ನಮಗೆ ಪ್ರಮುಖ ವಿಚಾರವಲ್ಲ ಎಂದು ಪ್ರತಿಕ್ರಿಯಿಸಿದರು. ಸಮರ್ಥರು, ಅಸಮರ್ಥರು, ಯಾವ ಸೂತ್ರ ಬರುತ್ತದೆ ಎಂಬುದೂ ನಮಗೆ ಮುಖ್ಯವಲ್ಲ. ಮುಖ್ಯಮಂತ್ರಿ ಬದಲಾವಣೆ ಅವರ ಪಕ್ಷದ ವಿಚಾರ. ನಮಗೂ ಅದಕ್ಕೂ ಸಂಬಂಧವಿಲ್ಲ. ರಾಜ್ಯಕ್ಕೆ ಉತ್ತಮ ಆಡಳಿತ ಸಿಗಬೇಕು ಎಂಬುದು ಕಾಂಗ್ರೆಸ್ ಪಕ್ಷದ ಉದ್ದೇಶ. ಈ ರಾಜ್ಯ ಶಾಂತಿಯ ತೋಟವಾಗಬೇಕು, ಎಲ್ಲಾ ಧರ್ಮದವರಿಗೂ ರಕ್ಷಣೆ ಸಿಗಬೇಕು. ಸರ್ಕಾರ ಈ ಕೆಲಸ ಮಾಡಿದರೆ ಸಾಕು. ಮಾಧ್ಯಮಗಳಲ್ಲಿ ಭ್ರಷ್ಟಾಚಾರ ವಿಚಾರ ಪ್ರಕಟವಾಗುತ್ತಿದ್ದರೂ, ಪೊಲೀಸರು ಸರಿಯಾದ ತನಿಖೆ ನಡೆಸುತ್ತಿಲ್ಲ. ವಿಚಾರಣೆಗೆ ಕರೆಸಿದ ದರ್ಶನ್ ಗೌಡ ಯಾವ ಹೇಳಿಕೆ ಕೊಟ್ಟಿದ್ದಾನೆ ಆತನನ್ನು ಯಾಕೆ ಪೂರ್ಣ ಪ್ರಮಾಣದಲ್ಲಿ ವಿಚಾರಣೆ ಮಾಡದೆ ಬಿಟ್ಟು ಕಳುಹಿಸಲಾಯಿತು.

ಈ ವಿಚಾರವಾಗಿ ಯಾವುದೇ ಮಾಹಿತಿ ನೀಡುತ್ತಿಲ್ಲ ಯಾಕೆ? ಆತನ ವಿಚಾರಣೆ ಮಾಡಿದರೆ ಸಚಿವರ ಸಂಪರ್ಕ ಬಹಿರಂಗವಾಗುತ್ತದೆ ಎಂಬ ಕಾರಣಕ್ಕೆ ಆತನನ್ನು ಬಿಟ್ಟು ಕಳುಹಿಸಲಾಗಿದೆ. ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡಿದ್ದೇಕೆ? ರಾಮನಗರ ಸ್ವಚ್ಛ ಮಾಡುತ್ತೇನೆ ಎಂದು ಬಂದವರು ಮಾಡಿದ ಸ್ವಚ್ಛ ಇದೇನಾ?' ಎಂದು ಪ್ರಶ್ನಿಸಿದರು.


ಮುಂದಿನ 2–3 ದಿನಗಳಲ್ಲಿ ಭಾರೀ ದೊಡ್ಡ ಮಟ್ಟದ ಬದಲಾವಣೆ ಆಗಲಿದೆ ಎಂಬ ಯಡಿಯೂರಪ್ಪನವರ ಹೇಳಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಯಡಿಯೂರಪ್ಪ ನವರು ನಿನ್ನೆ ಒಂದು ಹೇಳಿಕೆ ನೀಡಿದ್ದು, ಯತ್ನಾಳ್ ಅವರು ಒಂದು ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿಗಳ ಭೋಜನಕೂಟ ಇದೆ. ಇದೆಲ್ಲವೂ ಅವರ ಪಕ್ಷದ ವಿಚಾರಗಳು. ಅವರ ಪಕ್ಷದ ವಿಚಾರದ ಬಗ್ಗೆ ನಾವ್ಯಾಕೆ ಮಾತನಾಡಬೇಕು. ಅವರನ್ನು ಪ್ರಶಂಸಿಸಲು, ಅವರಿಗೆ ಸಲಹೆ ನೀಡಲು, ಅವರನ್ನು ತೆಗಳಲು ನಾವಿಲ್ಲ' ಎಂದು ಉತ್ತರಿಸಿದರು.

ಬಿಜೆಪಿ ಸರ್ಕಾರ ಬಂದಾಗಲೆಲ್ಲಾ ಪದೇಪದೆ ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, 'ಈಗ ಆ ವಿಚಾರಗಳ ಬಗ್ಗೆ ಚರ್ಚೆ ಬೇಡ. ಅವರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ನೋಡಿಕೊಂಡು ನಂತರ ಚರ್ಚೆ ಮಾಡೋಣ' ಎಂದರು.

ಮೇಕೆದಾಟು ಯೋಜನೆಗೆ ಬಜೆಟ್‌ನಲ್ಲಿ 1000 ಕೋಟಿ ಅನುದಾನ ಘೋಷಣೆ ಮಾಡಿದ್ದು, ಅದನ್ನು ಯಾವ ರೀತಿ ಅನುಷ್ಠಾನ ಮಾಡಲಿದೆ ಎಂಬ ಪ್ರಶ್ನೆಗೆ ಉತ್ತರಿಸುತ್ತ, 'ಸಿಎಂ ದೆಹಲಿಯಿಂದ ಅನುಮತಿ ಪಡೆದು ಯೋಜನೆ ಆರಂಭಿಸುವುದಾಗಿ ಹೇಳಿದ್ದಾರೆ. ಅವರು ಈ ನಿಟ್ಟಿನಲ್ಲಿ ಯಾವ ರೀತಿ ಕ್ರಮ ಕೈಗೊಳ್ಳುತ್ತಾರೆ ಕಾದು ನೋಡೋಣ' ಎಂದರು.



ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಬಸವ ಪ್ರತಿಮೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಆರ್.ಧರ್ಮಸೇನ, ಲೋಕಸಭಾ ಮಾಜಿ ಸದಸ್ಯ ಕಾಗಲವಾಡಿ ಎಂ.ಶಿವಣ್ಣ, ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಕಾಂಗ್ರೆಸ್ ಮುಖಂಡರಾದ ಎಂ.ಶಿವಣ್ಣ, ನಟರಾಜ್, ಮೈಸೂರು ಬಸವಣ್ಣ, ಕಾಳಯ್ಯ, ಸುರೇಶ್, ಮಲಿಯೂರ್ ಸಂತೋಷ್, ಚಂದ್ರು, ಮಂಜು ಇತರರು ಇದ್ದರು.



ನಾಗವಾಲ ಗ್ರಾಮ ಪಂಚಾಯಿತಿಯಲ್ಲಿ ಬಸವ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ, ಪಿಡಿಒ ಡಾ.ಶೋಭಾರಾಣಿ, ಗ್ರಾಪಂ ಸದಸ್ಯ ಸೀಗಳ್ಳಿ ಸೋಮಣ್ಣ, ಶ್ರೀಧರ್, ಎಸ್‌ಡಿಎಮ್‌ಸಿ ಅಧ್ಯಕ್ಷ ನಾಗವಾಲ ಶಿವು, ಸೋಮು ಹಾಜರಿದ್ದರು.

ಸಾರಾ ಕನ್ವೆನ್ಷನ್ ಅಕ್ರಮ ಜಾಗ ಈಗ ಇ–ಹರಾಜು ಮೂಲಕ ಸಕ್ರಮ

ಮುಡಾ ಅಧಿಕಾರಿಗಳ ಸಹಕಾರ: ಆರ್‌ಟಿಐ ಕಾರ್ಯಕರ್ತ ಗಂಗರಾಜು ಆರೋಪ



ಮೈಸೂರು, ಮೇ3(ಆರ್‌ಕೆಬಿ)– ಶಾಸಕ ಸಾ.ರಾ.ಮಹೇಶ್ ಅವರ ದಟ್ಟಗಳ್ಳಿಯಲ್ಲಿನ ಸಾ.ರಾ.ಕನ್ವೆನ್ಷನ್ ಹಾಲ್ ಕಲ್ಯಾಣ ಮಂಟಪಕ್ಕಾಗಿ ಮುಡಾ ಜಾಗ ಅತಿಕ್ರಮಿಸಿಕೊಳ್ಳಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಈಗ ಮುಡಾ ಅಧಿಕಾರಿಗಳು ಅತಿಕ್ರಮಿತ ಜಾಗವನ್ನೇ ಇ ಹರಾಜು ಮೂಲಕ ಶಾಸಕರ ಕುಟುಂಬದವರು ಖರೀದಿಸಲು ನೆರವಾಗಿದ್ದಾರೆ. ಇದುವರೆಗೂ ಈ ಜಾಗ ಅತಿಕ್ರಮಿತವಾಗಿತ್ತು ಎಂಬುದು ಸಾಬೀತಾದಂತಾಗಿದೆ ಎಂದು ಆರ್‌ಟಿಐ ಕಾರ್ಯಕರ್ತ ಗಂಗರಾಜು ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ತಾವು ಈ ಆರೋಪ ಮಾಡಿದ ಬಳಿಕ ಜಾಗದ ಸರ್ವೆ ಮಾಡುವಂತೆ ಜಿಲ್ಲಾಧಿಕಾರಿ ಆದೇಶಿಸಿದ್ದರು. ಆದರೆ ಮುಡಾ ಆಯುಕ್ತರು ಹಾಗೂ ಇನ್ನಿತರ ಅಧಿಕಾರಿಗಳು ಶಾಸಕರನ್ನು ಆರೋಪ ಮುಕ್ತರನ್ನಾಗಿಸುವ ನಿಟ್ಟಿನಲ್ಲಿ ಅವರೂ ಅಕ್ರಮದಲ್ಲಿ ತೊಡಗಿ, ಈಗ ಕಲ್ಯಾಣ ಮಂಟಪದ ಆವರಣದ ಅತಿಕ್ರಮಿತ ಜಾಗವನ್ನು ಇ–ಹರಾಜು ಮೂಲಕ ಶಾಸಕರ ಕುಟುಂಬದವರೇ ಅತೀ ಹೆಚ್ಚು ಬಿಡ್ ಮಾಡುವಂತೆ ಮಾಡಿ ಅವರಿಗೇ ನೀಡಲಾಗಿದೆ. ಈಗ ಅವರು ಖರೀದಿಸಿರಬಹುದು, ಆದರೆ ಇದುವರೆಗೂ ಈ ಜಾಗ ಮುಡಾದ್ದಾಗಿದ್ದು, ಅದನ್ನು ಶಾಸಕರು ತಮ್ಮ ಕಲ್ಯಾಣ ಮಂಟಪಕ್ಕಾಗಿ ಅತಿಕ್ರಮಿಸಿದ್ದರೆಂಬುದು ಸಾಬೀತಾದಂತಾಗಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ತಾವು ಆರೋಪ ಮಾಡಿದಾಗ, ಶಾಸಕರು ಪ್ರತಿಕ್ರಿಯೆ ನೀಡಿ, ಒಂದು ವೇಳೆ ತಾವು ಮುಡಾ ಜಾಗ ಅತಿಕ್ರಮಿಸಿದ್ದರೆ ರಾಜಕೀಯವನ್ನೇ ತ್ಯಜಿಸುವುದಾಗಿ ಹೇಳಿದ್ದರು. ಈಗ ಅವರು ಏನು ಉತ್ತರ ನೀಡುತ್ತಾರೆಂದು ಗಂಗರಾಜು ಪ್ರಶ್ನಿಸಿದರಲ್ಲದೆ, ಈ ಕುರಿತು ಪಾರದರ್ಶಕ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಸಾರಾ ಕನ್ವೆನ್ಷನ್ ಹಾಲ್ ಕಲ್ಯಾಣ ಮಂಟಪಕ್ಕಾಗಿ ಅತಿಕ್ರಮಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆಲ ದಾಖಲೆ ಪತ್ರಗಳನ್ನು ಗಂಗರಾಜು ಬಿಡುಗಡೆ ಮಾಡಿದರು. ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಹೊಸಕೋಟೆ ಬಸವರಾಜು, ಸ್ವರಾಜ್ ಇಂಡಿಯಾದ ಉಗ್ರನರಸಿಂಹೇಗೌಡ, ಪಿ.ಮರಂಕಯ್ಯ, ಬಿ. ಕರುಣಾಕರ್ ಇನ್ನಿತರರು ಉಪಸ್ಥಿತರಿದ್ದರು.

ಇ ಹರಾಜಲ್ಲಿ ನಮ್ಮ ಕುಟುಂಬದವರು ಖರೀದಿಸಿದ್ದರಲ್ಲಿ ತಪ್ಪೇನಿದೆ?

ಕೆ.ಆರ್.ನಗರ ಕ್ಷೇತ್ರದ ಶಾಸಕ ಸಾ.ರಾ.ಮಹೇಶ್ ಪ್ರಶ್ನೆ



ಮೈಸೂರು, ಮೇ 3– ತಮ್ಮ ಸಾರಾ ಕನ್ವೆನ್ಷನ್ ಹಾಲ್‌ಗೂ ಈ ಜಾಗಕ್ಕೂ ಸಂಬಂಧವಿಲ್ಲ. ಕನ್ವೆನ್ಷನ್ ಹಾಲ್ ಸರ್ವೆ ವರದಿ ಇನ್ನೂ ಬಂದಿಲ್ಲ. ಈ ನಡುವೆ ಮುಡಾದವರು ಕನ್ವೆನ್ಷನ್ ಹಾಲ್ ಪಕ್ಕದ ನಿವೇಶನವನ್ನು ಇ ಹರಾಜು ಮಾಡಿದ್ದು, ಹರಾಜಿನಲ್ಲಿ ನಮ್ಮ ಕುಟುಂಬದವರು ಭಾಗವಹಿಸಿ, ಬಿಡ್ ಮಾಡಿದ್ದರಲ್ಲಿ ತಪ್ಪೇನಿದೆ? ಎಂದು ಶಾಸಕ ಸಾ.ರಾ.ಮಹೇಶ್ ಪ್ರಶ್ನಿಸಿದ್ದಾರೆ.

ಸಾರಾ ಕನ್ವೆನ್ಷನ್ ಹಾಲ್ ಕಲ್ಯಾಣ ಮಂಟಪವನ್ನು ಅತಿಕ್ರಮಿಸಿದ ಜಾಗದಲ್ಲಿ ನಿರ್ಮಾಣ ಮಾಡಲಾಗಿದೆ. ಅತಿಕ್ರಮಿತ ಜಾಗವನ್ನು ಮುಡಾ ಇ ಹರಾಜು ಕರೆದಿದ್ದು, ಅದರಲ್ಲಿ ಸಾ.ರಾ.ಮಹೇಶ್ ಅವರ ಕುಟುಂಬದವರೇ ಖರೀದಿಸುವುದರೊಂದಿಗೆ ಅಕ್ರಮವನ್ನು ಮುಚ್ಚಿ ಹಾಕಲಾಗಿದೆ ಎಂಬ ಆರ್‌ಟಿಐ ಕಾರ್ಯಕರ್ತ ಗಂಗರಾಜು ಆರೋಪಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸಾ.ರಾ.ಮಹೇಶ್, ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಕನ್ವೆನ್ಷನ್ ಹಾಲ್ ಪಕ್ಕದ ಜಾಗವನ್ನು ಮುಡಾದವರು ಇ–ಹರಾಜು ಮಾಡಿದಾಗ ನಮ್ಮ ಕುಟುಂಬದವರು ಬಿಡ್‌ನಲ್ಲಿ ಭಾಗವಹಿಸಿದ್ದಾರೆ. ಬಿಡ್‌ನಲ್ಲಿ ಅಧಿಕ ಮೊತ್ತ ದಾಖಲಿಸಿದ ಕಾರಣಕ್ಕಾಗಿ ಆ ನಿವೇಶನ ನಮ್ಮ ಕುಟುಂಬದವರಿಗೆ ದಕ್ಕಿದೆ. ಈ ಬಿಡ್‌ನಲ್ಲಿ ನಮ್ಮ ಕುಟುಂಬದವರು ಭಾಗವಹಿಸಿದ್ದರಲ್ಲಿ ತಪ್ಪೇನಿದೆ. ಈಗ ನಮ್ಮ ಕುಟುಂಬದವರು ಖರೀದಿಸಿರುವ ಜಾಗಕ್ಕೂ, ಕಲ್ಯಾಣ ಮಂಟಪದ ಜಾಗಕ್ಕೂ ತಳುಕು ಹಾಕಿ, ಇದು ಅಕ್ರಮ ಎಂದು ಹೇಳಲು ಗಂಗರಾಜು ಮುಂದಾಗಿದ್ದಾರೇನೋ ಎನ್ನಿಸುತ್ತಿದೆ ಎಂದು ತಿಳಿಸಿದರು.

ವಿವಿಧೆಡೆ ಜಗಜ್ಯೋತಿ, ಕಾಯಕಯೋಗಿ ಬಸವ ಜಯಂತಿ

ಬಸವಣ್ಣನವರ ವಚನಗಳು ಧರ್ಮ ಗ್ರಂಥಗಳಾಗಲಿ

ಸಂಸದ ವಿ.ಶ್ರೀನಿವಾಸಪ್ರಸಾದ್



ನಂಜನಗೂಡು, ಮೇ 3(ಸುದರ್ಶನ್)– 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ ಬಸವಣ್ಣನವರ ವಚನಗಳು ಧರ್ಮ ಗ್ರಂಥಗಳಾಗಬೇಕು ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ಕಲಾಮಂದಿರದಲ್ಲಿ ತಾಲೂಕು ಆಡಳಿತ ಏರ್ಪಡಿಸಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ವೀರಶೈವ ಧರ್ಮವನ್ನು ಕ್ರಾಂತಿಕಾರಕ ಸಮಾಜವಾಗಿ ಬದಲಾಯಿಸಿದವರು ಬಸವಣ್ಣ. ಕಾಯಕದಲ್ಲಿ ಕೈಲಾಸ ಕಂಡ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಮತ್ತು ಇಡೀ ಜಗತ್ತಿಗೆ ಆದರ್ಶವಾದಂತಹ ಮಾನವೀಯ ಧರ್ಮಗಳಲ್ಲಿ ವೀರಶೈವ ಧರ್ಮವೂ ಒಂದು. ಈ ಧರ್ಮದಲ್ಲಿ ಎಲ್ಲಾ ಜಾತಿಯ ಶಿವಶರಣರನ್ನು ಕಾಣಬಹುದಾಗಿದೆ. ಅಂಬೇಡ್ಕರ್ ಹೇಗೆ ಏಷ್ಯಾ ಖಂಡದ ಬುದ್ಧನಾಗಿದ್ದಾರೊ ಹಾಗೆ ದಕ್ಷಿಣ ಭಾರತಕ್ಕೆ ಬಸವಣ್ಣನವರು ಬುದ್ಧ ಎನಿಸಿದ್ದಾರೆ. ನನಗೆ ಬುದ್ಧ, ಅಂಬೇಡ್ಕರರಂತೆ ಬಸವಣ್ಣ ಕೂಡ ಪ್ರಾತಃಸ್ಮರಣೀಯರಾಗಿದ್ದಾರೆ. ಅವರ ಅನುಭವ ಮಂಟಪದಂತೆ ಗ್ರಾಪಂಗಳು ರೂಪುಗೊಳ್ಳಬೇಕಿದೆ ಎಂದರು.

ಬಸವಣ್ಣನವರ ವಚನಗಳು ಜರ್ಮನ್, ಪಾರ್ಸಿ, ಸೇರಿದಂತೆ ಇತರೆ ಭಾಷೆಗಳಿಗೂ ಅನುವಾದವಾಗುತ್ತಿವೆ. ಅವರ ವಚನಗಳು, ಸಂದೇಶ, ವಿಚಾರಧಾರೆಗಳು ಕಾರ್ಯರೂಪಕ್ಕೆ ಬರಬೇಕಿದ್ದು ವಚನ ಸಾಹಿತ್ಯ ಧರ್ಮ ಗ್ರಂಥವಾಗಬೇಕು ಎಂದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಜಾತಿ, ಧರ್ಮ ಧರ್ಮಗಳ ನಡುವೆ ವೈಷಮ್ಯ ವಿರಬಾರದು. ಎಲ್ಲರಿಗೂ ಸಮಾನತೆ ದೊರಕಿ ಸಮ ಸಮಾಜದ ನಿರ್ಮಾಣವಾಗಬೇಕೆಂಬುದು ಬಸವಣ್ಣನವರ ಆಶಯ. ಆದ್ದರಿಂದಲೇ 600 ವರ್ಷಕ್ಕಿಂತಲೂ ಹಳೆಯದಾದ ಲಂಡನ್ ಸಂಸತ್ತಿನಲ್ಲಿ 800 ವರ್ಷಕ್ಕೂ ಹಳೆಯದಾದ ಅನುಭವ ಮಂಟಪ, ವಚನಗಳು ಚರ್ಚೆಯಾಗುತ್ತಿವೆ. ಅವರ ತತ್ವ ಆದರ್ಶಗಳಂತೆ ನಾವು ನಡೆಯೋಣ ಎಂದರು.

ಶಾಸಕ ಯತೀಂದ್ರ ಮಾತನಾಡಿ, ಜಾತಿ ವ್ಯವಸ್ಥೆ ಅಸಮಾನತೆಯಿಂದ ಕೂಡಿದ್ದ ಸಮಾಜದಲ್ಲಿ ತಳ ಸಮುದಾಯದವರಿಗೆ ಲಿಂಗಧಾರಣೆ ಮೂಲಕ ಧರ್ಮ ಬೋಧನೆಗೆ ಅವಕಾಶ ಕಲ್ಪಿಸಿದ್ದಲ್ಲದೆ ಮಾನವೀಯತೆ, ಮನುಷ್ಯತ್ವಕ್ಕೆ ಬೆಲೆ ಕೊಟ್ಟು ತಮ್ಮ ವಚನ ಕ್ರಾಂತಿಗಳ ಮೂಲಕ ಬದಲಾವಣೆ ತರಲು ಶ್ರಮಿಸಿದವರು ಬಸವಣ್ಣನವರು ಎಂದರು.

ಇದಕ್ಕೂ ಮುನ್ನ ನಗರದ ಜ್ಯೂನಿಯರ್ ಕಾಲೇಜು ಮೈದಾನದಿಂದ ಬಸವಣ್ಣನವರ ಭಾವಚಿತ್ರವನ್ನು ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ನಟರಾಜ ಎಂಟರ್‌ಟೈನರ್‌ರವರು ನಡೆಸಿಕೊಟ್ಟ ಮನರಂಜನೆ ಕಾರ್ಯಕ್ರಮ ಸಭಿಕರ ಮನಸೂರೆಗೊಂಡಿತು. ಸಮಾರಂಭದಲ್ಲಿ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ಕಪಿಲೇಶ್, ಮಹದೇವಮ್ಮ ಎನ್.ಸಿ.ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಎಪಿಎಂಸಿ ಸದಸ್ಯ ಗುರುಸ್ವಾಮಿ, ತಹಸೀಲ್ದಾರ್ ಎಂ.ಶಿವಮೂರ್ತಿ, ತಾಪಂ ಇಓ ಎಚ್.ಜಿ.ಶ್ರೀನಿವಾಸ್, ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕೆಂಡಗಣ್ಣಪ್ಪ ಮಂಜುನಾಥ್, ಮಲ್ಲೇಶ್, ಕೋಮಲ, ನಂದಿನಿ ಸೇರಿದಂತೆ ಇತರರಿದ್ದರು.

ಬಸವಣ್ಣ ವಿಶ್ವಕಂಡ ಅತ್ಯುತ್ತಮ ತತ್ವಜ್ಞಾನಿ: ಅರ್ಜುನ್



ತಿ.ನರಸೀಪುರ, ಮೇ 3(ಎಸ್‌ಕೆ)– ಕಾಯಕಯೋಗಿ ಬಸವಣ್ಣ ವಿಶ್ವಕಂಡ ಅತ್ಯುತ್ತಮ ತತ್ವಜ್ಞಾನಿ ಎಂದು ಪುರಸಭಾ ಸದಸ್ಯ ಅರ್ಜುನ್ ಬಣ್ಣಿಸಿದರು.

ಪಟ್ಟಣದ ಪುರಸಭಾ ವ್ಯಾಪ್ತಿಯ ಗೋಪಾಲಪುರದ ಬಿಜೆಪಿ ಜನಸಂಪರ್ಕ ಕಚೇರಿ ಮುಂಭಾಗ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ಬಸವಣ್ಣ ಹಲವು ಸಾಮಾಜಿಕ ಸುಧಾರಣಾ ಕಾರ್ಯಗಳಿಂದಲೇ ಪ್ರಸಿದ್ಧಿಯಾದವರು. ಸಮಾಜ ಜಾತಿ ವ್ಯವಸ್ಥೆಯಿಂದ ಸಂಪೂರ್ಣ ಮುಕ್ತವಾಗಿರಬೇಕು. ಸಮಾನತೆ ಇರಬೇಕೆಂದು ಬಯಸಿದ ಅವರು ಅದಕ್ಕಾಗಿ ಶ್ರಮಿಸಿದರು. 12ನೇ ಶತಮಾನದ ಸಮಾಜ ಸುಧಾರಕ ಹಾಗೂ ತತ್ವಜ್ಞಾನಿಯಾಗಿದ್ದು, ಅವರ ಕಾಯಕವೇ ಕೈಲಾಸ ಎಂಬ ತತ್ವ ಇಂದಿಗೂ ಪ್ರಚಲಿತದಲ್ಲಿದ್ದು, ಬಸವಣ್ಣನವರ ಅನುಭವ ಮಂಟಪವೆಂಬ ಅದ್ಭುತ ಪರಿಕಲ್ಪನೆ ಇಂದಿಗೂ ಮಾದರಿ ಎಂದರು.

ಎಲ್ಲ ವರ್ಗದವರನ್ನು ಒಂದೆಡೆ ತರುವ ಪ್ರಯತ್ನದ ಭಾಗವಾಗಿ ಅನುಭವ ಮಂಟಪ ಪ್ರಾರಂಭಿಸಿದ್ದ ಬಸವಣ್ಣನವರು ಆ ಮೂಲಕ ಸಮಾಜದಲ್ಲಿ ಬೇರೂರಿದ್ದ ಅಂಧಶ್ರದ್ಧೆ ಮತ್ತು ತಾರತಮ್ಯ ದೂರ ಮಾಡಿದ್ದರು. ಬಸವಣ್ಣರವರ ಆದರ್ಶಗಳು ಇಂದಿಗೂ ಜೀವಂತವಾಗಿದ್ದು, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಬಸವಣ್ಣ ತಮ್ಮ ವಚನದಲ್ಲಿ ಒಬ್ಬ ಮನುಷ್ಯ ಸುಮ್ಮನೇ ಕೂರದೇ ಕಾಯಕದಲ್ಲಿ ನಿರತರಾಗಿರಬೇಕು ಎಂದು ಹೇಳಿದ್ದು, ಸರ್ಕಾರ ಕಾಯಕವೇ ಕೈಲಾಸ ಎಂಬ ವಚನದನ್ವಯ ನಡೆದು ಸರ್ಕಾರಿ ಕಚೇರಿಗಳಿಗೆ ರಜೆ ಘೋಷಣೆ ಮಾಡದೇ ಕಾರ್ಯ ನಿರ್ವಹಿಸಿದ್ದರೆ ಅವರಿಗೆ ಗೌರವ ಸಲ್ಲಿಸಿದಂತಾಗುತ್ತಿತ್ತು ಎಂದು ಅಭಿಪ್ರಾಯಿಸಿದರು.

ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಬಾಬುಜಗಜೀವನ ರಾಂ ಸಂಘದ ಅಧ್ಯಕ್ಷ ಶಂಕರ್, ಕಾರ್ಯದರ್ಶಿ ಗೋವಿಂದರಾಜು, ಎಸ್‌ಸಿ ಮೋರ್ಚಾ ಮಾಜಿ ಅಧ್ಯಕ್ಷ ಸಿದ್ದರಾಜು, ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವರಾಜ್, ಪ್ರಕಾಶ್, ಮುಖಂಡರಾದ ವೆಂಕಟೇಶ್, ಸಂದೀಪ್, ಪ್ರದೀಪ, ರಾಜೇಶ್, ಶ್ರೀನಿವಾಸ್, ವೇಣುಗೋಪಾಲ್, ಸಂತೋಷ್, ಮಹದೇವ, ನಿತಿನ್ ಮತ್ತಿತರರಿದ್ದರು.

ಜ್ಞಾನದ ದೀವಿಗೆ ಹಚ್ಚಿದ ಮಹಾನ್ ಮಾನವತಾವಾದಿ ಬಸವಣ್ಣ



ಹುಣಸೂರು, ಮೇ 3– ಜಗಜ್ಯೋತಿ, ಭಕ್ತಿ ಭಂಡಾರಿ, ವಿಶ್ವಗುರು ಬಸವಣ್ಣನವರು ತಮ್ಮ ವಚನಗಳ ಮೂಲಕವೇ ಸಮಾಜದಲ್ಲಿ ಬಹುದೊಡ್ಡ ಬದಲಾವಣೆ ತರಲು ಬಯಸಿದ, ಜನರಲ್ಲಿ ಜ್ಞಾನದ ದೀವಿಗೆ ಹಚ್ಚಿದ ಮಹಾನ್ ಮಾನವತಾವಾದಿ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ತಾಲೂಕು ಆಡಳಿತದಿಂದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಅವರು ಮಾತನಾಡಿದರು. ಸಮಾಜದಲ್ಲಿ ಬಹುದೊಡ್ಡ ಬದಲಾವಣೆಯ ಹೊಸ ಚಿಂತನೆ ರೂಪುಗೊಂಡ ಕಾಲವದು. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ವಿಶಿಷ್ಟವಾದ ಕಾಲಘಟ್ಟವಾಗಿತ್ತು. ಸಾಮಾಜಿಕ ಅಸಮಾನತೆ, ಜಾತಿ ವ್ಯವಸ್ಥೆ ಸೇರಿದಂತೆ ಹಲವು ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿದ್ದ ಈ ಕಾಲದಲ್ಲಿ ವಚನಕಾರರು ತಮ್ಮ ಸರಳ ವಚನಗಳ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ್ದರು. ಜಾತಿ ಹಂಗಿಲ್ಲದೆ ಎಲ್ಲಾ ವರ್ಗದ ವಚನಕಾರರು ವಚನಗಳ ಮೂಲಕ ತಮ್ಮ ಹೊಸ ಚಿಂತನೆಗಳನ್ನು ಕಟ್ಟಿಕೊಡುತ್ತಿದ್ದರು. ಈ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದರು ಎಂದರು.

12ನೇ ಶತಮಾನದ ಬಹುದೊಡ್ಡ ಸಮಾಜ ಸುಧಾರಕರು ಬಸವಣ್ಣನವರು. ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳವಳಿಯಾಗಿ ರೂಪುಗೊಂಡಿತ್ತು ಇವರ ತತ್ವ ಆದರ್ಶಗಳು, ಚಿಂತನೆಗಳು ಇಂದಿಗೂ ಪ್ರಸ್ತುತ. ಇದು ಜೀವನ ಪಾಠವೂ ಹೌದು. ವಿಶ್ವಗುರು ಬಸವಣ್ಣನವರ ಆದರ್ಶತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಈ ವೇಳೆ ತಹಸೀಲ್ದಾರ್ ಡಾ.ಅಶೋಕ್, ಇಓ ಗಿರೀಶ್ ಇದ್ದರು.

ಸರಗೂರಲ್ಲಿ ಅದ್ಧೂರಿ ಬಸವ ಜಯಂತಿ



ಸರಗೂರು, ಮೇ 3– ವೀರಶೈವ ಲಿಂಗಾಯಿತ ಸಮಾಜದಿಂದ ಜಗಜ್ಯೋತಿ ಶ್ರೀಬಸವೇಶ್ವರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಬಸವ ಜಯಂತಿ ಅಂಗವಾಗಿ ಪಟ್ಟಣದ ಬಸವೇಶ್ವರ ದೇವಸ್ಥಾನವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ಮುಂಜಾನೆಯಿಂದಲೇ ಹೋಮ ಹವನ ನೆರವೇರಿಸಲಾಯಿತು. ಬಳಿಕ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ಶ್ರೀಪಾರ್ವತಿ ಸಮೇತ ಚಂದ್ರಮೌಳೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಪೂರ್ಣಕುಂಭ ಕಳಸ, ಸತ್ತಿಗೆ ಸೇರಿದಂತೆ ವಿವಿಧ ಕಲಾ ಪ್ರಕಾರಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಈ ವೇಳೆ ಅರ್ಚಕ ರವಿಶಾಸ್ತ್ರಿ, ಮಹದೇವಣ್ಣ, ವಿರೂಪಾಕ್ಷ, ವಿನಯ್, ವೀರಶೈವ ಲಿಂಗಾಯಿತ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಉಪಾಧ್ಯಕ್ಷ ನಾಗರಾಜು, ಕಾರ್ಯದರ್ಶಿ ಲೋಕೇಶ್ ಮೂರ್ತಿ, ಸಹ ಕಾರ್ಯದರ್ಶಿ ಅವಿನಾಶ್, ಖಜಾಂಚಿ ಚಂದ್ರಣ್ಣ, ಪಪಂ ಸದಸ್ಯ ವೀರೇಶ್, ಎಂ.ಕೆಂಡಗಣ್ಣಸ್ವಾಮಿ, ಶ್ರೀಕಂಠಸ್ವಾಮಿ, ಬಿ.ಸಿ.ಎಂ.ಸ್ವಾಮಿ, ಜಯಣ್ಣ, ಗಣೇಶ್, ನಿರಂಜನ್, ಸೋಮಶೇಖರ್, ಲೋಕೇಶ್, ಯತೀಶ್ ಕುಮಾರ್, ರುದ್ರೇಶ್, ಮಹೇಶ್, ಮರಿಯಣ್ಣ, ವಿನಯ್, ಶಾಂತ, ರಕ್ಷಿತ, ಪ್ರಮೋದ್ ಇನ್ನಿತರರಿದ್ದರು.



ಕೆ.ಆರ್.ನಗರದ ಬಸವೇಶ್ವರ ಬ್ಲಾಕ್‌ನಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಸಾ.ರಾ.ಮಹೇಶ್ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಬಸವ ಜಯಂತಿ ಶುಭಾಶಯ ಕೋರಿದರು.

ಬಸವಣ್ಣನವರ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ



ಮಲ್ಲುಂಡಿ, ಮೇ 3(ಚನ್ನಪ್ಪ)– ಎಲ್ಲಾ ವರ್ಗದ ಪ್ರಮುಖರನ್ನು ಸೇರಿಸಿ ಅನುಭವ ಮಂಟಪದಲ್ಲಿ ಸಮಾನತೆ ಸಾರಿದ ಮಹಾನ್ ವ್ಯಕ್ತಿ ಬಸವಣ್ಣ ಎಂದು ಗ್ರಾಪಂ ಅಧ್ಯಕ್ಷ ರಂಗರಾಮು ಹೇಳಿದರು.

ಸಮೀಪದ ಹಗಿನವಾಳು ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಾಗ ಮಾತ್ರ ಅಸಮಾನತೆ ಹೋಗಲಾಡಿಸಲು ಸಾಧ್ಯ ಎಂದು ತಿಳಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷೆ ಸಾಕಮ್ಮ, ಪಿಡಿಓ ರಾಘವೇಂದ್ರ, ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಮದನ್ ಕುಮಾರ್, ಮಹದೇವಯ್ಯ ಮತ್ತಿತರರು ಹಾಜರಿದ್ದರು.

ಬಸವಣ್ಣನವರ ಅನುಭವ ಮಂಟಪ ಪರಿಕಲ್ಪನೆ ನಿಜಕ್ಕೂ ಅದ್ಭುತ



ತಿ.ನರಸೀಪುರ, ಮೇ 3(ಎಸ್‌ಕೆ)– ಹೆಣ್ಣು ಮಕ್ಕಳಿಗೂ ಸಮಾನ ಶಿಕ್ಷಣ ನೀಡಬೇಕೆನ್ನುವ ಬಸವಣ್ಣನವರ ಪರಿಕಲ್ಪನೆ ಪ್ರಸ್ತುತ ಹೆಣ್ಣು ಮಕ್ಕಳು ಸಾಧನೆಯತ್ತ ಸಾಗಲು ಸಹಕಾರಿಯಾಗಿದೆ ಎಂದು ಪುರಸಭಾ ಸದಸ್ಯ ಎಸ್.ಕೆ.ಕಿರಣ್ ತಿಳಿಸಿದರು.

ಪಟ್ಟಣದ ವಿವೇಕಾನಂದನಗರದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಅವರು ಮಾತನಾಡಿದರು.

ಹೆಣ್ಣು ಮಕ್ಕಳಿಗೂ ಸಮಾನ ಶಿಕ್ಷಣ ನೀಡಬೇಕೆಂಬ ಅವರ ಪರಿಕಲ್ಪನೆಯಿಂದಾಗಿ ವಿಶ್ವಗುರು ಬಸವಣ್ಣನವರು ಇಂದಿಗೂ ಜನಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ದೇವರು ಮತ್ತು ಜೀವನ ನೋಡುವ ಹೊಸ ಮಾರ್ಗ ವ್ಯಾಖ್ಯಾನಿಸುವ ಬಸವಣ್ಣನವರ ವಚನಗಳು ಇಂದಿಗೂ ಅಭಿವ್ಯಕ್ತಿ ಕಂಡುಕೊಂಡಿದೆ ಹಾಗೂ ಜನರಿಗೆ ಹೊಸ ಹುರುಪನ್ನು ನೀಡುತ್ತದೆ. ಬಸವಣ್ಣನವರ ಅನುಭವ ಮಂಟಪ ಪರಿಕಲ್ಪನೆ ನಿಜಕ್ಕೂ ಮಾದರಿಯಾಗಿದ್ದು, ಇದು ಎಲ್ಲಾ ವರ್ಗದವರನ್ನು ಒಂದೆಡೆ ತರುವ ಪ್ರಯತ್ನವಾಗಿತ್ತು ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಬಸವಣ್ಣನವರು ತಮ್ಮ ಅನುಭವ ಮಂಟಪದಲ್ಲಿ ಸಮಾಜದಲ್ಲಿ ಬೇರೂರಿದ್ದ ತಾರತಮ್ಯ, ಅಂಧ ಶ್ರದ್ಧೆಯನ್ನು ದೂರ ಮಾಡುವ ಕಾರ್ಯ ಮಾಡಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಮೇಲೇರಲು ಸಮಾನ ಅವಕಾಶ ನೀಡಿದ ಬಸವಣ್ಣನವರ ತತ್ವಾದರ್ಶಗಳು ಇಂದಿಗೂ ಮಾದರಿಯಾಗಿವೆ ಎಂದರು.

ಈ ವೇಳೆ ಮಹಾಸಭಾ ಪ್ರಧಾನ ಕಾರ್ಯದರ್ಶಿ ಪರಶಿವಮೂರ್ತಿ, ಪುರಸಭಾ ಸದಸ್ಯ ರೂಪಾ, ಮುಖಂಡರಾದ ನ್ಯಾಯಬೆಲೆ ಅಂಗಡಿ ವೀರೇಶ್, ಎನ್.ಲೋಕೇಶ್, ಗೌರಿಶಂಕರ್, ರಮೇಶ್, ರೈತ ಮುಖಂಡ ಸಿದ್ದೇಶ್, ನಾಗರಾಜಪ್ಪ, ಮಲ್ಲಣ್ಣ, ರಘು, ಬಸವರಾಜು, ಶಿವಕುಮಾರ್, ನಾಗಭೂಷಣ, ಮಹದೇವಸ್ವಾಮಿ, ರಾಜಶೇಖರ್, ಬಿಜೆಪಿ ಯುವ ಘಟಕದ ಅಧ್ಯಕ್ಷ ಶಿವು, ಮಹದೇವಪ್ಪ, ಮಲ್ಲಣ್ಣ, ಪ್ರಭುಸ್ವಾಮಿ ಮತ್ತಿತರರಿದ್ದರು.




ನಂಜನಗೂಡು ತಾಲೂಕಿನ ಹೆಡತಲೆ ಗ್ರಾಪಂನಲ್ಲಿ ಬಸವ ಜಯಂತಿ ಆಚರಿಸಲಾಯಿತು. ಅಧ್ಯಕ್ಷೆ ಗೀತಾ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಉಪಾಧ್ಯಕ್ಷ ಮಣಿಕಂಠ, ಸದಸ್ಯರಾದ ಸವಿತಾ, ರತ್ನಮ್ಮ, ಮಹದೇವಸ್ವಾಮಿ, ರಾಜು, ಕಾರ್ಯದರ್ಶಿ ರಂಗಸ್ವಾಮಿ, ಲೆಕ್ಕ ಪರಿಶೋಧಕ ಮಹೇಶ್ ಮತ್ತಿತರರಿದ್ದರು.



ಬಸವ ಜಯಂತಿ ಅಂಗವಾಗಿ ಕೆ.ಆರ್.ನಗರದ ಆಂಜನೇಯ ಬ್ಲಾಕ್‌ನಲ್ಲಿ ನಡೆದ ದನಗಳ ಮೆರವಣಿಗೆಯಲ್ಲಿ ಶಾಸಕ ಸಾ.ರಾ. ಮಹೇಶ್ ಪಾಲ್ಗೊಂಡಿದ್ದರು.

ಕಾಂಗ್ರೆಸ್, ಬಿಜೆಪಿ ತೊರೆದು ಹಲವು ಮುಖಂಡರು ಜೆಡಿಎಸ್ ಸೇರ್ಪಡೆ

ಹೆಚ್.ಡಿ.ಕೋಟೆ, ಮೇ 3(ಮಂಜು)– ಬಸವ ಜಯಂತಿ ಶುಭ ದಿನದಂದು ಕಾಂಗ್ರೆಸ್, ಬಿಜೆಪಿಯ ಹಲವು ಮುಖಂಡರು ಪಕ್ಷ ತೊರೆದು ಜೆಡಿಎಸ್ ಸೇರ್ಪಡೆಯಾಗುತ್ತಿರುವುದು ಸಂತಸದ ವಿಚಾರ ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ತಿಳಿಸಿದರು.



ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ತುಂಬಸೋಗೆ ಗ್ರಾಪಂ ವ್ಯಾಪ್ತಿಯ ಜಕ್ಕಳ್ಳಿ, ಚೌಡಳ್ಳಿ, ತುಂಬಸೋಗೆ ಗ್ರಾಮಗಳ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಅನೇಕ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಕಳೆದ ಚುನಾವಣೆಯಲ್ಲಿ ಜೆಡಿಎಸ್‌ಗೆ ಸೇರ್ಪಡೆಯಾಗುವಂತೆ ಕಾರ್ಯಕರ್ತರು, ಮುಖಂಡರು ಮನೆಮನೆಗೆ ತೆರಳಿ ಮನವಿ ಮಾಡಿದರೂ, ಯಾರೂ ಪಕ್ಷಕ್ಕೆ ಸೇರ್ಪಡೆಯಾಗಿರಲಿಲ್ಲ. ಆದರೆ ಈ ಬಾರಿ ಕಾಂಗ್ರೆಸ್, ಬಿಜೆಪಿಯಲ್ಲಿದ್ದರೇ ತಾಲೂಕಿನ ಅಭಿವೃದ್ಧಿ ಅಸಾಧ್ಯ ಎಂಬುದನ್ನು ಅರಿತು ಮುಂಬರುವ ಚುನಾವಣೆಯಲ್ಲಿ ತಾಲೂಕಿನಲ್ಲಿ ಜೆಡಿಎಸ್ ಅನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ಮಾಡಲು ತಾಲೂಕಿನ ನೂರಾರು ಮುಖಂಡರು, ಕಾರ್ಯಕರ್ತರು ಸ್ವಯಂಪ್ರೇರಿತರಾಗಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ಈ ವೇಳೆ ಕೋಟೆ, ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಉಪಾಧ್ಯಕ್ಷ ಶಫಿ, ಕೋಟೆ ಸರಗೂರು ಮಹಿಳಾ ಅಧ್ಯಕ್ಷರಾದ ಗಾಯತ್ರಿ, ಸವಿತಾ, ಮುಖಂಡರಾದ ನರಸಿಂಹೇಗೌಡ, ಲಿಂಗೇಗೌಡ, ಚಾ.ನಂಜುಂಡಮೂರ್ತಿ, ಮಂಚಯ್ಯ, ಶಾಂತ, ಗುರುಸ್ವಾಮಿ, ಮಹೇಂದ್ರ, ನಾಗರಾಜು, ನಾಗನಾಯ್ಕ, ಮಹದೇವಪ್ಪ, ವೇಣು, ಶಿವು, ರಾಜು, ಶ್ರೀನಿವಾಸ್ ಇನ್ನಿತರರಿದ್ದರು.

> **"** ಜೆಡಿಎಸ್‌ಗೆ ಸೇರ್ಪಡೆಯಾಗಿರುವ ನೂತನ ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟನೆಗೆ ಮುಂದಾಗಬೇಕು. ಮಾಜಿ ಸಿಎಂ ಕುಮಾರಸ್ವಾಮಿ ಅವರ ಆದೇಶದಂತೆ ಹೆಚ್ಚು ಪಕ್ಷ ಸಂಘಟನೆ ಮಾಡುವ ಮೂಲಕ ತಾಲೂಕನ್ನು ಜೆಡಿಎಸ್ ಭದ್ರಕೋಟೆಯನ್ನಾಗಿಸಲು ಶ್ರಮಿಸಿ.
>
> -ಜಯಪ್ರಕಾಶ್ ಚಿಕ್ಕಣ್ಣ, ಜೆಡಿಎಸ್ ಮುಖಂಡ.

ಗುಜರಾತ್ ವಿರುದ್ಧ ಪಂಜಾಬ್‌ಗೆ ಭರ್ಜರಿ ಜಯ



ಮುಂಬೈ, ಮೇ 3– ಶಿಖರ್ ಧವನ್ ಅವರ ಭರ್ಜರಿ ಅರ್ಧಶತಕ ಹಾಗೂ ಕಗಿಸೊ ರಬಾಡ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಪಂಜಾಬ್ ಕಿಂಗ್ಸ್ ಗುಜರಾತ್ ಟೈಟನ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 143 ರನ್ ಗಳಿಸಿತು. ತಂಡದ ಪರ ಸಾಯಿ ಸುದರ್ಶನ್ 65, ವೃದ್ಧಿಮಾನ್ ಸಾಹಾ 21, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯಾ ತಲಾ 11 ರನ್ ಗಳಿಸಿದರು. ಪಂಜಾಬ್ ಪರ ಕಗಿಸೊ ರಬಾಡ 4, ಅರ್ಶದೀಪ್ ಸಿಂಗ್, ರಿಷಿ ಧವನ್ ಹಾಗೂ ಲಿವಿಂಗ್ ಸ್ಟೋನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ನಂತರ ಗುರಿ ಬೆನ್ನತ್ತಿದ ಪಂಜಾಬ್ ಕೇವಲ 16 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 145 ರನ್ ಗಳಿಸುವ ಮೂಲಕ ಜಯದ ನಗೆ ಬೀರಿತು. ತಂಡದ ಪರ ಶಿಖರ್ ಧವನ್ 8 ಬೌಂಡರಿ, 1 ಸಿಕ್ಸರ್ ಒಳಗೊಂಡ 62 ರನ್ ಗಳಿಸಿ ಅಜೇಯರಾಗಿ ಉಳಿದರೆ ಲಿವಿಂಗ್ ಸ್ಟೋನ್ 2 ಬೌಂಡರಿ, 3 ಸಿಕ್ಸರ್ ಒಳಗೊಂಡ 30 ರನ್ ಪೇರಿಸಿದರು. ಉಳಿದಂತೆ ಭಾನುಕಾ ರಾಜಪಕ್ಷ 40 ರನ್ ಗಳಿಸಿದರು. ಗುಜರಾತ್ ಪರ ಮೊಹಮ್ಮದ್ ಶಮಿ ಹಾಗೂ ಫರ್ಗ್ಯೂಸನ್ ತಲಾ ಒಂದೊಂದು ವಿಕೆಟ್ ಪಡೆದರು. ರಬಾಡ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಮೂಗೂರು ಗ್ರಾಪಂ ಸಭಾಂಗಣದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಗಣ್ಯರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ತಾಪಂ ಮಾಜಿ ಸದಸ್ಯ ಎಂ.ಚಂದ್ರಶೇಖರ್, ಗ್ರಾಪಂ ಉಪಾಧ್ಯಕ್ಷ ಜಿ.ಎಸ್.ಮೋಹನ್ ಕುಮಾರ್, ಪಿಡಿಓ ಎಂ.ಎನ್.ಪೂರ್ಣಿಮಾ, ಲೆಕ್ಕ ಸಹಾಯಕ ಜವರೇಗೌಡ, ಶಶಿಕುಮಾರ್, ರವಿಂದ್, ಗ್ರಾಪಂ ಸದಸ್ಯ ಗೌರೀಶ್, ಜಿ.ಪಿ.ಪುಟ್ಟಮಾದಯ್ಯ, ಶಿವಣ್ಣ, ಸವಿತಾ, ತಂಗಮ್ಮ, ಚೇತನ್, ಗ್ರಾಪಂ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು.

ಸಂಕುಚಿತ ಮನೋಭಾವನೆ ತೊರೆದರಷ್ಟೇ ಬಸವಣ್ಣರ ಸಮ ಸಮಾಜ ಸಾಧ್ಯ

ಶಾಸಕ ಎಸ್.ಎ.ರಾಮದಾಸ್ ಅಭಿಮತ



ಮೈಸೂರು, ಮೇ 3(ಎಂಕೆ)– ಬಸವ ತತ್ವ ಮಾತಿಗಷ್ಟೇ ಇದೆಯೇ ಹೊರತು ಅನುಸರಣೆಗಲ್ಲ. ನಮ್ಮಲ್ಲಿನ ಸಂಕುಚಿತ ಮನೋಭಾವನೆ ದೂರಾದರಷ್ಟೇ ಸಮ ಸಮಾಜ ನಿರ್ಮಾಣ ಸಾಧ್ಯ ಎಂದು ಶಾಸಕ ಎಸ್.ಎ.ರಾಮದಾಸ್ ಹೇಳಿದರು.

ನಗರದ ವಿದ್ಯಾರಣ್ಯಪುರಂನಲ್ಲಿರುವ ತಮ್ಮ ಕಚೇರಿ ಆವರಣದಲ್ಲಿ ಬಿಜೆಪಿ ಕೆ.ಆರ್.ಕ್ಷೇತ್ರದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಅಕ್ಷಯ ತೃತೀಯ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಮನೆಯ ಮಕ್ಕಳು ಬೇರೆ ಜಾತಿಯ ಮಕ್ಕಳನ್ನು ಇಷ್ಟಪಟ್ಟರೆ ಸಾಕು ಒದ್ದಾಡುತ್ತೇವೆ. ಆದರೆ ನೂರಾರು ವರ್ಷಗಳ ಹಿಂದೆಯೇ ಅಂತರಜಾತಿ ವಿವಾಹ ಮಾಡಿಸುವ ಮೂಲಕ ಕ್ರಾಂತಿ ಮಾಡಿದವರು ಬಸವಣ್ಣ. ಅವರು ತೋರಿದ ದಾರಿಯಲ್ಲಿ ನಡೆದರಷ್ಟೇ ಎಲ್ಲರೂ ಒಂದೇ ಎಂಬ ಭಾವನೆ ಮೂಡುವುದು ಎಂದು ತಿಳಿಸಿದರು.

ಜಾತಿಗಿಂತ ವೃತ್ತಿ ಗೌರವವೇ ದೊಡ್ಡದು ಎಂಬುದನ್ನು ವಿಶ್ವಕ್ಕೆ ತಿಳಿಸಿಕೊಟ್ಟ ಬಸವಣ್ಣನವರು ಅನುಭವ ಮಂಟಪದ ಮೂಲಕ ಎಲ್ಲಾ ಜಾತಿ–ಸಮುದಾಯದವರನ್ನು ಒಂದೂಗೂಡಿಸಿದ ಮೊದಲ ವ್ಯಕ್ತಿ. ಹೆಣ್ಣುಮಕ್ಕಳಿಗೆ ಉಪನಯನ ಮಾಡಬಾರದೇಕೇ ಎಂದು ಚಿಕ್ಕವಯಸ್ಸಿನಲ್ಲೇ ಪ್ರಶ್ನಿಸುವ ಮೂಲಕ ಲಿಂಗಭೇದದ ವಿರುದ್ಧ ಧ್ವನಿ ಎತ್ತಿದ ಮಹಾನ್ ಚೇತನ ಬಸವೇಶ್ವರರು ಎಂದು ತಿಳಿಸಿಕೊಟ್ಟರು.

ನಮ್ಮಲ್ಲಿನ ಸಂಕುಚಿತ ಭಾವನೆ ಹಾಗೂ ರಾಜಕೀಯ ಮತ ಬ್ಯಾಂಕ್‌ನಿಂದಾಗಿ ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್, ಶಂಕರಚಾರ್ಯರಂತಹ ಮಹಾನ್ ವ್ಯಕ್ತಿಗಳನ್ನು ಜಾತಿಗೆ ಸೀಮಿತಗೊಳಿಸಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದ ಶಾಸಕರು, ಎಲ್ಲಾ ಸಮಾಜದವರು ಒಟ್ಟಿಗೆ ಕೂತು ಊಟ ಮಾಡಬೇಕು ಎಂದು ದಾಸೋಹ ಪದ್ಧತಿಯನ್ನು 12 ನೇ ಶತಮಾನದಲ್ಲಿಯೇ ಪ್ರಾರಂಭ ಮಾಡಿದವರು ಬಸವಣ್ಣನವರು. 'ನೀನು ಕಾಯಕ ಮಾಡು ಕಾಯಕದಲ್ಲೇ ಕೈಲಾಸವನ್ನು ನೋಡು' ಎಂಬ ಅವರ ವಚನವನ್ನು ಓದಿದರೆ ಸಾಲದು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಡೆದರಷ್ಟೇ ಅದಕ್ಕೆ ಒಂದು ಅರ್ಥ ಬರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಮಕ್ಕಳಿಗೆ ಪ್ರತಿನಿತ್ಯ ವಚನಗಳನ್ನು ಹೇಳಿಕೊಡಬೇಕು ಎಂದರು.

ಇದೇ ವೇಳೆ ಕೆ.ಆರ್.ಆಸ್ಪತ್ರೆಯ ವೈದ್ಯ ಡಾ.ಬಸವರಾಜು, ಶುಶ್ರೂಷಕಿ ಸಿ.ಆರ್.ರಾಣಿ, ನೀಲಮ್ಮ, ಲೇಖಕಿ ನೀಲಾಂಬಿಕೆ, ಎಸಿಪಿ ಗಂಗಾಧರಸ್ವಾಮಿ ಅವರಿಗೆ 'ಬಸವ ತತ್ವ ಪರಿಪಾಲಕ' ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಬಿಜೆಪಿ ಕೆ.ಆರ್. ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿಗಳಾದ ಓಂ.ಶ್ರೀನಿವಾಸ್, ನಾಗೇಂದ್ರ ಕುಮಾರ್, ಪ್ರಸಾದ್ ಬಾಬು, ಉದ್ಯಮಿ ಪ್ರಶಾಂತ್, ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ರೂಪ, ಶಾಂತಮ್ಮ, ಸೌಮ್ಯ, ಮುಖಂಡರಾದ ವಿನಯ್ ಪಾಂಚಜನ್ಯ, ಮನು ಶೈವ(ಅಪ್ಪಿ), ಮುರುಳಿ, ರವಿ, ಪ್ರದೀಪ್ ಪ್ರಸಾದ್, ಮಂಜು, ರಮೇಶ್, ಶಿವಣ್ಣ, ಶಿವಪ್ರಸಾದ್, ಸೋಮು, ಅಶೋಕ್, ಚಂದ್ರಶೇಖರ್, ಸದಾಶಿವ ಮತ್ತಿತರರಿದ್ದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈ.ನ.ಪ್ರಾ/ವಕ–4/2022–23 ದಿನಾಂಕ:20.04.2022

"ಪತ್ರಿಕಾ ಪ್ರಕಟಣೆ"
ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯಿಂದ ಜಯಲಕ್ಷ್ಮಿಪುರಂ 2ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ:50, ಅಳತೆ 110 *60 ರ ನಿವೇಶನವನ್ನು ಶ್ರೀ.ಹೆಚ್.ಹಾಲಪ್ಪ ರವರಿಗೆ ಮಂಜೂರು ಮಾಡಿದ್ದು, ನಂತರ ಸದರಿ ನಿವೇಶನವು ದಿ: 24–07–1958 ರಂದು ಬಿ.ಸಿ.ವೆಸ್ಲಿ ರವರಿಗೆ ವರ್ಗಾವಣೆಯಾಗಿರುತ್ತದೆ. ನಿವೇಶನದ ವರ್ಗಾವಣೆದಾರರಾದ ಶ್ರೀ.ಬಿ.ಸಿ.ವೆಸ್ಲಿ ರವರು ಮೃತರಾಗಿರುವುದರಿಂದ ಇವರ ಪತ್ನಿಯಾದ ಶ್ರೀಮತಿ ಲಲಿತ ಕುಮಾರಿ ವೆಸ್ಲಿ ರವರಿಗೆ ದಿ: 21–02–1990 ರಂದು ನಗರಪಾಲಿಕೆಯಲ್ಲಿ ಖಾತಾ ವರ್ಗಾಯಿಸಿಕೊಂಡಿರುತ್ತಾರೆ. ಇವರು ಸಹ ಮರಣ ಹೊಂದಿರುತ್ತಾರೆ.

ನಂತರ ದಿ: 04–06–2016 ರಂದು ಲೇಟ್ ಬಿ.ವೆಸ್ಲಿ ಹಾಗೂ ಲೇಟ್ ಲಲಿತ ಕುಮಾರಿ ವೆಸ್ಲಿ ರವರ ಮಕ್ಕಳಾದ 1. Reginald Wesley, 2. Dennis Vishwapremi Wesley, 3. Winston Suresh Wesley, 4. Josep Sandesh Wesley ರವರುಗಳು ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ. ನಂತರ ಸದರಿ 4 ಜನರು ಜಂಟಿಯಾಗಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ಖಾತಾವರ್ಗಾವಣೆ ಪತ್ರ ಪಡೆದಿರುತ್ತಾರೆ. ಇವರುಗಳು ಪ್ರಾಧಿಕಾರಕ್ಕೆ ಜಂಟಿ ಖಾತಾ ವರ್ಗಾವಣೆ ಹಾಗೂ ಕ್ರಯಪತ್ರ ಕೋರಿ ಮನವಿ ಸಲ್ಲಿಸಿರುತ್ತಾರೆ.

1. Reginald Wesley, 2. Dennis Vishwapremi Wesley, 3. Winston Suresh Wesley, 4. Josep Sandesh Wesley ರವರು ನಿವೇಶನ / ಮನೆಯ ವರ್ಗಾವಣೆ / ಹಕ್ಕುಪತ್ರ ಪಡೆಯಲು ಪ್ರಾಧಿಕಾರವನ್ನು ಕೋರಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಮಾಡಿ ಮತ್ತು ಹಕ್ಕುಪತ್ರವನ್ನು ನೀಡಬೇಕಾಗಿದ್ದು, ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ರಾಜ್ಯ ಮಟ್ಟದ ಪತ್ರಿಕೆಯಲ್ಲಿ ಹಾಗೂ ಸ್ಥಳೀಯ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಇಲ್ಲದಿದ್ದಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಚೇರಿ–4, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.